# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಅಕ್ಟೋಬರ್ 28 ಮಂಗಳವಾರ 2025

ಸಂಪುಟ: 46 | ಸಂಚಿಕೆ: 190 | ಪುಟಗಳು: 12

₹4



ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

## ವನತೋಟಗಾರಿಕೆಗೆ ಆದ್ಯತೆ ನೀಡಲು ಮನವಿ



ವನತೋಟಗಾರಿಕೆಗೆ ಆದ್ಯತೆ ನೀಡುವಂತೆ ಅರಣ್ಯ ಇಲಾಖೆ ನಿವೃತ್ತ ಕಾರ್ಯದರ್ಶಿ ಎ.ಸಿ.ಲಕ್ಷ್ಮಣ್, ಸಚಿವ ಈಶ್ವರ ಖಂಡ್ರೆ ಅವರಲ್ಲಿ ಮನವಿ ಮಾಡಿದರು.

ಮೈಸೂರು, ಅ. 27– ವನ ತೋಟಗಾರಿಕೆಗೆ ಆದ್ಯತೆ ನೀಡುವಂತೆ, ರಾಜ್ಯ ಸರ್ಕಾರದ ಅರಣ್ಯ ಇಲಾಖೆಯ ನಿವೃತ್ತ ಕಾರ್ಯದರ್ಶಿ ಎ.ಸಿ.ಲಕ್ಷ್ಮಣ್ ಅವರು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಲ್ಲಿ ಮನವಿ ಮಾಡಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಬರೆದಿರುವ 'ತಂಬಾಕು ಬಿಟ್ಟಾಕಿ ಹೆಬ್ಬೇವು ಬೆಳೆದೇವು' ಕೃತಿಯನ್ನು ಸಚಿವರಿಗೆ ನೀಡಿ ಮಾತನಾಡಿದ ಅವರು, ಆ ಮೂಲಕ ನಮ್ಮ ರೈತರನ್ನು ಅತ್ಯಂತ ಶ್ರೀಮಂತರನ್ನಾಗಿ ಮಾಡಬಹುದು ಎಂದರು.

ಅರಣ್ಯದ ವಿಚಾರದಲ್ಲಿ ಅಮೋಘ ವರ್ಷ, ಇಮ್ಮಡಿ ಪುಲಿಕೇಶಿ, ಗಂಗರು, ಹೊಯ್ಸಳರು, ವಿಜಯನಗರ ಅರಸರು ಹಾಗೂ ಮೈಸೂರಿನ ಒಡೆಯರ್ ಅವರ ಆಡಳಿತದಲ್ಲಿ ಕರ್ನಾಟಕ ಅತ್ಯಂತ ಸಂಪದ್ಭರಿತ ರಾಜ್ಯವಾಗಿತ್ತು. ಆಡಳಿತ ವರ್ಗ ಒಂದು ಸಾವಿರ ದಿನಗಳು ಪಾರದರ್ಶಕತೆ ಹಾಗೂ ಬದ್ಧತೆಯಿಂದ ಕೆಲಸ ಮಾಡಿದಲ್ಲಿ ನಮ್ಮ ಗುರಿಯನ್ನು ಸಾಧಿಸಬಹುದು ಎಂದು ಮನವರಿಕೆ ಮಾಡಿದರು.

ಈ ಬಗ್ಗೆ ಹೆಚ್ಚಿನ ಚರ್ಚೆಗೆ ಬೆಂಗಳೂರಿನಲ್ಲಿ ತಮ್ಮನ್ನು ಭೇಟಿ ಮಾಡುವಂತೆ ಎ.ಸಿ.ಲಕ್ಷ್ಮಣ್ ಅವರಿಗೆ ಸಚಿವರು ಮನವಿ ಮಾಡಿದರು.

## ಕರಾಟೆ ಸ್ಪರ್ಧೆ: ರಚಿತ್ ಮುರಾಳಗೆ ಪ್ರಥಮ ಸ್ಥಾನ




ಮೈಸೂರು,ಅ.27–ನಗರದ ಟೆರೇಷಿಯನ್ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ವಿ.ಎನ್.ಯೋಧ ಮಾರ್ಷಲ್ ಆರ್ಟ್ಸ್ ಅಕಾಡೆಮಿ ವತಿಯಿಂದ ಆಯೋಜಿಸಿದ್ದ ಮೈಸೂರು ಕಪ್ 5ನೇ ರಾಷ್ಟ್ರ ಮಟ್ಟದ ಮುಕ್ತ ಕರಾಟೆ ಪಂದ್ಯಾವಳಿಯಲ್ಲಿ 9 ವರ್ಷದ ಕಟಾ ವಿಭಾಗದಲ್ಲಿ ಸಂತ ಜೋಸೆಫರ ಶಾಲೆಯ 4ನೇ ತರಗತಿ ವಿದ್ಯಾರ್ಥಿ ರಚಿತ್ ಮುರಾಳ ಪ್ರಥಮ ಸ್ಥಾನ ಪಡೆದಿದ್ದಾನೆ. ಈತ ಮೈಸೂರಿನ ನಿವಾಸಿ ಪತ್ರಕರ್ತ ರುದ್ರಗೌಡ ಮುರಾಳ ಮತ್ತು ಮಾಂತಮ್ಮ ತಳೇವಾಡ ಅವರ ಪುತ್ರ.

## ಮೀನಾಕ್ಷಿಪುರದ ಕೆಆರ್‌ಎಸ್ ಹಿನ್ನೀರಲ್ಲಿ ನಿಷೇದಾಜ್ಞೆ ಮುಂದುವರಿಕೆ

- ಪ್ರವಾಸಿಗರು ಇತ್ತ ಸುಳಿಯದಂತೆ ಇಲವಾಲ ಪೊಲೀಸರ ಮನವಿ
- ಅರಿಯದೇ ಬಂದ ಪ್ರವಾಸಿಗರೊಂದಿಗೆ ಸ್ವಚ್ಛತಾ ಕಾರ್ಯ



ಮೀನಾಕ್ಷಿಪುರದ ಕೆಆರ್‌ಎಸ್ ಹಿನ್ನೀರಿನ ಬಳಿ ಇಲವಾಲ ಪೊಲೀಸರು, ಪ್ರವಾಸಿಗರು ಸ್ವಚ್ಛತಾ ಅಭಿಯಾನ ನಡೆಸಿದರು.

ಮೈಸೂರು,ಅ.27(ಎಸ್‌ಪಿಎನ್)– ಮೀನಾಕ್ಷಿಪುರದ ಬಳಿ ಕೆಆರ್‌ಎಸ್ ಹಿನ್ನೀರಿ ಭಾಗದಲ್ಲಿ ಕಳೆದ ತಿಂಗಳಿಂದ ನಿಷೇಧಾಜ್ಞೆ ಜಾರಿಯಿದ್ದು, ರಜಾದಿನಗಳಲ್ಲಿ ಮೋಜು–ಮಸ್ತಿಗಾಗಿ ಪ್ರವಾಸಿಗರು ಬರಬೇಡಿ ಎಂದು ಇಲವಾಲ ಠಾಣೆ ಸಬ್‌ಇನ್ಸ್‌ಪೆಕ್ಟರ್ ಮಹೇಂದ್ರ ಪ್ರವಾಸಿಗರಿಗೆ ಮನವಿ ಮಾಡಿದ್ದಾರೆ.

ಕಳೆದ ತಿಂಗಳೆ ನಿಷೇದಾಜ್ಞೆ ಜಾರಿಗೊಂಡಿರುವುದು ಅರಿವಿಲ್ಲದ ಪ್ರವಾಸಿಗರು ರಾಜ್ಯದ ನಾನಾಕಡೆಯಿಂದ ರಜಾದಿನಗಳಲ್ಲಿ ಇಲ್ಲಿಗೆ ಗುಂಪುಗುಂಪಾಗಿ ಬರುತ್ತಿದ್ದಾರೆ. ಅರಿವಿಲ್ಲದೆ ಬಂದಿದ್ದ ಪ್ರವಾಸಿಗರೊಂದಿಗೆ ಇಲವಾಲ ಪೊಲೀಸರು ಭಾನುವಾರ ಸ್ವಚ್ಛತಾ ಅಭಿಯಾನ ನಡೆಸಿದರು.

ಕೆಆರ್‌ಎಸ್ ಹಿನ್ನೀರಿನಲ್ಲಿ ಸಂಗ್ರಹವಾಗಿದ್ದ ಪ್ಲಾಸ್ಟಿಕ್ ತ್ಯಾಜ್ಯ ಸೇರಿದಂತೆ ಇತರೆ ಕಸ–ಕಡ್ಡಿಗಳನ್ನು ಸಂಗ್ರಹಿಸಿ ಹೊರ ಹಾಕಿದರು. ಅಂತೆಯೇ ಕಳೆದ ತಿಂಗಳು ಅನಧಿಕೃತ ಅಂಗಡಿಗಳನ್ನು ತೆರವುಗೊಳಿಸಿದ ಬಳಿಕ ಈ ಸ್ಥಳದಲ್ಲಿ ಬಿದ್ದಿದ್ದ ತ್ಯಾಜ್ಯ ಹಾಗೆಯೇ ಇತ್ತು. ಅದನ್ನೂ ತ್ಯಾಜ್ಯ ಸಂಗ್ರಹಿಸಿ, ಮತ್ತೊಮ್ಮೆ ಈ ಸ್ಥಳಕ್ಕೆ ಯಾರಿ ಬರಬೇಡಿ, ಜೀವನದಿಗೆ ತ್ಯಾಜ್ಯ ಹಾಕಬೇಡಿ ಎಂದು ಅರಿವು ಮೂಡಿಸಲಾಯಿತು. ಈ ಸ್ಥಳದಲ್ಲಿ ನಿಷೇಧಾಜ್ಞೆ ಮುಂದುವರೆದಿದ್ದು, ಪ್ರವಾಸಿಗರು ಗುಂಪು ಸೇರುವಂತಿಲ್ಲ. ಹಾಗಾಗಿ ಪ್ರವಾಸಿಗರು ಯಾರು ಇಲ್ಲಿಗೆ ಇಲ್ಲಿಗೆ ಬರಬೇಡಿ ಎಂದು ಅರಿವು ಮೂಡಿಸಿದರು.


## ಜೆಡಿಎಸ್ ಮುಖಂಡರ ಸಭೆ



ವಿಧಾನಪರಿಷತ್‌ಗೆ ಶಿಕ್ಷಕರ ಮತ್ತು ಪದವೀಧರ ಕ್ಷೇತ್ರದ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ವಿಧಾನಪರಿಷತ್ ಜೆಡಿಎಸ್ ಸದಸ್ಯರಾದ ಭೋಜೇಗೌಡ, ಕೆ.ವಿವೇಕಾನಂದ, ಸಿ.ಎನ್.ಮಂಜೇಗೌಡ, ಜವರಾಯಿಗೌಡ ಹಾಗೂ ಮುಖಂಡರು ಸಭೆ ಸೇರಿ, ಹಲವು ವಿಚಾರಗಳ ಬಗ್ಗೆ ಚರ್ಚಿಸಿದರು.

## ನಿಧನ

### ಮೊಹಮ್ಮದ್ ಹನೀಫ್ ಖಾನ್



ಮೈಸೂರು, ಅ. 27–ಮೈಸೂರಿನ ಬಂಡೀಪಾಳ್ಯದ ಈರುಳ್ಳಿ ವ್ಯಾಪಾರಿ ಹಾಗೂ ಬನುಮಯ್ಯ ಕಾಲೇಜು ಸಮೀಪದ ನಿವಾಸಿ ಮೊಹಮ್ಮದ್ ಹನೀಫ್ ಖಾನ್ (64) ಸೋಮವಾರ ಚನ್ನಪಟ್ಟಣದಲ್ಲಿ ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಸಹೋದರರಾದ ಮೊಹಮ್ಮದ್ ಸಜ್ಜದ್ ಖಾನ್, ಡಿ.ಸಿ.ಪಿ. ಬೆಂಗಳೂರು, ಅಮಾನುಲ್ಲಾ ಖಾನ್, ವಿಕ್ಟರಿ ಫಾರ್ಮ, ಮೈಸೂರು ಮತ್ತು ಅಪಾರ ಬಂಧುಗಳು, ಸ್ನೇಹಿತರು ಹಾಗೂ ಹಿತೈಷಿಗಳನ್ನು ಅಗಲಿದ್ದಾರೆ. ಶವ ಸಂಸ್ಕಾರ ಮೈಸೂರಿನ ಆರ್.ಎಸ್.ನಾಯ್ಡುನಗರ, ಮದ್ರಸಾ ಅಶ್ರಫುಲ್ ಉಲೂಮ್ ಅರೇಬಿಕ್ ಮದ್ರೀಸ್ ಹತ್ತಿರ ಇರುವ ಮಹಮದೀಯ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಎನ್‌ಆರ್ ಕ್ಷೇತ್ರದಲ್ಲಿ 5.60 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ



ನರಸಿಂಹರಾಜ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಚಾಲನೆ ನೀಡಿದರು.

ಮೈಸೂರು,ಅ.27(ಜಿಎ)–ನರಸಿಂಹರಾಜ ಕ್ಷೇತ್ರದಲ್ಲಿ 5.60 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಚಾಲನೆ ನೀಡಿದರು.

ರಾಜೀವ್ ನಗರದ 2ನೇ ಹಂತದಲ್ಲಿ ಎಜೆ ಕನ್ವೆನ್ಷನ್ ಹಾಲ್ ಎದುರು 4.5 ಕೋಟಿ ವೆಚ್ಚದಲ್ಲಿ ಮೈಸೂರು ಮಹಾನಗರಪಾಲಿಕೆ ವಲಯ ಕಚೇರಿ 8ರ ನೂತನ ಕಟ್ಟಡ ನಿರ್ಮಾಣ ಮತ್ತು 1.10 ಕೋಟಿ ರೂ ವೆಚ್ಚದಲ್ಲಿ ಅಜೀಜ್ ಸೇಠ್ ರಸ್ತೆಯ ವಾಟರ್ ಟ್ಯಾಂಕ್ ರಸ್ತೆಯಿಂದ ಡಾ.ರಾಜಕುಮಾರ್ ರಸ್ತೆವರೆಗೆ ಹಾಗೂ ಇಂದಿರಾ ಕ್ಯಾಂಟಿನ್ ರಸ್ತೆಯಿಂದ ಹೆಚ್‌ಪಿಓ ಆರ್‌ಎಂಎಸ್ ಲೇಔಟ್‌ನ ಗಣಪತಿ ದೇವಸ್ಥಾನದ ಹತ್ತಿರ ಒಳಚರಂಡಿ ಕೊಳವೆ ಮಾರ್ಗ ಅಳವಡಿಸಿ, ಪರಾಶಕ್ತಿ ರಸ್ತೆಯಲ್ಲಿರುವ ಮುಖ್ಯ ಕೊಳವೆ ಮಾರ್ಗಕ್ಕೆ ಜೋಡಿಸುವುದು, ಮತ್ತು ಯಂತ್ರ ಗುಂಡಿಗಳನ್ನು ನಿರ್ಮಿಸುವ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಬಹುದಿನಗಳ ಪ್ರಯತ್ನದ ಫಲವಾಗಿ ಮೈಸೂರು ಮಹಾನಗರಪಾಲಿಕೆಯ 9 ವಲಯಗಳಲ್ಲಿ ಈಗಾಗಲೇ ವಲಯ ಕಚೇರಿ 1 ಮತ್ತು 3ಕ್ಕೆ ಸ್ವಂತ ಕಟ್ಟಡ ನಿರ್ಮಾಣವಾಗಿದೆ. ನನ್ನ ಕ್ಷೇತ್ರ ವ್ಯಾಪ್ತಿಯಲ್ಲಿ ವಲಯ ಕಚೇರಿ 7, 8, 9 ಸೇರಿ 3 ಕಚೇರಿಗಳು ಬರುತ್ತವೆ. ಇದರಲ್ಲಿ ಇಂದು ವಲಯ ಕಚೇರಿ 8ರ ನೂತನ ಕಚೇರಿ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ಸಲ್ಲಿಸಲಾಗಿದೆ. ಇದಕ್ಕೆ ಸಿಎ ನಿವೇಶನ ಪಡೆದಿದ್ದು, 4.5 ಕೋಟಿ ವೆಚ್ಚದಲ್ಲಿ ಕಟ್ಟಡ ನಿರ್ಮಾಣವಾಗಲಿದೆ. ವಲಯ ಕಚೇರಿ 7ಕ್ಕೆ ಮಂಜೂರಾತಿ ದೊರೆತಿದ್ದು, ಹಾಲಿ ಕಟ್ಟಡ ತೆರವು ಮಾಡಿ ನೂತನ ಕಟ್ಟಡ ನಿರ್ಮಿಸಲಾಗುವುದು, ವಲಯ ಕಚೇರಿ 9ಕ್ಕೂ ನಿವೇಶನ ದೊರಕಿದ್ದು, ಅಲ್ಲೂ ಕಟ್ಟಡ ನಿರ್ಮಿಸಲಾಗುವುದು. ಇದರಿಂದ ಸಾರ್ವಜನಿಕರಿಗೆ ಒಂದೇ ಸೂರಿನಡಿ ಎಲ್ಲ ಸೌಲಭ್ಯಗಳು ದೊರಕುವಂತಾಗುತ್ತದೆ ಎಂದರು.

ಜತೆಗೆ ಮೈಸೂರು ನಗರದ ಪೂರ್ವ ಭಾಗದಲ್ಲಿ ಅಜೀಜ್‌ಸೇಠ್ ನಗರ, ಸಾತಗಳ್ಳಿ, ಕಲ್ಯಾಣಗಿರಿ ಸೇರಿ ಐದು ಖಾಸಗಿ ಬಡಾವಣೆಗಳು ಮತ್ತು ಮೂರು ಸ್ಲಂಗಳಿಗೆ ಒಳ ಚರಂಡಿ ವ್ಯವಸ್ಥೆ ಕಲ್ಪಿಸಲು ಇಂದು 1.10 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ ಎಂದರು.

ಮೈಸೂರು ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್, ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಇಕ್ಬಾಲ್, ಉಪಾಧ್ಯಕ್ಷ ಷಹಿನ್ ಷಾ ಅಹಮ್ಮದ್, ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ಪಾಲಿಕೆ ಮಾಜಿ ಸದಸ್ಯರಾದ ಶೌಕತ್ ಪಾಷ, ಆಫ್ತಾಬ್, ಸೈಯದ್ ಹಸರತುಲ್ಲಾ, ಪ್ರದೀಪ್‌ಚಂದ್ರ, ಮುಖಂಡರಾದ ಅಫ್ರೋಜ್ ಖಾನ್, ಬಾಬು, ಆಫ್ತಾಬ್, ಪಾಲಿಕೆ ಎಸಿ ಸೋಮಶೇಖರ್, ಎಇ ಮಧುಸೂಧನ್ ಮತ್ತಿತರರು ಉಪಸ್ಥಿತರಿದ್ದರು.

## ಇಂದು ಉಚಿತ ಆಯುರ್ವೇದ ಚಿಕಿತ್ಸಾ ಶಿಬಿರ

ಮೈಸೂರು,ಅ.27(ಜಿಎ)–ಆಯುಷ್ ಇಲಾಖೆ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಹೋಟೆಲ್ ಪತ್ತಿನ ಸಹಕಾರಿ ಸಂಘ, ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟ ಹಾಗೂ ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ವತಿಯಿಂದ 10ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಅಂಗವಾಗಿ ಅ.28ರಂದು ಕುವೆಂಪುನಗರದ ಲವಕುಶ ಉದ್ಯಾನವನದ ಬಳಿ ಇರುವ ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ಆವರಣದಲ್ಲಿ ಉಚಿತ ಆಯುರ್ವೇದ ಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೂ ನಡೆಯುವ ಶಿಬಿರಕ್ಕೆ ಶಾಸಕ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಲಿದ್ದಾರೆ. ಗೌರವ ಅತಿಥಿಯಾಗಿ ಶಾಸಕ ಕೆ.ಹರೀಶ್‌ಗೌಡ ಆಗಮಿಸಲಿದ್ದಾರೆ. ಅಧ್ಯಕ್ಷತೆಯನ್ನು ಟಿ.ಎಸ್. ಶ್ರೀವತ್ಸ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹೋಟೆಲ್ ಪತ್ತಿನ ಸಹಕಾರಿ ಸಂಘ ಅಧ್ಯಕ್ಷ ನಾರಾಯಣ ಹೆಗ್ಡೆ, ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟದ ಅಧ್ಯಕ್ಷ ಗ್ರೇಸಿಯನ್ ರೋಡ್ರೀಗಸ್, ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ಅಧ್ಯಕ್ಷ ರಾಮಚಂದ್ರಭಟ್, ನರರೋಗ ತಜ್ಞ ಡಾ.ಶುಶ್ರೂತ್‌ಗೌಡ, ಆಯುಷ್ ಇಲಾಖೆ ನಿವೃತ ಜಂಟಿ ನಿರ್ದೇಶಕ ಡಾ.ಎಸ್.ಜಿ.ಮಂಗಳಗಿ, ಸರ್ಕಾರಿ ಆಯುರ್ವೇದ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ.ಅರುಣ ಭಾಗವಹಿಸಲಿದ್ದಾರೆ.

# ಅರಣ್ಯ ಸಚಿವರಿಂದ ಹಸಿರು ಮೈಸೂರು ನರ್ಸರಿ ವೀಕ್ಷಣೆ

## ಹೆಚ್.ವಿ.ರಾಜೀವ್ ಕಾರ್ಯಕ್ಕೆ ಮೆಚ್ಚುಗೆ



ಹೆಚ್.ವಿ.ರಾಜೀವ್ ಅವರ ಹಸಿರು ಮೈಸೂರು ನರ್ಸರಿಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೋಮವಾರ ಭೇಟಿ ನೀಡಿದ್ದರು.

ಮೈಸೂರು,ಅ.27(ಪಿಎಂ)– ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರು ಮೈಸೂರಿನಲ್ಲಿ ಸ್ಥಾಪಿಸಿ, ಪೋಷಿಸುತ್ತಿರುವ 'ಹಸಿರು ಮೈಸೂರು ನರ್ಸರಿ'ಗೆ ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ್ ಖಂಡ್ರೆ ಸೋಮವಾರ ಭೇಟಿ ನೀಡಿ ವೀಕ್ಷಣೆ ಮಾಡಿದರಲ್ಲದೆ, ರಾಜೀವ್ ಅವರ ಪರಿಸರ ಕಾಳಜಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ನರ್ಸರಿಯಲ್ಲಿ ಮಹಾಗನಿ, ಹೊಂಗೆ, ಬೇವು, ನೇರಳೆ, ಹಿಪ್ಪೆ, ಬಿಲ್ವಪತ್ರೆ ಸೇರಿದಂತೆ ವಿವಿಧ ಜಾತಿಯ ಗಿಡಗಳನ್ನು ನೆಟ್ಟು ಪೋಷಿಸಲಾಗುತ್ತಿದೆ ಎಂದು ಹೆಚ್.ವಿ.ರಾಜೀವ್, ಸಚಿವರಿಗೆ ಮಾಹಿತಿ ನೀಡಿದರು.

ನರ್ಸರಿ ಮೂಲಕ ಲಕ್ಷಕ್ಕೂ ಹೆಚ್ಚು ಗಿಡಗಳನ್ನು ಉಚಿತವಾಗಿ ನೀಡಿರುವುದು ಪರಿಸರ ಉಳಿವಿನಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ. ಮೈಸೂರು ಜಿಲ್ಲೆ ಮಾತ್ರವಲ್ಲದೆ, ಬೇರೆ ಬೇರೆ ಜಿಲ್ಲೆಗಳಲ್ಲಿ ಗಿಡ ನೆಡಲು ಇವರು ಉಚಿತವಾಗಿ ಗಿಡಗಳನ್ನು ನೀಡಿರುವುದು ಮಹತ್ವದ್ದು. ಪರಿಸರ ಜಾಗೃತಿ ಬಗ್ಗೆ ಹೆಚ್ಚು ಹೊತ್ತು ನೀಡಬೇಕಿರುವುದು ಇಂದಿನ ಅಗತ್ಯ ಎಂದು ಸಚಿವರು ತಿಳಿಸಿದರು.

ರಾಜೀವ್ ಅವರ ಪರಿಕಲ್ಪನೆಯ 'ಲಕ್ಷ ವೃಕ್ಷ' ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆಯಲ್ಲಿ ನಾನು ಭಾಗಿಯಾಗಿದ್ದೆ. ಪ್ರಸ್ತುತ ವಿದ್ಯಾರ್ಥಿಗಳಿಗೆ ಪರಿಸರದ ಬಗ್ಗೆ ಅರಿವು ಮೂಡಿಸುವುದು ಬಹಳ ಮುಖ್ಯ. ಆ ಕೆಲಸವನ್ನು ರಾಜೀವ್ ಮತ್ತು ಸ್ನೇಹ ಬಳಗ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಮುಖಂಡರಾದ ಜೆ.ಪಿ.ನಗರ ನಂದೀಶ್, ಗಿರೀಶ್, ಶಿವನಾಗಪ್ಪ, ವರುಣ ಮಹೇಶ, ಪ್ರಕಾಶ್, ಕೆ.ವಿ.ಮಲ್ಲೇಶ್, ವಿರೂಪಾಕ್ಷ, ಮಲ್ಲೇಶ್ (ಮಲ್ಲ), ಖಾನವಳಿ ನಾಗೇಂದ್ರ, ರಾಜೀವ್ ಸ್ನೇಹ ಬಳಗದ ಶೇಷ್ ಪ್ರಸಾದ್, ಎಸ್.ರಂಗನಾಥ, ಜಯಂತ್, ಕರೀಗೌಡ, ಬಿ.ಜಿ.ಕೇಶವ್, ಕಮಲ, ನಾಗೇಶ್, ಟ್ರಾವೆಲ್ಸ್ ರಘು, ಟಿಂಬರ್ ನಾಗರಾಜು, ಸುರೇಶ್, ಕೃಷ್ಣಪ್ಪ ಘಂಟಿ, ವಿಶ್ವನಾಥ್, ಸಿದ್ದರಾಜು, ಚಂದ್ರು ಸಿದ್ದಪ್ಪಾಜಿ, ವಿಕಾಸ್‌ಶಾಸ್ತ್ರೀ ಮತ್ತಿತರು ಹಾಜರಿದ್ದರು.

## ಮೂರು ತಿಂಗಳ ಯೋಗ ಶಿಕ್ಷಕರ ತರಬೇತಿ

ಮೈಸೂರು,ಅ.27(ಜಿಎ)–ಮೈಸೂರಿನ ರಾಮಕೃಷ್ಣ ನಗರದ ಪರಮಹಂಸ ಯೋಗ ಮಹಾ ವಿದ್ಯಾಲಯ, ಅಂತರ ರಾಷ್ಟ್ರೀಯ ಯೋಗ ಶಾಲೆಗಳ ಸಂಯುಕ್ತಾಶ್ರಯದಲ್ಲಿ 3 ತಿಂಗಳ ಯೋಗ ಶಿಕ್ಷಕರ ತರಬೇತಿ ಕೋರ್ಸ್ ಆರಂಭವಾಗಲಿದೆ ಎಂದು ಅಧ್ಯಕ್ಷ ಯೋಗ ಪ್ರವೀಣ ಶಿವಪ್ರಕಾಶ್ ಗುರೂಜಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಫ್‌ಲೈನ್ ಹಾಗೂ ಆನ್‌ಲೈನ್ ಕೋರ್ಸ್ ಆಗಿದ್ದು, ವಾರಾಂತ್ಯದ ದಿನಗಳಲ್ಲಿ ನಡೆಯಲಿದೆ. ನುರಿತ ಯೋಗ ತಜ್ಞರು ಹಾಗೂ ಪರಿಣಿತ ವೈದ್ಯರ ಮಾರ್ಗದರ್ಶನದಲ್ಲಿ ಯೋಗಾಸನ, ಯೋಗ ಥೆರಪಿ. ಪ್ರಾಣಾಯಾಮ, ಧ್ಯಾನ, ಮುದ್ರಾ ಕ್ರಮ, ಮನೆ ಮದ್ದು, ಜೀವನ ಕೌಶಲ್ಯ ಇತ್ಯಾದಿಗಳನ್ನು ಕಲಿಸಲಾಗು ವುದು. ನ.8ರಿಂದ ತರಬೇತಿ ಪ್ರಾರಂಭವಾಗಲಿದ್ದು, ಪೂರ್ಣಗೊಳಿಸಿದವರಿಗೆ ಆಯುಷ್ ಇಲಾಖೆ ಪ್ರಮಾಣ ಪತ್ರ ನೀಡ ಲಿದೆ. ಮಾಹಿತಿಗಾಗಿ 70901 57993 ಅನ್ನು ಸಂಪರ್ಕಿಸಬಹುದು ಎಂದರು.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

28.10.2025 ಮಂಗಳವಾರ, ಮಳೆ ನಕ್ಷತ್ರ: ಸ್ವಾತಿ 24.10.2025 ರಿಂದ 05.11.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಪೂಷಾ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** 48ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ, 27ನೇ ವರ್ಷದ ಮಹಾ ಕುಂಭಾಭಿಷೇಕ ಮತ್ತು 11ನೇ ವರ್ಷದ ಹಾಲರವಿ ಉತ್ಸವ, ಸಂಜೆ 7ಕ್ಕೆ ಶ್ರೀ ಹರಿವಾಯು ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.
- **ಅಪೂರ್ವ ಸ್ನೇಹ ಬಳಗ :** ರಾಷ್ಟ್ರೀಯ ಆಯುರ್ವೇದ ದಿನ ಅಂಗವಾಗಿ ವಿವಿಧ ಜಾತಿಯ ಆಯುರ್ವೇದ ಗಿಡಗಳ ವಿತರಣೆ ಹಾಗೂ ಜಾಗೃತಿ ಕಾರ್ಯಕ್ರಮ, ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್. ಶ್ರೀವತ್ಸ, ಖ್ಯಾತ ವೈದ್ಯರಾದ ಡಾ. ಚಂದ್ರಶೇಖರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಮಾಜಿ ಮೇಯರ್ ಸಂದೇಶ ಸ್ವಾಮಿ, ಸ್ಥಳ: ಅಪೂರ್ವ ಹೋಟೆಲ್ ಮುಂಭಾಗ, ಚಾಮುಂಡಿಪುರಂ, ಬೆಳಗ್ಗೆ 8.30ಕ್ಕೆ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30ರಿಂದ ಲಕ್ವ/ಪ್ಯಾರಲಿಸಿಸ್ ಚಿಕಿತ್ಸಾ ಶಿಬಿರ, ಕಾರ್ನಿಯಾದ ಅಪಾರದರ್ಶಕತೆ/ಕಣ್ಣಿನ ಹೂ (ಕಾರ್ನಿಯಲ್ ಒಪೇಸಿಟಿ), ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.
- **ಟೆರೇಷಿಯನ್ ಕಾಲೇಜು :** ಸಂಶೋಧನಾ ವಿಧಾನಶಾಸ್ತ್ರದ ಉದಯೋನ್ಮುಖ ಪರಿಕಲ್ಪನೆಗಳು ಕುರಿತು ರಾಷ್ಟ್ರೀಯ ಸಮ್ಮೇಳನ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉಪಸ್ಥಿತರು : ಕುಲಸಚಿವ ಪ್ರೊ. ಎನ್. ನಾಗರಾಜ, ಪ್ರಿನ್ಸಿಪಾಲ್ ಸಿಸ್ಟರ್ ರೋಹಿಣಿ, ಡಾ. ಅಪ್ಪಾ ಸಾಹೇಬ್ ನೈಕಲ್, ಡಾ. ವೀಣಾ, ಡಾ. ಪಿ.ಎಂ. ಶಿವಪ್ರಸಾದ್, ಸ್ಥಳ: ಟೆರೇಷಿಯನ್ ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.
- **ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು :** ಅಂತರ ಕಾಲೇಜು ಭಾರ ಎತ್ತುವ ಮತ್ತು ಪುರುಷರ ಮತ್ತು ಮಹಿಳೆಯರ ಟೆನ್ನಿಸ್ ಮತ್ತು ಪುರುಷರ ದೇಹದಾರ್ಢ್ಯ ಸ್ಪರ್ಧೆ, ಉಪಸ್ಥಿತರು : ಜೆಎಸ್‌ಎಸ್ ಮಹಾವಿದ್ಯಾಪೀಠ ಇಂಜಿನಿಯರಿಂಗ್ ವಿಭಾಗದ ನಿರ್ದೇಶಕ ಬಿ.ಕೆ. ಸುರೇಶ್ ಬಾಬು, ಜೆಎಸ್‌ಎಸ್ ಯೂನಿವರ್ಸಿಟಿ ಕುಲಪತಿ ಪ್ರೊ.ಎ.ಎನ್.ಸಂತೋಷ್‌ಕುಮಾರ್, ಕುಲಸಚಿವ ಪ್ರೊ. ಎಸ್.ಎ. ಧನರಾಜ್, ಪ್ರಿನ್ಸಿಪಾಲ್ ಡಾ.ಸಿ.ನಟರಾಜು, ಸ್ಥಳ: ಜೆಎಸ್‌ಎಸ್ ಒಳಾಂಗಣ ಕ್ರೀಡಾಂಗಣ, ಬೆಳಗ್ಗೆ 9.30ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಉಬ್ಬಿದ ರಕ್ತನಾಳ, ಮೊಡವೆಗಳಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.
- **ಆಯುಷ್ ಇಲಾಖೆ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಹೋಟೆಲ್ ಪತ್ತಿನ ಸಹಕಾರಿ ಸಂಘ, ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟ, ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ :** 10ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಪ್ರಯುಕ್ತ ಉಚಿತ ಆಯುರ್ವೇದ ಚಿಕಿತ್ಸಾ ಶಿಬಿರ, ಸಾನ್ನಿಧ್ಯ : ಶ್ರೀ ಅರ್ಜುನ ಅವಧೂತ ಗುರು ಮಹಾರಾಜ್, ಉದ್ಘಾಟನೆ : ಶಾಸಕ ಜಿ.ಟಿ. ಹರೀಶ್‌ಗೌಡ, ಗೌರವ ಅತಿಥಿಗಳು : ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ : ಶಾಸಕ ಟಿ.ಎಸ್.ಶ್ರೀವತ್ಸ, ಮುಖ್ಯ ಅತಿಥಿಗಳು : ಹೋಟೆಲ್ ಮಾಲೀಕರ ಪತ್ತಿನ ಸಂಘದ ಅಧ್ಯಕ್ಷ ನಾರಾಯಣ ಹೆಗ್ಡೆ, ಒಕ್ಕೂಟದ ಅಧ್ಯಕ್ಷ ಗ್ರೇಸಿಯನ್ ರೋಡ್ರಿಗಸ್, ರಾಮಚಂದ್ರಭಟ್, ಡಾ. ಸುಶ್ರುತಗೌಡ, ಡಾ. ಎಸ್.ಜಿ. ಮಂಗಳಜಿ, ಡಾ. ಅರುಣ, ಡಾ. ಗುರುಬಸವರಾಜ, ಡಾ. ಮನುಪ್ರಕಾಶ್, ಡಾ. ಸಿಂಧು, ಡಾ. ಮಧು, ಡಾ. ಎನ್.ವಿ. ಕೃಷ್ಣಮೂರ್ತಿ, ಡಾ. ಎ.ಎಸ್. ಚಂದ್ರಶೇಖರ್, ಡಾ. ಲಕ್ಷ್ಮೀನಾರಾಯಣ ಶೆಣೈ, ಡಾ. ಪ್ರಶಾಂತ ಗೋಖಲೆ, ಡಾ. ಮಂಜುಪ್ರಸಾದ್, ಸ್ಥಳ: ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ, ಕುವೆಂಪುನಗರ, ಬೆಳಗ್ಗೆ 10 ರಿಂದ.
- **ಜೆ.ಪಿ. ಅಭಿಮಾನಿಗಳ ಬಳಗ :** ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಅರ್ಚನೆ ಮತ್ತು ವಿಶೇಷ ಪೂಜೆ ಸಲ್ಲಿಸುವುದರೊಂದಿಗೆ ಎಸ್. ಜಯಪ್ರಕಾಶ್ (ಜೆಪಿ) ಹುಟ್ಟುಹಬ್ಬ ಆಚರಣೆ, ಸ್ಥಳ: ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 10.30ಕ್ಕೆ.
- **ಸಾಧನಾ ಮಂದಿರ :** ಪೂಜ್ಯ ಸ್ವಾಮಿ ಹಂಸಾನಂದ ಅವರಿಂದ ಸರಸ್ವತಿ ಪೂಜಾ, ಸಂಜೆ 6 ರಿಂದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ; ಸಂಜೆ 7.15 ರಿಂದ ಶ್ರೀ ಸಪ್ತಮಾತೃಕಾ ದೇವಸ್ಥಾನಂ, ವಿಜಯನಗರ 3ನೇ ಹಂತ.
- **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಡಾ. ವಿ. ಲಕ್ಷ್ಮೀನಾರಾಯಣ ಅವರಿಂದ ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ಚಿನ್ಮಯ ಮಿಷನ್, ಶ್ರೀ ಗುರುದೇವ ದತ್ತ ಸನ್ನಿಧಿ :** ಗೀತಾಜ್ಞಾನಯಜ್ಞ, ಪೂಜ್ಯ ಸ್ವಾಮಿ ಗಹನಾನಂದ ಅವರಿಂದ ಭಗವದ್ಗೀತೆಯ 3ನೇ ಅಧ್ಯಾಯ ಕರ್ಮ ಯೋಗ ಕುರಿತು ಪ್ರವಚನ, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ, ಸಂಜೆ 6.30 ರಿಂದ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ–ಕವಿತಾ ಮುಚ್ಚಂಡಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಅಂಬಯ್ಯನುಲಿ ಹಾಗೂ ಕೆ.ಪಿ. ರೇವತಿ, ವ್ಯಾಖ್ಯಾನ– ಡಾ.ಎನ್.ಎಸ್.ತಾರಾನಾಥ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದನ್ನು ಕುರಿತಂತೆ ಶ್ರೋತೃಗಳ ಅಭಿಪ್ರಾಯಗಳನ್ನು ಆಧರಿಸಿದ ಕಾರ್ಯಕ್ರಮ, 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 9.05 ಸ್ತನ ಕ್ಯಾನ್ಸರ್ ಜಾಗೃತಿ ಪ್ರಾಯೋಜಿತ ಕಾರ್ಯಕ್ರಮ, 9.10 ವಿಶೇಷ ಕಾರ್ಯಕ್ರಮ ಸರಣಿ, ಆಕಾಶವಾಣಿ 90–ನೆನಪುಗಳ ಹೊತ್ತು, ಮೈಸೂರು ಆಕಾಶವಾಣಿ ತೊಂಬತ್ತು, ನೆನಪುಗಳ ಹೊತ್ತು–ವಿಶೇಷ ಕಾರ್ಯಕ್ರಮ ಸರಣಿ, ಕನ್ನಡ ಸಾರಸ್ವತ ಲೋಕದ ಹಿರಿಯ ವಿದ್ವಾಂಸರಾದ ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ ಅವರೊಂದಿಗೆ ಸಂವಾದ. ಭಾಗವಹಿಸುತ್ತಾರೆ–ಟಿ.ವಿ.ವಿದ್ಯಾಶಂಕರ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ –ಸ್ವಾತಿ ತಿರುನಾಳ್ ರಚನೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಹೊಂಗಿರಣ–ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ–ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ. ಜಿ. ಕವಿತಾ

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ, 1.20 ಭಾವಗೀತೆಗಳು–ಎನ್. ಜ್ಯೋತಿ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎನ್.ವಿ. ಸತ್ಯನಾರಾಯಣ–ಕೊಳಲು ವಾದನ, 4.00 ಕಥಾಕಾಲಕ್ಷೇಪ–ಶ್ರೀಕೃಷ್ಣಗಾರುಡಿ, ಪ್ರಸ್ತುತಿ : ವಿದ್ವಾನ್ ವಿ. ಗುರುರಾಜುಲು ನಾಯ್ಡು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ್ಯ ತರಂಗ–ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಸೀಗಡಿ ಮೀನು ಕೃಷಿ ಈ ಕುರಿತು ಮೀನುಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕರಾದ ಜಿ. ಟಿ. ರವಿಕಿರಣ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ–ಬಿ. ದಿಗ್ವಿಜಯ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಭಲೇ ಖಾನ್–ಸಿತಾರ್ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಎನ್. ರವಿಕಿರಣ್–ಚಿತ್ರ, ವೀಣಾ ವಾದನ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ –ಡಾ. ಎ.ಎಸ್. ಶಂಕರನಾರಾಯಣ, 10.30 ಸವಿನೆನಪು

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 28 ಮಂಗಳವಾರ 2025

ಸಂಪುಟ: 46 | ಸಂಚಿಕೆ: 190 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com






ರಾಗ ಬದಲಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

## ಹೈಕಮಾಂಡ್ ಒಪ್ಪಿದ್ರೆ ಐದು ವರ್ಷ

# ನಾನೇ ಸಿಎಂ

ಮಂಗಳೂರು, ಅ.27– ಇದುವರೆಗೆ ನಾನೇ ಪೂರ್ಣಾವಧಿ ಸಿಎಂ ಎನ್ನುತ್ತಿದ್ದ ಸಿದ್ದರಾಮಯ್ಯ ಈಗ ಸ್ವಲ್ಪ ರಾಗ ಬದಲಾಯಿಸಿದ್ದಾರೆ. ಹೈಕಮಾಂಡ್ ಒಪ್ಪಿದರೆ ಐದು ವರ್ಷ ನಾನೇ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಮಂಗಳೂರಿನಲ್ಲಿ ಇಂದು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಜಾಪ್ರಭುತ್ವದಲ್ಲಿ ಸ್ಪರ್ಧೆಯಲ್ಲಿ ಇರುವವರನ್ನು ತಪ್ಪಿಸಲು ಆಗಲ್ಲ. ಸ್ಪರ್ಧೆಯಲ್ಲಿ ಇರಬೇಡಿ ಎಂದು ಹೇಳಲು ಆಗಲ್ಲ. ಪ್ರಜಾಪ್ರಭುತ್ವದಲ್ಲಿ ಕೇಳುವುದು ಅವರ ಹಕ್ಕು. ಅಂತಿಮವಾಗಿ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಹೇಳುವ–ಕೇಳುವ ಹಕ್ಕು ಎಲ್ಲರಿಗೂ ಇದೆ. ಹೈಕಮಾಂಡ್ ತೀರ್ಮಾನ ಮಾಡಿದರೆ ಐದು ವರ್ಷ ನಾನೇ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಹೀಗಾಗಿ ಈಗ ಕಾಂಗ್ರೆಸ್ ಹೈಕಮಾಂಡ್ ಏನು ತೀರ್ಮಾನ ಕೈಗೊಳ್ಳುತ್ತದೆ ಎಂಬುದು ಭಾರೀ ಕುತೂಹಲಕ್ಕೆ ಕಾರಣವಾಗಿದೆ. ಕಾಂಗ್ರೆಸ್ ಹೈಕಮಾಂಡ್ ಏನಾದರೂ ಸಿಎಂ ಸ್ಥಾನದಲ್ಲಿರುವವರನ್ನು ಬದಲಾವಣೆ ಮಾಡಿ ಬೇರೆಯವರನ್ನು ಸಿಎಂ ಸ್ಥಾನದಲ್ಲಿ ಕೂರಿಸುತ್ತದೆಯೇ. ಸಿಎಂ ಸ್ಥಾನ ತ್ಯಾಗ ಮಾಡಿ, ಬೇರೆಯವರಿಗೆ ಬಿಟ್ಟು ಕೊಡಿ ಎಂದು ಸಿದ್ದರಾಮಯ್ಯನವರಿಗೆ ಹೇಳುತ್ತದೆಯೇ ಅಥವಾ ಈಗಾಗಲೇ ■6ನೇ ಪುಟಕ್ಕೆ

### ಸಿಎಂ ಹೇಳಿದ ಮೇಲೆ ಇನ್ನೇನಿದೆ? ಅವರು ಹೇಗೆ ಹೇಳುತ್ತಾರೋ ಹಾಗೆ ನಡೆಯುತ್ತೇವೆ

ಬೆಂಗಳೂರು, ಅ.27– ಸಿಎಂ ಅವರು ಹೇಳಿದ ಮೇಲೆ ಮುಗಿಯಿತು. ಅವರು ಹೇಳಿದ ಮೇಲೆ ಇನ್ನೇನಿದೆ. ಅವರು ಹೇಗೆ ಹೇಳುತ್ತಾರೋ ಹಾಗೆ ನಾವು ಕೇಳುತ್ತೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.



ಡಿ.ಕೆ.ಶಿವಕುಮಾರ್

ಸೋಮವಾರ ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಅವರು ಪ್ರತಿಕ್ರಿಯಿಸಿದರು. ಹೈಕಮಾಂಡ್ ಒಪ್ಪಿದರೆ ನಾನೇ ಪೂರ್ಣಾವಧಿ ಮುಖ್ಯಮಂತ್ರಿ ಆಗಿರುತ್ತೇನೆ ಎಂಬ ಸಿಎಂ ಸಿದ್ದರಾಮಯ್ಯ ಅವರ ಹೇಳಿಕೆ ಬಗ್ಗೆ ಕೇಳಿದಾಗ ಶಿವಕುಮಾರ್ ಅವರು ಈ ರೀತಿ ಉತ್ತರಿಸಿದರು.

**ದೆಹಲಿಗೆ ಖಾಸಗಿ ಭೇಟಿ:** ದೆಹಲಿ ಭೇಟಿ ಬಗ್ಗೆ ಕೇಳಿದಾಗ, ನಮ್ಮ ಪಕ್ಷದ ಕಾರ್ಯಕಾರಿ ಸಮಿತಿ ಸದಸ್ಯೆಯಾದ ಅಂಬಿಕಾ ಸೋನಿಯವರ ಮನೆಗೆ ಭೇಟಿ ನೀಡಿದ್ದೆ. ಅವರ ಪತಿ ತೀರಿಕೊಂಡಿದ್ದರು. ಹೀಗಾಗಿ ಸಂತಾಪ ■6ನೇ ಪುಟಕ್ಕೆ

### ಮತ್ತೊಬ್ಬ ಏಕನಾಥ ಶಿಂಧೆ ಹುಟ್ಟಲು ಸಾಧ್ಯವಿಲ್ಲ; 'ನವೆಂಬರ್ ಕ್ರಾಂತಿ'ಗೆ ಕಾಂಗ್ರೆಸ್ ಅವಕಾಶ ನೀಡಲ್ಲ

ಬೆಂಗಳೂರು, ಅ.27– 'ನವೆಂಬರ್ ಕ್ರಾಂತಿ' ಮತ್ತು ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ಕುರಿತಾದ ಊಹಾಪೋಹಗಳನ್ನು ಸ್ಪಷ್ಟವಾಗಿ ತಳ್ಳಿಹಾಕಿದ ಸಚಿವ ಸತೀಶ್ ಜಾರಕಿಹೊಳಿ, ಪಕ್ಷದ ಹೈಕಮಾಂಡ್ ಅಂತಹ ಯಾವುದೇ ಕ್ರಾಂತಿಗೆ ಅವಕಾಶ ನೀಡುವುದಿಲ್ಲ ಎಂದು ಸೋಮವಾರ ಹೇಳಿದ್ದಾರೆ.



ಸತೀಶ್ ಜಾರಕಿಹೊಳಿ

ಇಂದು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಏಕನಾಥ್ ಶಿಂಧೆ ಒಬ್ಬರೇ, ಅಜಿತ್ ಪವಾರ್ ಕೂಡ ಒಬ್ಬರೇ. ಮತ್ತೊಬ್ಬ ಏಕನಾಥ್ ಶಿಂಧೆ ಅಥವಾ ಪವಾರ್ ಹುಟ್ಟಿಕೊಳ್ಳಲು ಸಾಧ್ಯವಿಲ್ಲ ಎನ್ನುವ ಮೂಲಕ ಪರೋಕ್ಷವಾಗಿ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಬಂಡಾಯವೇಳಲು ಸಾಧ್ಯವಿಲ್ಲ ಎಂದಿದ್ದಾರೆ. ಸಚಿವ ಸಂಪುಟ ಪುನರ್ ರಚನೆ ಮತ್ತು ನಾಯಕತ್ವ ಬದಲಾವಣೆಗೆ ಸಂಬಂಧಿಸಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ನಾನು ಈ ಬಗ್ಗೆ ಹಲವು ಬಾರಿ ಹೇಳಿದ್ದೇನೆ, ನನಗೆ ಅದರ ಬಗ್ಗೆ ಗೊತ್ತಿಲ್ಲ. ಇದನ್ನು ಮುಖ್ಯಮಂತ್ರಿ, ■6ನೇ ಪುಟಕ್ಕೆ

ಮುಂದಿನ ಮುಖ್ಯಮಂತ್ರಿ ಸತೀಶ್ ಜಾರಕಿಹೊಳಿ ಅವರಿಗೆ ಜೈ
– ಅಭಿಮಾನಿಗಳು.

ಮುಂದಿನ ಮುಖ್ಯಮಂತ್ರಿ ಪರಮೇಶ್ವರ್‌ರವರಿಗೆ ಜೈ
– ಅಭಿಮಾನಿಗಳು.

ಮುಂದಿನ ಮುಖ್ಯಮಂತ್ರಿ ಮುನಿಯಪ್ಪನವರಿಗೆ ಜೈ
– ಅಭಿಮಾನಿಗಳು.

## ಶೀಘ್ರವೇ ಮೈಸೂರಿನಿಂದ ಮುಂಬೈ, ಗೋವಾ, ತಿರುಪತಿಗೆ ವಿಮಾನ



ಮೈಸೂರು, ಅ.27(ಆರ್‌ಕೆ)– ಬಹು ದಿನಗಳ ಬೇಡಿಕೆಯಂತೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ಮುಂಬೈ, ಗೋವಾ, ತಿರುಪತಿಗೆ ಶೀಘ್ರ ನೇರ ವಿಮಾನ ಸಂಪರ್ಕ ಸೌಲಭ್ಯ ಕಲ್ಪಿಸಲಾಗುವುದು ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ಈ ಕುರಿತಂತೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಅವರು ಪ್ರಸ್ತುತ ಮೈಸೂರಿನಿಂದ ಚೆನ್ನೈ ಮತ್ತು ಹೈದರಾಬಾದ್ ನಗರಗಳಿಗೆ ಮಾತ್ರ ಇಂಡಿಗೋ ವಿಮಾನ ಕಾರ್ಯಾಚರಣೆಯಲ್ಲಿದೆ. ಉಳಿದ ವಿಮಾನಗಳು ಕೇಂದ್ರ ಸರ್ಕಾರದ ಉಡಾನ್ ಯೋಜನೆ ಸ್ಥಗಿತಗೊಂಡ ಕಾರಣ ತಮ್ಮ ಹಾರಾಟವನ್ನು ಹಂತ–ಹಂತವಾಗಿ ನಿಲ್ಲಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ.



ಯದುವೀರ್

ಬೆಂಗಳೂರನ್ನು ಹೊರತುಪಡಿಸಿದರೆ, ಅತೀ ವೇಗವಾಗಿ ಬೆಳೆಯುತ್ತಿರುವ ರಾಜ್ಯದ ಎರಡನೇ ಬೃಹತ್ ನಗರವಾಗಿರುವ ಮೈಸೂರಿನಿಂದ ದೇಶದ ವಿವಿಧ ಭಾಗಗಳಿಗೆ ವಿಮಾನ ಹಾರಾಟವಾಗಬೇಕೆಂಬ ಬೇಡಿಕೆ ಸಾರ್ವಜನಿಕರಿಂದ ಬರುತ್ತಿರುವ ಕಾರಣ ನಾನು ಇಂಡಿಗೋ ಮತ್ತು ಏರ್–ಇಂಡಿಯಾ ಏರ್‌ಲೈನ್ಸ್‌ನೊಂದಿಗೆ ಚರ್ಚಿಸಿದ್ದು, ಆ ಸಂಸ್ಥೆಗಳು ಪೂರಕವಾಗಿ ಪ್ರತಿಕ್ರಿಯಿಸಿವೆ. ಸದ್ಯ ಮುಂಬೈಗೆ ಸಂಪರ್ಕ ಕಲ್ಪಿಸಲು ಇಂಡಿಗೋ ಮುಂದೆ ■6ನೇ ಪುಟಕ್ಕೆ

### ಮಡಿಕೇರಿಯಲ್ಲಿ ಮಿನಿ ವಿಮಾನ ನಿಲ್ದಾಣ ಸ್ಥಾಪನೆಗೆ ಕ್ರಮ

ಮಡಿಕೇರಿ, ಅ. 27– ಕೊಡಗು ಜಿಲ್ಲೆಯಲ್ಲಿ ಮಿನಿ ವಿಮಾನ ನಿಲ್ದಾಣ ಸ್ಥಾಪನೆಗೆ ರಾಜ್ಯ ಸರ್ಕಾರ ಸಿದ್ಧವಿದ್ದು, ಮಡಿಕೇರಿ ಸಮೀಪ ಖಾಸಗಿ ವ್ಯಕ್ತಿಗಳಿಂದ ಕನಿಷ್ಠ 120 ಎಕರೆ ಸಮತಟ್ಟು ಜಾಗ ಲಭ್ಯವಿದ್ದಲ್ಲಿ ಅದನ್ನು ಮಾರುಕಟ್ಟೆ ದರದಲ್ಲಿ ಖರೀದಿಸಲು ಸರ್ಕಾರ ಒಪ್ಪಿಗೆ ನೀಡಿದೆ ಎಂದು ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಹೇಳಿದರು.



ಡಾ. ಮಂಥರ್‌ಗೌಡ

ನಗರ ಸಮೀಪದ ಮಹೀಂದ್ರ ರೆಸಾರ್ಟ್‌ನಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ವಾಣಿಜ್ಯ ಮಹಾಸಂಸ್ಥೆ ವತಿಯಿಂದ ನಡೆದ ಸಂವಾದ ಕಾರ್ಯಕ್ರಮ ಹಾಗೂ ಕೊಡಗು ಜಿಲ್ಲೆಯ ಪ್ರವಾಸೋದ್ಯಮ ಹಾಗೂ ಇತರ ಅಭಿವೃದ್ಧಿ ಕುರಿತ ವಿಚಾರ ಸಂಕೀರ್ಣದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಕುಶಾಲನಗರ ಸಮೀಪದ ಚಿಕ್ಕ ಅಳುವಾರದಲ್ಲಿ ಜಾಗ ಗುರುತಿಸಿದ್ದರೂ ಅದು ಸೂಕ್ತವಲ್ಲ ಎಂದು ವರದಿ ಬಂದಿದ್ದು, ಹಾಗಾಗಿ ಮಡಿಕೇರಿ ಸಮೀಪ ಸಮತಟ್ಟು ಪ್ರದೇಶ ಲಭ್ಯವಾದಲ್ಲಿ ಅದನ್ನು ಸರ್ಕಾರ ಖರೀದಿಸಲಿದೆ. ಜಿಲ್ಲೆಯಲ್ಲಿ ನಾಲ್ಕು ಕಡೆ ಹೆಲಿಪೋರ್ಟ್ ಸ್ಥಾಪನೆಗೂ ಸರ್ಕಾರ ಮುಂದಾಗಿದೆ ಎಂದು ಮಾಹಿತಿ ನೀಡಿದರು. ಜಿಲ್ಲೆಯಲ್ಲಿ ಹಲವು ಹೋಂ ಸ್ಟೇಗಳು ಕಾನೂನಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದ್ದು, ಇದರಿಂದ ಪ್ರವಾಸಿಗರಿಗೂ ತೊಂದರೆ ಉಂಟಾಗುತ್ತಿದೆ. ಹಾಗಾಗಿ ಕಟ್ಟುನಿಟ್ಟಿನ ನಿಯಮ ಜಾರಿ ಅಗತ್ಯ ಎಂದು ಹೇಳಿದರು.

### ಸಿಎಂ ಸಿದ್ದರಾಮಯ್ಯರಿಗೆ ಸಂಪುಟ ಪುನರ್ರಚನೆಗೆ ವರಿಷ್ಠರು ಅನುಮತಿ ನೀಡದೇ ಇದ್ದರೆ...!?

## ರಾಜಣ್ಣ 'ನವೆಂಬರ್ ಕ್ರಾಂತಿ' ಭವಿಷ್ಯ

ಬೆಂಗಳೂರು, ಅ.27(ಕೆಎಂಶಿ)– ಸಂಪುಟ ಪುನರ್ರಚನೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅವಕಾಶ ನೀಡದಿದ್ದರೆ, ಮುಂದಿನ ರಾಜಕೀಯ ಬೆಳವಣಿಗೆಗಳು ಏನಾಗುವುದೋ ತಿಳಿಯದು ಎಂದು ಪಕ್ಷದ ಹಿರಿಯ ನಾಯಕ ಹಾಗೂ ಮಾಜಿ ಸಚಿವ ಕೆ.ಎನ್.ರಾಜಣ್ಣ ಇಂದಿಲ್ಲಿ ವರಿಷ್ಠರಿಗೆ ಪರೋಕ್ಷ ಎಚ್ಚರಿಕೆ ನೀಡಿದ್ದಾರೆ.

ಮಂತ್ರಿಮಂಡಲ ಪುನರ್ ರಚನೆಗೆ ಅವಕಾಶ ಮಾಡಿಕೊಟ್ಟರೆ ಸಿದ್ದರಾಮಯ್ಯ ಐದು ವರ್ಷ ಮುಖ್ಯಮಂತ್ರಿ ಅವಧಿ ಪೂರೈಸುತ್ತಾರೆ. ಒಂದು ವೇಳೆ ವರಿಷ್ಠರು ಸಂಪುಟ ಪುನರ್ ರಚನೆಗೆ ಅವಕಾಶ ನೀಡದಿದ್ದರೆ, ಎಲ್ಲಾ ರಾಜಕೀಯ ಬೆಳವಣಿಗೆಗಳು ತಲೆಕೆಳಗಾಗುತ್ತವೆ ಎಂದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿ ಆಗಿರಬೇಕು. ಕಳೆದ ಚುನಾವಣೆಯಲ್ಲಿ ಮತದಾರರು ಅವರ ನಾಯಕತ್ವಕ್ಕೆ ತೀರ್ಪು ನೀಡಿದ್ದಾರೆ ಎಂದರು.

ಬಿಜೆಪಿಗೆ ಬಿ.ಎಸ್.ಯಡಿಯೂರಪ್ಪ, ಜೆಡಿಎಸ್‌ಗೆ ಎಚ್.ಡಿ.ದೇವೇಗೌಡರು ಮತ್ತು ಅವರ ಕುಟುಂಬ ಹೇಗೆ ಅನಿವಾರ್ಯವೋ ಹಾಗೆಯೇ ಕಾಂಗ್ರೆಸ್‌ಗೆ ಸಿದ್ದರಾಮಯ್ಯ

### ಬಿಜೆಪಿಗೆ ಯಡಿಯೂರಪ್ಪ, ಜೆಡಿಎಸ್‌ಗೆ ದೇವೇಗೌಡರ ಕುಟುಂಬ, ಕಾಂಗ್ರೆಸ್‌ಗೆ ಸಿದ್ದರಾಮಯ್ಯ ಅನಿವಾರ್ಯ!



ಅನಿವಾರ್ಯ ಎಂದಿದ್ದಾರೆ. ಸಿದ್ದರಾಮಯ್ಯ ನಂತರ ದಲಿತರೊಬ್ಬರು ಮುಂದಿನ ಮುಖ್ಯಮಂತ್ರಿ ಆಗುವುದರಲ್ಲಿ ತಪ್ಪೇನಿದೆ ಎಂಬುದಾಗಿ ಪ್ರಶ್ನಿಸಿರುವ ಅವರು, ಆ ಸಮಾಜದವರು ನಾಯಕತ್ವ ವಹಿಸಿದರೆ ಎಲ್ಲರೂ ಸಂತೋಷ ಪಡಬೇಕು ಎಂದರು.

**ವರಿಷ್ಠರು ಮಧ್ಯ ಪ್ರವೇಶಿಸಬೇಕು:** ಮತ್ತೊಂದೆಡೆ ಮುಖ್ಯಮಂತ್ರಿ ಆಪ್ತ ಹಾಗೂ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಾತನಾಡಿ, ಕರ್ನಾಟಕ ಕಾಂಗ್ರೆಸ್ ನಾಯಕತ್ವದಲ್ಲಿರುವ ಗೊಂದಲವನ್ನು ವರಿಷ್ಠರು ಮಧ್ಯಪ್ರವೇಶಿಸಿ ಬಗೆಹರಿಸಬೇಕಿದೆ ಎಂದಿದ್ದಾರೆ.

ನವೆಂಬರ್ 30ರೊಳಗೆ ನಾಯಕತ್ವ ಸಮಸ್ಯೆ ಪರಿಹರಿಸಿ ಆಡಳಿತ ಸುಸೂತ್ರವಾಗಿ ನಡೆಯಲು ಅವಕಾಶ ಮಾಡಿ ಕೊಡಬೇಕು. ಅಲ್ಲದೆ, ಸಿದ್ದರಾಮಯ್ಯ ಅವರೇ ಐದು ವರ್ಷಕ್ಕೆ ಮುಖ್ಯಮಂತ್ರಿಯಾಗಿ ಮುಂದುವರೆಯಬೇಕು ಎಂದು ತಿಳಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಭಾನುವಾರ ದಿಢೀರನೆ ದೆಹಲಿಗೆ ತೆರಳುತ್ತಿದ್ದಂತೆ ಮುಖ್ಯಮಂತ್ರಿ ಆಪ್ತ ಸಚಿವರುಗಳು ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿ ಎಂದು ಸ್ವಯಂ ಪ್ರೇರಿತವಾಗಿ ಘೋಷಿಸುತ್ತಿದ್ದಾರೆ.

ಮುಖ್ಯಮಂತ್ರಿ ಪುತ್ರ ಡಾ.ಯತೀಂದ್ರ ಅಹಿಂದ ಸಂಘಟನೆಗೆ ಸಂಬಂಧಿಸಿದಂತೆ ತಮ್ಮನ್ನು ಮುಂದಿನ ನಾಯಕರೆಂದು ಬಿಂಬಿಸಿರುವುದನ್ನು ತಪ್ಪಾಗಿ ■6ನೇ ಪುಟಕ್ಕೆ

### ಧರ್ಮಸ್ಥಳ ಪ್ರಕರಣದ ತನಿಖಾ ಅಂತಿಮ ವರದಿ ಸಲ್ಲಿಸಲು ಗೃಹ ಸಚಿವರ ಸೂಚನೆ

ಬೆಂಗಳೂರು, ಅ.27(ಕೆಎಂಶಿ)–ಧರ್ಮಸ್ಥಳ ಪ್ರಕರಣದ ತನಿಖೆಯ ಅಂತಿಮ ವರದಿ ಸಲ್ಲಿಸುವಂತೆ ವಿಶೇಷ ತನಿಖಾ ತಂಡ (ಎಸ್‌ಐಟಿ)ಕ್ಕೆ ಸೂಚಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಕ್ಟೋಬರ್‌ನಲ್ಲಿ ವರದಿ ಕೊಡುವುದಾಗಿ ಎಸ್‌ಐಟಿ ಅಧಿಕಾರಿಗಳು ತಿಳಿಸಿದ್ದರು, ಈ ತಿಂಗಳ 31ರೊಳಗೆ ಅಥವಾ ಒಂದೆರಡು ದಿನ ವಿಳಂಬವಾಗಬಹುದು, ಅಂತಿಮ ವರದಿ ಕೊಡುವಂತೆ ಹೇಳಿದ್ದೇವೆ ಎಂದರು.





### ದೇಶಾದ್ಯಂತ ಮತದಾರರ ಪಟ್ಟಿ

## ವಿಶೇಷ ಸಮಗ್ರ ಪರಿಷ್ಕರಣೆ

ಭಾರತೀಯ ಚುನಾವಣಾ ಆಯೋಗ ಘೋಷಣೆ

### ಎರಡನೇ ಹಂತದಲ್ಲಿ 10 ರಾಜ್ಯ, 2 ಕೇಂದ್ರಾಡಳಿತ ಪ್ರದೇಶಗಳಲ್ಲಿ ಪರಿಷ್ಕರಣೆ; ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮಾಹಿತಿ

**ನವದೆಹಲಿ:** ದೇಶದಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕೈಗೊಳ್ಳಲು ಮುಂದಾಗಿರುವ ಕೇಂದ್ರ ಚುನಾವಣಾ ಆಯೋಗ, ಎರಡನೇ ಹಂತದಲ್ಲಿ 10 ರಾಜ್ಯ ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ಆರಂಭಿಸುತ್ತಿದೆ.



ಜ್ಞಾನೇಶ್ ಕುಮಾರ್

ಭಾರತೀಯ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಎರಡನೇ ಹಂತದ ಎಸ್‌ಐಆರ್ ವೇಳಾಪಟ್ಟಿ ಪ್ರಕಟಿಸಿ, ಈಗ ಕೈಗೊಂಡಿರುವ ವಿಶೇಷ ಸಮಗ್ರ ಪರಿಷ್ಕರಣೆಯು ಸ್ವಾತಂತ್ರ್ಯದ ಬಳಿಕ ನಡೆಯುತ್ತಿರುವ ಒಂಬತ್ತನೇ ಪ್ರಕ್ರಿಯೆಯಾಗಿದೆ. 2002–04ರಲ್ಲಿ ಕೊನೆಯದಾಗಿ ಎಸ್‌ಐಆರ್ ನಡೆದಿತ್ತು ಎಂದು ಹೇಳಿದರು.

ಎರಡನೇ ಹಂತದಲ್ಲಿ ಎಸ್‌ಐಆರ್ ನಡೆಯಲಿರುವ ತಮಿಳುನಾಡು, ಪುದುಚೇರಿ, ಕೇರಳ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ 2026ರಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಅಸ್ಸಾಂನಲ್ಲೂ ಮುಂದಿನ ವರ್ಷ ಚುನಾವಣೆ ನಡೆಯಲಿದ್ದು, ಅಲ್ಲಿನ ಎಸ್‌ಐಆರ್ ಪ್ರಕ್ರಿಯೆಯ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ಘೋಷಿಸಲಾಗುವುದು ಎಂದರು.

ಮೊದಲ ಹಂತದಲ್ಲಿ ಬಿಹಾರದಲ್ಲಿ ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅಂತಿಮ ಪಟ್ಟಿ ಸಂಬಂಧ ಅಲ್ಲಿ ಯಾವುದೇ ಮೇಲ್ಮನವಿ ಸಲ್ಲಿಕೆಯಾಗಿಲ್ಲ. ಯಾವುದೇ ಅರ್ಹ ಮತದಾರರೂ ಪಟ್ಟಿಯಿಂದ ಹೊರಗುಳಿಯದಂತೆ ಮತ್ತು ಯಾವುದೇ ಅನರ್ಹ ಮತದಾರರು ಪಟ್ಟಿಯಲ್ಲಿ ಉಳಿಯದಂತೆ ಎಸ್‌ಐಆರ್ ■6ನೇ ಪುಟಕ್ಕೆ



**ಎಸ್‌ಐಆರ್ ವೇಳಾಪಟ್ಟಿ**

ಎರಡನೇ ಹಂತದಲ್ಲಿ ಅಂಡಮಾನ್ ಮತ್ತು ನಿಕೋಬಾರ್, ಲಕ್ಷದ್ವೀಪ, ಛತ್ತೀಸಗಢ, ಗೋವಾ, ಗುಜರಾತ್, ಕೇರಳ, ಮಧ್ಯ ಪ್ರದೇಶ, ಪುದುಚೇರಿ, ರಾಜಸ್ಥಾನ, ತಮಿಳುನಾಡು, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ನಡೆಯಲಿದ್ದು, ಒಟ್ಟಾರೆ 51 ಕೋಟಿ ಮತದಾರರ ಪಟ್ಟಿ ಪರಿಷ್ಕರಣೆ ನಡೆಯಲಿದೆ. ನ.4ಕ್ಕೆ ಗಣತಿ ಪ್ರಕ್ರಿಯೆ ಆರಂಭವಾಗಲಿದ್ದು, ಡಿ.9ಕ್ಕೆ ಮತದಾರರ ಕರಡು ಪಟ್ಟಿ ಹಾಗೂ 2026ರ ಫೆ.7ರಂದು ಅಂತಿಮ ಪಟ್ಟಿ ಪ್ರಕಟಿಸಲಾಗುವುದು.

### ಮಾನವ-ವನ್ಯಜೀವಿ ಸಂಘರ್ಷ ನಿಯಂತ್ರಣಕ್ಕೆ

# ರಾಜ್ಯ ಮಟ್ಟದ ಸಂಘರ್ಷ ನಿರ್ವಹಣಾ ಕಾರ್ಯಪಡೆ ರಚನೆ

● ಅರಣ್ಯಾಧಿಕಾರಿಗಳಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ● ಇದು ಸ್ಥಳೀಯ ಜನಪ್ರತಿನಿಧಿಗಳು, ಎನ್‌ಜಿಓಗಳು, ಪರಿಸರ ತಜ್ಞರ ಒಳಗೊಂಡಿರಲಿದೆ ● ಕಾಡಂಚಿನ ಜನರೊಂದಿಗೆ ಬಾಂಧವ್ಯ ಕಾಯ್ದುಕೊಂಡು ಕಾರ್ಯಸಾಧನೆಗೆ ಸಚಿವರ ಕಿವಿಮಾತು

ಬಂಡೀಪುರ, ಅ.27(ಎಂಟಿವೈ)– ಮಾನವ–ವನ್ಯಜೀವಿ ಸಂಘರ್ಷ ನಿಯಂತ್ರಣಕ್ಕೆ ಸ್ಥಳೀಯ ಜನಪ್ರತಿನಿಧಿಗಳು, ಎನ್‌ಜಿಓಗಳು, ಪರಿಸರ ತಜ್ಞರನ್ನು ಒಳಗೊಂಡ ರಾಜ್ಯಮಟ್ಟದ ವನ್ಯಜೀವಿ–ಮಾನವ ಸಂಘರ್ಷ ನಿರ್ವಹಣಾ ಕಾರ್ಯಪಡೆ ರಚಿಸುವಂತೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸೂಚಿಸಿದ್ದಾರೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ನಿರ್ದೇಶಕರ ಕಚೇರಿಯಲ್ಲಿ ಸೋಮವಾರ ಸಂಜೆ ಹೆಚ್.ಡಿ.ಕೋಟೆ ಹಾಗೂ ಗುಂಡ್ಲುಪೇಟೆ ಶಾಸಕರು, ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಸರಗೂರು ತಾಲೂಕಿನಲ್ಲಿ ನಡೆದ ಹುಲಿ ದಾಳಿಯ 2 ಪ್ರಕರಣ ಕುರಿತು ಚರ್ಚಿಸಿದರು.

ಮಾನವ–ವನ್ಯಜೀವಿ ಸಂಘರ್ಷ ತಡೆಗೆ ರಾಜ್ಯಮಟ್ಟದ ವನ್ಯಜೀವಿ ಮಾನವ ಸಂಘರ್ಷ ನಿರ್ವಹಣಾ ಕಾರ್ಯಪಡೆ ರಚಿಸಿ, ಆ ಮೂಲಕ ಕಾಡಂಚಿನ ಗ್ರಾಮಗಳ ಜನರಿಗೆ ವನ್ಯ ಜೀವಿಗಳೊಂದಿಗೆ ಸಹಬಾಳ್ವೆ ನಡೆಸುವುದು ಹೇಗೆ. ವನ್ಯಜೀವಿಗಳ ವಿಚಾರದಲ್ಲಿ ಏನೆಲ್ಲಾ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು ಜಾಗೃತಿ ಮೂಡಿಸಲಿದ್ದಾರೆ. ಜೊತೆಗೆ ಕಾಡಂಚಿನ ಶಾಲೆಗಳಿಗೆ ತೆರಳಿ ವಿದ್ಯಾರ್ಥಿಗಳಿಗೆ ವನ್ಯ ಜೀವಿಗಳ ವಿಚಾರದಲ್ಲಿ ಹೇಗೆ ಸಂವೇದನಾಶೀಲರಾಗಿರಬೇಕು ಎಂಬ ಬಗ್ಗೆ ಮಾಹಿತಿ ನೀಡಲಿದ್ದಾರೆ. ಅಧಿಕಾರಿಗಳು ಮತ್ತು ಗ್ರಾಮಸ್ಥರ ನಡುವೆ ಸ್ನೇಹಸೇತುವಾಗಿ ಈ ಕಾರ್ಯಪಡೆ ಕಾರ್ಯ ನಿರ್ವಹಿಸಲಿದೆ ಎಂದರು.

ಆನೆ, ಹುಲಿ, ಚಿರತೆ ಸೇರಿದಂತೆ ಯಾವುದೇ ವನ್ಯಜೀವಿ ಸೆರೆ ಕಾರ್ಯಾಚರಣೆ ವೇಳೆ ಪ್ರಮಾಣಿತ ಮಾನದಂಡ



ಮಾನವ–ವನ್ಯಜೀವಿ ಸಂಘರ್ಷ ತಡೆ ಸಂಬಂಧ ಅರಣ್ಯ ಸಚಿವ ಈಶ್ವರ ಖಂಡ್ರೆ ಬಂಡೀಪುರದಲ್ಲಿ ವಿಶೇಷ ಸಭೆ ನಡೆಸಿದರು.

(ಎಸ್‌ಓಪಿ) ಪಾಲಿಸಬೇಕು. 155 ಸೆಕ್ಷನ್ ಅಡಿಯಲ್ಲಿ ನಿರ್ಬಂಧಕಾಜ್ಞೆ ವಿಧಿಸಿ, ಕಾರ್ಯಾಚರಣೆ ನಡೆಸಬೇಕು. ಅರಣ್ಯ ಸಿಬ್ಬಂದಿ, ಅರಣ್ಯಾಧಿಕಾರಿಗಳು ಅರಣ್ಯದಂಚಿನ ಗ್ರಾಮಸ್ಥರೊಂದಿಗೆ ಸೌಹಾರ್ದತೆ ಕಾಪಾಡಿಕೊಳ್ಳಬೇಕು. ಆನೆ, ಹುಲಿ ವಸತಿ ಪ್ರದೇಶದಲ್ಲಿ ಬಂದರೆ ಕೂಡಲೇ ಮೈಕ್‌ಗಳ ಮೂಲಕ ಜನರಿಗೆ ಮಾಹಿತಿ ನೀಡಬೇಕು. ಸಾಮಾಜಿಕ ಜಾಲತಾಣಗಳ ಮೂಲಕ ಸಕಾಲದಲ್ಲಿ ಮಾಹಿತಿ ರವಾನಿಸಬೇಕು ಎಂದರು.

**ವಾಟ್ಸ್‌ಅಪ್ ಮಾಹಿತಿ:** ಥರ್ಮಲ್ ಕ್ಯಾಮರಾ, ಡ್ರೋನ್ ಸೇರಿದಂತೆ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ವನ್ಯಜೀವಿಗಳು ವಸತಿ ಪ್ರದೇಶಗಳ ಬಳಿ ಮತ್ತು ಕಾಡಂಚಿನ ಗ್ರಾಮಗಳ ■6ನೇ ಪುಟಕ್ಕೆ

### ಏಕ ಬಳಕೆ ಪ್ಲಾಸ್ಟಿಕ್ ಅರಣ್ಯ ಪ್ರದೇಶ ಸೋಕ ಕೂಡದು



ಬಂಡೀಪುರ, ಅ.27(ಎಂಟಿವೈ)– ಅರಣ್ಯ ಪ್ರದೇಶದೊಳಗೆ ಏಕ ಬಳಕೆ ಪ್ಲಾಸ್ಟಿಕ್ ಸೋಕದಂತೆ ಈ ಮಾರ್ಗದಲ್ಲಿ ಸಂಚರಿಸುವ ವಾಹನಗಳ 2 ಹಂತದ ತಪಾಸಣೆಗೆ ಅರಣ್ಯ ಸಚಿವ ಈಶ್ವರ ಬಿ ಖಂಡ್ರೆ ಚಾಲನೆ ನೀಡಿದರು.

ಬಂಡೀಪುರ, ನಾಗರಹೊಳೆ ಸೇರಿದಂತೆ ರಾಜ್ಯದ ಅರಣ್ಯ ಪ್ರದೇಶದೊಳಗಿನ ರಸ್ತೆಯಲ್ಲಿ ಸಂಚರಿಸುವ ವಾಹನಗಳ ಪ್ರಯಾಣಿಕರಿಗೆ ಮೊದಲ ಹಂತದಲ್ಲಿ ಸ್ವಯಂ ಪ್ರೇರಿತವಾಗಿ ಕಸದ ಬುಟ್ಟಿಗೆ ಏಕ ಬಳಕೆ ಪ್ಲಾಸ್ಟಿಕ್ ಉತ್ಪನ್ನ ಹಾಕಲು ಸೂಚಿಸಲಾಗುತ್ತದೆ. 2ನೇ ಹಂತದಲ್ಲಿ ಸಿಬ್ಬಂದಿ ತಪಾಸಣೆ ನಡೆಸಿದಾಗ ವಾಹನದಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಕಂಡು ಬಂದರೆ ದಂಡ ವಿಧಿಸಲಾಗುವುದು ಎಂದು ತಿಳಿಸಿದರು.

ಕಾಡಿನೊಳಗೆ ಏಕ ಬಳಕೆ ಪ್ಲಾಸ್ಟಿಕ್ ಪ್ರವೇಶಿಸಿದರೆ ವನ್ಯಜೀವಿಗಳು ಅದನ್ನು ತಿಂದು ನಾನಾ ಸೋಂಕಿನಿಂದ ನರಳುತ್ತವೆ. ಕೊನೆಗೆ ಸಾಯುತ್ತವೆ. ನಮ್ಮ ಸಿಬ್ಬಂದಿ ಈಗಾಗಲೇ ಪ್ರತಿ ನಿತ್ಯ ಕಾಡಿನ ಮಾರ್ಗದಲ್ಲಿ ಪ್ಲಾಸ್ಟಿಕ್ ಸಂಗ್ರಹಿಸುತ್ತಿದ್ದಾರೆ. ಅವರ ಮೇಲೆ ವನ್ಯಜೀವಿಗಳು ದಾಳಿ ಮಾಡುವ ಸಾಧ್ಯತೆಯೂ ಇರುತ್ತದೆ. ಹೀಗಾಗಿ ಈ ಎರಡು ಹಂತದ ತಪಾಸಣಾ ವ್ಯವಸ್ಥೆ ಪರಿಣಾಮಕಾರಿಯಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

## ನಕ್ಕರೆ ಅದೇ ಸ್ವರ್ಗ

ಹುಡುಗ : ಸಿಸ್ಟರ್, ನಂಗೆ ಒಂದು ಬಾಟಲ್ ಬ್ಲಡ್ ಬೇಕು.
ನರ್ಸ್ : ಬ್ಲಡ್ ಗ್ರೂಪ್ ಹೇಳಿ.
ಹುಡುಗ : ಯಾವ್ದಾದ್ರು ಆಗುತ್ತೆ.
ನರ್ಸ್ : ಅದು ಹೇಗೆ ಆಗುತ್ತೇ?
ಹುಡುಗ : ಅರೆ, ಅದು ನನ್ನ ಗರ್ಲ್‌ಫ್ರೆಂಡ್‌ಗೆ ಲವ್ ಲೆಟರ್ ಬರೆಯೋಕೆ!

**ಮೈಸೂರು ಮಿತ್ರ**

ಮಂಗಳವಾರ, 28 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತ ವಾಹಿನಿ......

ಮಾತಿನ ಬೆಲೆ ತಿಳಿದವರು ಹೃದಯದ ತಕ್ಕಡಿಯಲ್ಲಿ ತೂಗಿ ಅನಂತರ ಬಾಯಿಯಿಂದ ಹೊರಗೆ ಹಾಕುತ್ತಾರೆ. –ಸಂತ ಕಬೀರ ದಾಸ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ !

## ನಿಮ್ಮ ಪತ್ರಗಳು

### ■ ಹಾಸನದ ಡಿಸಿಯವರಿಗೆ ಅಭಿನಂದನೆಗಳು

ಮಾನ್ಯರೆ,

ಇತ್ತೀಚೆಗೆ ಅತ್ಯಂತ ವೈಭವೋಪೇತವಾಗಿ ಹಾಗೂ ಯಶಸ್ವಿಯಾಗಿ ಮುಕ್ತಾಯಗೊಂಡ ಹಾಸನ ನಗರದ ಅಧಿದೇವತೆ 'ಹಾಸನಾಂಬ ದರ್ಶನ' ಇಡೀ ರಾಜ್ಯದ ಗಮನವನ್ನೇ ಸೆಳೆದಿದೆ. ಈ ಬಾರಿ ದಾಖಲೆಯ ಪ್ರಮಾಣದಲ್ಲಿ ಅಂದರೆ ಸುಮಾರು 25 ಲಕ್ಷಕ್ಕೂ ಅಧಿಕ ಭಕ್ತರು ದೇವಿಯ ದಿವ್ಯ ದರ್ಶನ ಪಡೆದು ಪುನೀತರಾಗಿದ್ದಾರೆ, ಎಂದು ಹೇಳಲಾಗಿದೆ. ಇದರ ಜೊತೆಗೆ ಮತ್ತೊಂದು ಗಮನಾರ್ಹ ವಿಚಾರವೆಂದರೆ, ಕೊನೆಯ ದಿನದಂದು ಹಾಸನ ಜಿಲ್ಲಾಧಿಕಾರಿ ಲತಾ ಕುಮಾರಿಯವರು ಕೆಂಡ ಹಾಯ್ದದ್ದು ಕೂಡ ಪ್ರಮುಖ ಸುದ್ದಿಯಾಗಿ ಮಾಧ್ಯಮಗಳಲ್ಲಿ ವರದಿಯಾಗಿದೆ. ಜಾತ್ರೆ, ಹಬ್ಬ–ಹರಿದಿನ ಹಾಗೂ ಇನ್ನಿತರ ಧಾರ್ಮಿಕ ಸಮಾರಂಭಗಳಲ್ಲಿ ಕೆಂಡದ ಮೇಲೆ ನಡೆಯುವುದು ಅಥವಾ ಹಾಯುವುದು ಒಂದು ಧಾರ್ಮಿಕ ಆಚರಣೆಯಾಗಿ ಅನಾದಿ ಕಾಲದಿಂದಲೂ ಸಾಗಿ ಬಂದಿದೆ. ಇದನ್ನು 'ಕೊಂಡೋತ್ಸವ' ಎಂದು ಕೂಡ ಕರೆಯಲಾಗುತ್ತದೆ. ನಿಗಿ ನಿಗಿ ಉರಿಯುವ ಕೆಂಡದ ಮೇಲೆ ನಡೆದು ತಮ್ಮ ಭಕ್ತಿ ಭಾವವನ್ನು ಪ್ರದರ್ಶಿಸುವ ಅನೇಕ ಭಕ್ತರು, ಇಂದಿನ ವೈಜ್ಞಾನಿಕ ಯುಗದಲ್ಲೂ ಸಹ ಕಾಣದ ದೇವರ ಪ್ರಭಾವಗಳಿಗೆ ಪ್ರತ್ಯಕ್ಷ ಸಾಕ್ಷಿಯಾಗುತ್ತಾರೆ. ಇಂತಹ ವಿಶಿಷ್ಟವಾದ ಆಚರಣೆಯಲ್ಲಿ ಜಿಲ್ಲಾಧಿಕಾರಿಗಳು ತಾವೇ ಸ್ವತಃ ಭಾಗಿಯಾಗಿ ಗಮನ ಸೆಳೆದಿದ್ದಾರೆ. ಅವರಿಗೆ ಅಭಿನಂದನೆಗಳು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

### ■ ಅಮಾಯಕ ರೈತ ಜೀವಗಳಿಗೆ ಬೆಲೆ ಇಲ್ಲವೇ?

ಮಾನ್ಯರೆ,

ಸರಗೂರು ತಾಲೂಕಿನ ಮುಳ್ಳೂರಿನ ಬೆಣ್ಣೆಗೆರೆ ಗ್ರಾಮದ ರೈತ ರಾಜಣ್ಣ ಹುಲಿ ದಾಳಿಗೆ ಬಲಿಯಾಗಿದ್ದಾರೆ. ದಯವಿಟ್ಟು ಕಾಡಂಚಿನಲ್ಲಿರುವ ಗ್ರಾಮಗಳ ರೈತರು ಬಹಳ ಎಚ್ಚರಿಕೆಯಿಂದ ಇರುವುದು ಒಳ್ಳೆಯದು. ಅರಣ್ಯ ಇಲಾಖೆಯ ನಿರ್ಲಕ್ಷ್ಯದಿಂದ ಅಮಾಯಕ ರೈತರು ಬಲಿಯಾಗುತ್ತಿದ್ದಾರೆ. ಬಡಗಲಪುರ ರೈತರೊಬ್ಬರ ಮೇಲೆ ಕೆಲವು ದಿನಗಳ ಹಿಂದೆ ದಾಳಿ ಮಾಡಿದ್ದು, ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆ ಘಟನೆ ಮಾಸುವ ಮೊದಲೇ ಎರಡನೆಯ ಘಟನೆ ನಡೆದಿರುವುದು ತಾಲೂಕಿನಲ್ಲಿ ಅಘಾತಕಾರಿ ಹಾಗೂ ದೊಡ್ಡ ದುರಂತವಾಗಿದೆ. ಇನ್ನಾದರೂ ಸರ್ಕಾರ ಮತ್ತು ಅರಣ್ಯ ಇಲಾಖೆಯು ಎಚ್ಚೆತ್ತುಕೊಳ್ಳಬೇಕು. ನಾಡಿನಲ್ಲಿರುವ ಕಾಡುಪ್ರಾಣಿಗಳನ್ನು ಕಾಡಿಗೆ ಕಳಿಸುವಂತಹ ಕೆಲಸವಾಗಬೇಕು. ಅರಣ್ಯ ಸಿಬ್ಬಂದಿ ಗಸ್ತು ತಿರುಗಬೇಕು. ಸರಗೂರು ತಾಲೂಕಿನಲ್ಲಿ ಕಾಡು ಪ್ರಾಣಿಗಳ ಉಪಟಳ ಹೆಚ್ಚಾಗಿದ್ದು, ರೈತರು ಭಯಭೀತರಾಗಿ ಬದುಕನ್ನು ನಡೆಸುತ್ತಿದ್ದಾರೆ. ತಮ್ಮ ಜಮೀನುಗಳಿಗೆ ಕೃಷಿ ಚಟುವಟಿಕೆಗಳಿಗೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ. ಹೀಗಾದರೆ ಅವರ ಬದುಕಿನ ಬಂಡಿ ಸಾಗುವುದು ಹೇಗೆ? ಈ ಭಾಗದ ರೈತರು ತುಂಬಾ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ರೈತರ ಕಷ್ಟಗಳಿಗೆ ಈ ಭಾಗದ ಶಾಸಕರಾಗಲೀ, ಅರಣ್ಯ ಇಲಾಖೆಯಾಗಲೀ, ಅರಣ್ಯ ಸಚಿವರಾಗಲೀ, ಸರ್ಕಾರವಾಗಲೀ ಸ್ಪಂದನೆ ಇಲ್ಲದಿರುವುದು ಬಹಳ ನೋವಿನ ಸಂಗತಿ. ಇತ್ತೀಚಿನ ದಿನಗಳಲ್ಲಿ ಕಾಡು ಪ್ರಾಣಿಗಳ ಉಪಟಳ ಹೆಚ್ಚಾಗಿದ್ದು, ಇದರಿಂದ ರೈತರು ಅನೇಕ ನೋವು ಮತ್ತು ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಅಮಾಯಕ ರೈತರ ಜೀವಗಳು ಬಲಿಯಾಗುತ್ತಿವೆ. ಆ ಜೀವಗಳಿಗೆ ಬೆಲೆ ಇಲ್ಲವೇ? ಆ ಕುಟುಂಬಗಳ ರೋಧನೆ, ದುಃಖವು ಮುಗಿಲು ಮುಟ್ಟುತ್ತಿದೆ. ಆಗಾಗ ಇಂತಹ ಘಟನೆಗಳು ನಡೆಯುತ್ತಿದ್ದರೂ ಸರ್ಕಾರವು ಕಣ್ಣು ಮುಚ್ಚಿ ಕುಳಿತಿದೆ ಎಂದು ರೈತರು ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ. ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಈ ಭಾಗದ ಜನರಿಗೆ ಕಲ್ಪಿಸಬೇಕೆಂಬುದು ನನ್ನ ಮಹದಾಸೆಯಾಗಿದೆ.

–ಪರಶಿವಮೂರ್ತಿ ಎನ್ ಪಿ. ನಂಜೀಪುರ, ಸರಗೂರು ತಾ.

### ■ ಮೈಸೂರು ಪಾಲಿಗೆ ಕಪ್ಪುಚುಕ್ಕೆ

ಮಾನ್ಯರೆ,

ಮೈಸೂರು ಸಾಂಸ್ಕೃತಿಕ ನಗರಿ ಎಂದೇ ಹೆಸರಾಗಿದೆ. ಇಲ್ಲಿಯ ರಾಜಕಾರಣಿಗಳು ಸಹ ಪಕ್ಷಾತೀತವಾಗಿ ಸುಸಂಸ್ಕೃತ ರಾಜಕಾರಣಕ್ಕೆ ಹೆಸರುವಾಸಿಯಾಗಿದ್ದರು. ದಿವಂಗತ ದೇವರಾಜ ಅರಸು, ತುಳಸಿದಾಸ್‌ದಾಸಪ್ಪ, ಶ್ರೀಕಂಠದತ್ತರು, ಕೆ.ಪುಟ್ಟಸ್ವಾಮಿ, ಕೆಂಪೀರೆಗೌಡರು, ಕೆಂಪೇಗೌಡರು, ಪಿ.ಚಿಕ್ಕಬೋರಯ್ಯ, ಶಂಕರಲಿಂಗೇಗೌಡರು, ವಾಸು, ಸತ್ಯನಾರಾಯಣ, ಅಜೀಜ್ ಸೇಠ್ ಮುಂತಾದ ಹಲವಾರು ರಾಜಕಾರಣಿಗಳು ಘನತೆ ಗೌರವಕ್ಕೆ ಹೆಸರಾದವರು. ಅವರೆಲ್ಲಾ ಮಾಡಿದ್ದು ರಾಜಕಾರಣವೇ ಆದರೂ, ರಾಜಕಾರಣದ ಹೆಸರಿನಲ್ಲಿ ಅನಾಗರಿಕ ಭಾಷೆ ಬಳಸುವುದಾಗಲೀ, ವೈಯಕ್ತಿಕ ತೇಜೋವಧೆ ಮಾಡಿದ್ದಾಗಲೀ ಇಲ್ಲವೇ ಇಲ್ಲ.

ಆದರೆ ಮೈಸೂರಿನ ಮಾಜಿ ಸಂಸದರಾದ ಪ್ರತಾಪ್ ಸಿಂಹ ಅವರು ಕಳೆದ ಒಂದು ವರ್ಷದಿಂದ ಪ್ರತಿ ದಿನವೂ ಅತ್ಯಂತ ಕೀಳು ಮಟ್ಟದ ಭಾಷೆಯನ್ನು ಬಳಸಿ ತಮ್ಮ ಎದುರಾಳಿಗಳನ್ನು ಟೀಕಿಸುತ್ತಿರುವುದು ಮೈಸೂರಿನ ಸಮಸ್ತ ಪ್ರಜ್ಞಾವಂತ ಜನರಿಗೆ ಆಘಾತವನ್ನು ಉಂಟುಮಾಡಿದೆ. ಪ್ರತಾಪ್ ಸಿಂಹ ಅವರ ಈ ನಡೆ ಮೈಸೂರು ಇತಿಹಾಸಕ್ಕೆ ಮತ್ತು ಇಲ್ಲಿಯ ಸಂಸ್ಕೃತಿಗೆ ಕಪ್ಪು ಚುಕ್ಕೆಯಾಗಿ ಪರಿಣಮಿಸುತ್ತಿದೆ. ಅವರು ಕೂಡಲೇ ಇಂತಹ ಅಸಭ್ಯ ನಡವಳಿಕೆಯನ್ನು ನಿಲ್ಲಿಸಬೇಕು. ಹಾಗೆಯೇ ಮಾಧ್ಯಮಗಳು ಸಹ ಅವರ ಅಂತಹ ಹೇಳಿಕೆಗಳಿಗೆ ಅನಗತ್ಯ ಪ್ರಚಾರ ಕೊಡುವುದನ್ನು ನಿಲ್ಲಿಸಬೇಕು.

–ಕುಂಬಾರ ಕೊಪ್ಪಲು ಕುಮಾರಗೌಡ, ಉಪಾಧ್ಯಕ್ಷ, ಮೈಸೂರು ರಕ್ಷಣಾ ವೇದಿಕೆ

### ■ ನಾಡಗೀತೆಯು ಮಾಧ್ಯಮಗಳಲ್ಲಿ ಪ್ರಸಾರವಾಗಲಿ

ಮಾನ್ಯರೆ,

ರಾಷ್ಟ್ರಕವಿ ಕುವೆಂಪುರವರು ಬರೆದಿರುವ 'ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಗೀತೆಯು ದೇಶ, ರಾಜ್ಯ, ನಾಡು, ನುಡಿ, ಸಂಸ್ಕೃತಿ, ಜಾತಿ, ಧರ್ಮ, ನದಿ ಸಾಗರಗಳನ್ನೊಳಗೊಂಡು ಮಹನೀಯರ ಮಹತ್ವವನ್ನು ಸಮಾಜಕ್ಕೆ ಸಾರಿ ಸಾರಿ ತಿಳಿಸುತ್ತದೆ. ಅಲ್ಲದೆ ಈ ವರ್ಷವೇ ನೂರು ವರ್ಷಗಳನ್ನು ಪೂರ್ಣಗೊಳಿಸಿರುವ ಹಿನ್ನೆಲೆಯಲ್ಲಿ ಇಂದು ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯ ನಾಗರಿಕರತನಕ ದೃಶ್ಯ ಮಾಧ್ಯಮಗಳಿಗೆ ಹೆಚ್ಚು ಹೊತ್ತು ನೀಡುತ್ತಿದ್ದಾರೆ. ಆದ್ದರಿಂದ ಕನ್ನಡದ ಎಲ್ಲಾ ಚಾನೆಲ್‌ಗಳು, ರೇಡಿಯೋ, ಆಕಾಶವಾಣಿ ಮತ್ತು ಚಂದನ ದೂರದರ್ಶನದಲ್ಲಿ ಪ್ರತಿದಿನ ಮುಂಜಾನೆ ಮತ್ತು ಸಂಜೆ ವೇಳೆಯಲ್ಲಿ ನಮ್ಮ ನಾಡಿನ ನಾಡಗೀತೆಯನ್ನು ಪ್ರಸಾರ ಮಾಡಿದರೆ ನಾಡು–ನುಡಿ ಸಂಸ್ಕೃತಿಯನ್ನು ಇಂದಿನ ಮಕ್ಕಳಿಗೆ ತಿಳಿಸಲು ಅನುಕೂಲವಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ದೀಪ ಸಾಲು

# ಸುಂದರ ಸ್ವಪ್ನ ಸಾಮೀಪ್ಯದ ಸಾಂಗತ್ಯಗಳು

ಸಂಸ್ಕೃತ ನಾಟಕಕಾರ ಭಾಸ ಕವಿಯ 'ಸಪ್ನ ವಾಸವದತ್ತ' ಪ್ರತಿಜ್ಞ ಯೌಗಂಧರಾಯಣ ನಾಟಕ ಓದುತ್ತಿದ್ದೆ. ವಾಸವದತ್ತೆಯ 'ಸ್ವಪ್ನ'– ಯೌಗಂಧರಾಯಣದ ಪ್ರತಿಜ್ಞೆಯಲ್ಲಿ ಸಂಪನ್ನಗೊಳ್ಳುವ ನಾಟಕದ ಸ್ವರೂಪ ಅದು. ಇಲ್ಲಿ ನಾನು ಹೇಳ ಹೊರಟಿರುವುದು ಸಂಸ್ಕೃತದ ಭಾಸಕವಿಯ ನಾಟಕದ ಕತೆಯನ್ನಲ್ಲ; ಅಥವಾ ನಾಟಕದ ವಿಮರ್ಶೆಯನ್ನೂ ಅಲ್ಲ. ನಮ್ಮ ನಮ್ಮ ಬದುಕಿನಲ್ಲಿ ಅಯಾಚಿತವಾಗಿ ಹುಟ್ಟಿ ಆಕಸ್ಮಿಕವಾಗಿ ಅವಲಂಬಿಸಿಕೊಂಡು ಸುಖ ನಿದ್ರೆಯ ಮಂಪರಿನಲ್ಲೇ ನಮ್ಮನ್ನು ತನ್ನಭಾವ ಬಂಧುರಗಳ ಬೇಲಿಯಲ್ಲಿ ಬಂಧಿಸಿ ಮುದ ನೀಡುವ ಸ್ವಪ್ನಗಳ ಬಗ್ಗೆ! ಸ್ವಪ್ನಗಳು ಬೇರೆಯಲ್ಲ, ಕನಸುಗಳು ಬೇರೆಯಲ್ಲ.

ವ್ಯಾಖ್ಯಾನ ಮಾಡುವಾಗ ಮಾತ್ರ ಎಚ್ಚರದ ವಾತಾವರಣದಲ್ಲಿ ಪ್ರತಿಯೊಂದು ನಾಗರಿಕ ಸಮಾಜದ ಸದಸ್ಯನೂ ತನ್ನ ಬದುಕಿನ ಬೆಳವಣಿಗೆಗಳ ಕುರಿತು ಅಭಿವೃದ್ಧಿಯ ನೀಲನಕ್ಷೆಯನ್ನೇ ಇದು ನನ್ನ ಬದುಕಿನ 'ಕನಸು' ಎಂದು ಹೇಳಿ ಕೊಳ್ಳುತ್ತಾನೆ. ಆದರೆ ಅದರ ಇನ್ನೊಂದು ಮುಖವೇ ಅವನ ಬದುಕಿನ ಬೆಳವಣಿಗೆಯ 'ಸುಂದರ ಸ್ವಪ್ನಗಳು'. ಈ ಸ್ವಪ್ನ ಸುಂದರಿ ಮಾತ್ರ ಮನುಷ್ಯನ ಅಂಕೆ ಮೀರಿ ಅವನ ಜಾಗೃತಾವಸ್ಥೆಯ ಎಚ್ಚರದ ಪರಿಧಿಯಲ್ಲಿ ಕಾಣಿಸಿಕೊಳ್ಳದೆ ನಿದ್ರಾವಸ್ಥೆಯಲ್ಲಿ ರೂಪು ತಳೆದು ನಮ್ಮ ಮನಸ್ಸಿನ ಸುಪ್ತಾವಸ್ಥೆಯಲ್ಲಿ ಮಲಗಿ ನಿದ್ರಿಸುತ್ತಿದ್ದ ಬಯಕೆಗಳಿಗೆ, ನಮ್ಮ ನಮ್ಮ ಜೀವನಾನುಭವದಲ್ಲಿ ನಡೆದುಹೋದ ಘಟನೆಗಳಿಗೆ, ನಮ್ಮ ಬಾಲ್ಯಕ್ಕೆ, ನಮ್ಮ ಯೌವ್ವನಕ್ಕೆ, ನಮ್ಮ ದೌರ್ಬಲ್ಯಗಳಿಗೆ, ನಮ್ಮ ಭಯ, ನಮ್ಮ ಸಂಶಯ, ನಮ್ಮ ಭವಿಷ್ಯದ ಆಶಯಗಳಿಗೆ ಒತ್ತಾಸೆಯಾಗಿ ಕಣ್ಣಿನ ತುಂಬಾ ಚಿತ್ರ ತೋರಿಸುತ್ತಾಳೆ.

ಈ ಕನಸೆಂಬ ಕನಕಾಂಬರ ನಿದ್ರಾವಸ್ಥೆಯಲ್ಲಿಯೇ ನಮ್ಮನ್ನು ಮೋಹಕಗೊಳಿಸುತ್ತವೆ, ಸಮ್ಮೋಹನಗೊಳಿಸುತ್ತವೆ, ಎಚ್ಚರ ತಪ್ಪಿಸುತ್ತವೆ. ಸ್ವಪ್ನಗಳ ಅನುಭವ ಆಗದೇ ಇರುವ ಯಾವೊಂದು ನರಪ್ರಾಣಿಯೂ ಈ ಭೂಮಿಯ ಮೇಲೆ ಇರಲಾರದು ಎನ್ನುವಷ್ಟರ ಮಟ್ಟಿಗೆ ಈ 'ಸವಿ ಸ್ವಪ್ನಗಳ ಸುಂದರ ರಾತ್ರಿಗಳು'– ನಮ್ಮನ್ನು ಕಾಡಿವೆ. ಮನುಷ್ಯನ ಮನಃಪಟಲದ ಮೇಲೆ ಚಿತ್ರ–ವಿಚಿತ್ರಗಳ ದೃಶ್ಯಮಾಲಿಕೆಗಳನ್ನು ಕಟ್ಟಿ ನಮ್ಮಲ್ಲಿ ಭಾವಸ್ಫುರಣೆಯನ್ನು ಉಂಟುಮಾಡುವ ಈ ಸ್ವಪ್ನ ಗಳೆಂಬ ಏಲಿಯನ್ನುಗಳು ಎಲ್ಲಿಂದ ಬರುತ್ತವೆ. ಹೇಗೆ ಕಣ್ಮರೆ ಯಾಗುತ್ತವೆ. ಪ್ರತಿಯೊಬ್ಬರ 'body chemistry'ಯ ಮನೋ ಭೂಮಿಕೆಯ ಮೇಲೆ ವರ್ಣರಂಜಿತವಾಗಿ ಮೂಡಿ ಮರೆಯಾಗುವ ಈ ಸ್ವಪ್ನ ವಿತ್ರೆಯ 'ಅಸ್ತಿತ್ವ'–ವಾದರೂ ಏನು ಎಂಬುದನ್ನು ಮನೋ ವಿಜ್ಞಾನಿಗಳು ತಮ್ಮ ತಮ್ಮ ಮನಃಶಾಸ್ತ್ರದ ಸಂಶೋಧನೆಗಳಲ್ಲಿ ವಿವರಿಸಿರಬೇಕು.

ನಮಗಿಲ್ಲಿ ಅದು ಮುಖ್ಯವೇ ಅಲ್ಲ. ರಂಗಸಜ್ಜಿಕೆ ನಿರ್ಮಾಣ ಮಾಡುವ ರಂಗಪರಿಣಿತರಿಗಿಂತ ನಾಟಕ ನೋಡುವ ಪ್ರೇಕ್ಷಕನ ಸುಖವೇ ಅಪರಿಮಿತ. ಹಾಗಾಗಿ 'ನಾವು ಮತ್ತು ನಮ್ಮ ಕನಸು'– ಅದಷ್ಟೇ ನಮಗೆ ಸುಖ ಕೊಡುವ ವಿಷಯವಾದ್ದರಿಂದ ಅದಷ್ಟೇ ನಮಗಿಲ್ಲಿ ಚರ್ಚೆಯ ವಸ್ತು!

ಹಾಗಂತ ಸ್ವಪ್ನಗಳೆಂದರೆ, ಬರಿಯ ಸುಖ ಕೊಡುವ ಸನ್ನಿವೇಶಗಳ ಸೃಷ್ಟಿ ಎಂದು ಯಾರಾದರೂ ಭಾವಿಸಿದರೆ ಅದು ತಪ್ಪಾದೀತು. ಎಷ್ಟೋ ಬಾರಿ ಸ್ವಪ್ನಗಳು ನಮ್ಮ ರಾತ್ರಿಗಳನ್ನು, ಕೆಲವೊಮ್ಮೆ ಕೆಲವು ಸ್ವಪ್ನಗಳು ನಿದ್ರಾವಸ್ಥೆಯಲ್ಲೇ ಕರಾಳತೆ ಸೃಷ್ಟಿ ಮಾಡಿ ನಮ್ಮಲ್ಲಿ ಭಯ ಹುಟ್ಟಿಸಿ, ಆ ಕನಸು ಕನಸೇ ಅಲ್ಲ; ನಿಜವಾಗಿಯೇ ನಡೆಯುತ್ತಿವೆಯೇನೋ ಎಂಬಂತೆ ಭ್ರಮೆ ಸೃಷ್ಟಿಸಿ ಬಿಡುತ್ತವೆ. ಬಲವಂತವಾಗಿ ಕಣ್ಣುಜ್ಜಿಕೊಂಡು ಮೇಲೇಳಲೂ ಬಿಡದೆ, ಬಲವಂತವಾಗಿ ಕೈಕಾಲು ಕಟ್ಟಿ ನಮಗೆ ಬೇಡವಾದ ಚಿತ್ರ ತೋರಿಸುತ್ತವೆ. ನಮ್ಮ ಜೀವ ಹಿಂಡಿ ಹಿಪ್ಪೆಯಾಗುವಂತೆ ಮಾಡುತ್ತವೆ. ಬೆಳಿಗ್ಗೆ ಎದ್ದಾಗಲೇ, ರಾತ್ರಿ ಕಂಡಿದ್ದು ಕನಸು ಎಂದು ಗೊತ್ತಾದಾಗಲೇ ನಮಗೆ ಜೀವ ಬಂದಂತೆ ಭಾಸವಾಗುತ್ತದೆ. ಕಣ್ಣುಜ್ಜಿಕೊಂಡು ಮೇಲೆದ್ದ ಮೇಲೆ ಪುನರ್ಜನ್ಮವಾದಂತೆ, ಸ್ಮೃತಿ ಪಟಲದ ಮೇಲೆ ರಾತ್ರಿ ಬಿದ್ದ ಕನಸ್ಸನ್ನು ಮನೆಯವರಿಗೆ ಹೇಳಿ ಕೊಂಡು 'ಅಬ್ಬಾ'– ಎನ್ನುವ ಹಾಗೆ, ನಮ್ಮನ್ನು ಕಾಡುವ ಕರಾಳ ರಾತ್ರಿಗಳನ್ನೂ ಈ 'ಸ್ವಪ್ನ ಸುಂದರಿ'– ಹುಟ್ಟು ಹಾಕುತ್ತಾಳೆ.

ಸ್ವಪ್ನ ಸುಂದರಿ ಎನ್ನುವುದೂ ಸರಿಯಲ್ಲ; ಕಾರಣ ಎಷ್ಟೋ ಹೆಣ್ಣು ಮಕ್ಕಳಿಗೆ 'ಸ್ವಪ್ನ' ಎಂದು ಹೆಸರಿಟ್ಟಿರುತ್ತಾರೆ. ಅಷ್ಟರಮಟ್ಟಿಗೆ ಈ ಸ್ವಪ್ನಗಳೆಂಬ ಕಿರಾಣಿ ಅಂಗಡಿ ತನಗೆ ಬೇಕಾದ ರಾತ್ರಿಗಳಲ್ಲಿ ನಮ್ಮ ಮನೋಮಂದಿರಗಳಲ್ಲಿ ಅಂಗಡಿಯಿಟ್ಟು ಬಾಗಿಲು ತೆರೆಯುತ್ತದೆ. ಅದರ ಅನುಭೋಗಿಗಳು ನಾವೇ! ಅದರ ಫಲಾನುಭವಿಗಳೂ ನಾವೇ! ಅದರ ವಾರಸುದಾರರೂ ನಾವೇ!

ಈ ಸ್ವಪ್ನಲೋಕ ಅಂಗಡಿ ತೆರೆದಾಗ ಕೆಲವರು ನಿದ್ರೆಯಲ್ಲೇ ಮಾತಾಡುತ್ತಿರುತ್ತಾರೆ. ಯಾರ ಜೊತೆಗೋ, ಯಾವುದರ ಜೊತೆಗೋ, ಅವರ ಮನಃಪಟಲದ ಒಳಗೆ ಏನೇನೋ ನಡೆದಿರುತ್ತದೆ. ಕೆಲವರು ನಿದ್ದೆಗಣ್ಣಲ್ಲೇ ಎದ್ದು ಓಡಾಡುತ್ತಾರೆ, ಕೆಲವರು ಮನೆಯ ಬಾಗಿಲು ತೆರೆದು ಆಚೆಗೇ ಹೊರಟುಬಿಟ್ಟಿರುತ್ತಾರೆ, ಸುಖಾಸುಮ್ಮನೆ ಎಲ್ಲೋ ನಡೆದು ಹೋಗುತ್ತಿರುತ್ತಾರೆ. ಅವರನ್ನು ಹಿಡಿದು ಮಾತಾಡಿಸಿ, ಅವರು ಜಾಗೃತಾವಸ್ಥೆಗೆ ಬಂದ ಮೇಲೆ ಕೇಳಿ ನೋಡಿ, ಅವರ ಬಾಯಲ್ಲಿ ಬರುವ ಮೊದಲ ಮಾತೇ ನಾನೇಕೆ ಇಲ್ಲಿದ್ದೇನೆ? ನಾನೇಕೆ ಇಲ್ಲಿಗೆ

> “ಬರಿಯ ಸುಖ ಕೊಡುವ ಸನ್ನಿವೇಶಗಳ ಸೃಷ್ಟಿ ಎಂದು ಯಾರಾದರೂ ಭಾವಿಸಿದರೆ ಅದು ತಪ್ಪಾದೀತು. ಎಷ್ಟೋ ಬಾರಿ ಸ್ವಪ್ನಗಳು ನಮ್ಮ ರಾತ್ರಿಗಳನ್ನು, ಕೆಲವೊಮ್ಮೆ ಕೆಲವು ಸ್ವಪ್ನಗಳು ನಿದ್ರಾವಸ್ಥೆಯಲ್ಲೇ ಕರಾಳತೆ ಸೃಷ್ಟಿ ಮಾಡಿ ನಮ್ಮಲ್ಲಿ ಭಯ ಹುಟ್ಟಿಸಿ, ಆ ಕನಸು ಕನಸೇ ಅಲ್ಲ; ನಿಜವಾಗಿಯೇ ನಡೆಯುತ್ತಿವೆಯೇನೋ ಎಂಬಂತೆ ಭ್ರಮೆ ಸೃಷ್ಟಿಸಿಬಿಡುತ್ತವೆ. ಬಲವಂತವಾಗಿ ಕಣ್ಣುಜ್ಜಿಕೊಂಡು ಮೇಲೇಳಲೂ ಬಿಡದೆ, ಬಲವಂತವಾಗಿ ಕೈಕಾಲು ಕಟ್ಟಿ ನಮಗೆ ಬೇಡವಾದ ಚಿತ್ರ ತೋರಿಸುತ್ತವೆ. ನಮ್ಮ ಜೀವ ಹಿಂಡಿ ಹಿಪ್ಪೆಯಾಗುವಂತೆ ಮಾಡುತ್ತವೆ. ಬೆಳಿಗ್ಗೆ ಎದ್ದಾಗಲೇ, ರಾತ್ರಿ ಕಂಡಿದ್ದು ಕನಸು ಎಂದು ಗೊತ್ತಾದಾಗಲೇ ನಮಗೆ ಜೀವ ಬಂದಂತೆ ಭಾಸವಾಗುತ್ತದೆ.




ಬಂದೆ? ಇತ್ಯಾದಿ ಮಾತುಗಳು ಜಾಗೃತಾವಸ್ಥೆಯಲ್ಲಿ ಹುಟ್ಟುತ್ತವೆ. ಹಾಗಾದರೆ ನಮಗೆ ನಿದ್ದೆಗಣ್ಣಿನಲ್ಲಿ ಚಳ್ಳೆಹಣ್ಣು ತಿನ್ನಿಸಿ ಏನೇನೋ ಮಾತಾಡಿಸಿ ಇಲ್ಲಿಯವರೆಗೂ ಕರೆತಂದು ನಮಗೇ ನಮ್ಮನ್ನು ಪರಿಚಯ ಮಾಡಿಸುವಷ್ಟು ಅವಾಂತರ ಸೃಷ್ಟಿಸುವ ಕೆಲಸವನ್ನು ಕೆಲವೇ ನಿಮಿಷಗಳಲ್ಲಿ ಈ ಸ್ವಪ್ನಗಳು ಮಾಡಿ ಮುಗಿಸುತ್ತವೆ. ಒಟ್ಟಿನಲ್ಲಿ ಕೋತಿಗೆ ಹೆಂಡ ಕುಡಿಸಿದಂತೆ ಮನುಷ್ಯನಿಗೆ ನಿದ್ರಾವಸ್ಥೆಯಲ್ಲೇ ನಶೆಯೇರಿಸಿ ನವರಸಗಳನ್ನೂ ನವೀಕರಿಸುವ ದೇಹ ಮನಸುಗಳ ಅಮೆಚೂರ್ ರಂಗಭೂಮಿ ಈ ಸ್ವಪ್ನಗಳು. ಇದಕ್ಕೆ ಚಿಕ್ಕವರು, ದೊಡ್ಡವರು, ವಯಸ್ಸಾದವರು, ಹೆಂಗಸರು, ಗಂಡಸರು, ಮಕ್ಕಳು ಅಂತೇನಿಲ್ಲ. ಅವರವರ ವಯಸ್ಸಿಗೆ ತಕ್ಕಂತೆ ಮನಸ್ಸನ್ನುಮುಟ್ಟಿ ಮಾತಾಡಿಸಿ ಹೋಗುವ ಈ ಆಗಂತುಕ ಬಂಧುಗಳು ಮಕ್ಕಳನ್ನೂ ಬಿಡದೆ ರಚ್ಚೆ ಹಿಡಿಸಿ, ನಿದ್ದೆಗಣ್ಣಿನಲ್ಲೇ ಭಯದ ಕನಸು ಬೀಳಿಸಿ ಹಾಸಿಗೆ ಒದ್ದೆ ಆಗುವಂತೆ ಮಾಡಿಬಿಡುತ್ತವೆ.

ಕೆಲವು ಯುವಕರು, ಮಧ್ಯವಯಸ್ಕ ಗಂಡಸರಿಗೆ ಮುಂಜಾನೆ ಬೀಳುವ ಸ್ವಪ್ನಗಳು ಎಂಥ ರೋಮಾಂಚನ ಸೃಷ್ಟಿಸುತ್ತವೆಯೆಂದರೆ, ಯಾಕಪ್ಪಾ ಇಷ್ಟು ಬೇಗ ಈ ಕನಸು ಮುಗಿದುಹೋಯ್ತು; ಯಾಕಪ್ಪಾ ಇಷ್ಟು ಬೇಗ ಬೆಳಕಾಯಿತು ಎನ್ನಿಸುವಷ್ಟರಮಟ್ಟಿಗೆ ಆವರಿಸಿಕೊಂಡು ಮೈ ಮುದುರಿಕೊಂಡು, ಇನ್ನಷ್ಟು ಹೊತ್ತು ಆ ಕನಸಿನೊಂದಿಗೇ ಮಲಗಿ ನಿದ್ರಿಸಬಹುದಿತ್ತಲ್ಲ! ಎನ್ನುವಷ್ಟರ ಮಟ್ಟಿಗೆ ಮೈ ನವಿರೇಳಿಸಿ ಅರ್ಧಕ್ಕೇ ಎದ್ದು ಹೊರಟುಬಿಡುತ್ತಾಳೆ ಈ ಸ್ವಪ್ನಸುಂದರಿ ಎಂಬ ಗರ್ಲ್‌ಫ್ರೆಂಡು.

ಇನ್ನು ಎಂಭತ್ತು, ತೊಂಭತ್ತರ ವಯೋಮಾನದವರಿಗೆ ಬದುಕಿದ್ದಾಗಲೇ ನಿದ್ರೆಯಲ್ಲೇ ವೈಕುಂಠ ತೋರಿಸಿ ಶ್ರೀಮನ್ನಾರಾಯಣನ ದರ್ಶನವನ್ನೇ ಮಾಡಿಸುತ್ತವೆ ಈ ಕನಸುಗಳು. ಕೈಲಾಸದ ಗಿರಿಶಿಖರಗಳಲ್ಲೇ ವಾಕಿಂಗ್ ಮಾಡಿಸಿಬಿಡುತ್ತವೆ ಈ ಸ್ವಪ್ನ ಸಾಮೀಪ್ಯದ ಸಾಂಗತ್ಯಗಳು.

ಕನಸುಗಳ ವೈವಿಧ್ಯತೆಗಳನ್ನು ಜಾಗೃತಾವಸ್ಥೆಯಲ್ಲಿ ಚೆನ್ನಾಗಿ ದುಡಿಸಿಕೊಂಡವರು ಸಿನಿಮಾದವರು. ಕನಸುಗಳನ್ನೇ flash back ತಂತ್ರಗಳ ಮಾದರಿಯಿಟ್ಟುಕೊಂಡು ಬೆಳ್ಳಿ ತೆರೆಯ ಮೇಲೆ ಅದೆಷ್ಟು ಕತೆ ಹೇಳಿದರೋ! ಅದೆಷ್ಟು ಶೀರ್ಷಿಕೆಗಳನ್ನು ಇಟ್ಟುಕೊಂಡರೋ ಗೊತ್ತಿಲ್ಲ!. 'ಎರಡುಕನಸು' ಸಿನಿಮಾದಿಂದ ಹಿಡಿದು 'ಕನಸುಗಾರನಾ ಒಂದು ಕನಸು ಕೇಳಮ್ಮಾ'– ಎನ್ನುವ ಹಾಡಿನ ತನಕ.

ಹಗಲುಗನಸಿಗೂ, ರಾತ್ರಿ ಕನಸಿಗೂ ವ್ಯತ್ಯಾಸಗಳಿವೆ. ಎಚ್ಚರವಾಗಿದ್ದುಕೊಂಡು ಕಾಣುವ ಕನಸು, ನಿದ್ರೆಯಲ್ಲಿ ಕಾಣುವ ಕನಸಿನಷ್ಟು ರಸಾವೇಶವನ್ನಾಗಲೀ, ಭಾವಸ್ಫುರಣೆಯನ್ನಾಗಲೀ ಉಂಟುಮಾಡುವುದಿಲ್ಲ. ತೀರಾ ವಯಸ್ಸಾದ ಕೆಲವರು ಯಾರೋ ನನ್ನನ್ನು ಕರೀತಾರೆ, ಬಾ ಅಂತಾರೆ, ನನ್ನನ್ನು 'ಬಾ'–ಅಂತ ಕೂಗುತ್ತಾರೆ ಎನ್ನುತ್ತಾ ಕನಸಿನ ಭ್ರಮಾಲೋಕಕ್ಕೆ ಒಳಗಾಗಿ ದೇಹ, ಮನಸ್ಸುಗಳ ಸ್ವಪ್ನವಿಹ್ವಲಗಳನ್ನು ಹೇಳಿಕೊಂಡೇ ಹೊರಟುಬಿಡುತ್ತಾರೆ. ಕೆಟ್ಟ ಕನಸು ಕಂಡ ಕೆಲವರು ವ್ರತ ನಿಷ್ಠೆ, ನೇಮ, ನಿಷ್ಠೆ ಅಂತ ಹೊರಟುಬಿಡುತ್ತಾರೆ.

ಸ್ವಪ್ನ ಅಥವಾ ಕನಸುಗಳೆಂಬ ಈ ಮಹಾಮಾಯೆ ಸಾಹಿತ್ಯದಂಥ ವೈಚಾರಿಕ ಕ್ಷೇತ್ರವನ್ನೂ ಬಿಟ್ಟಿಲ್ಲ. ನಾವು ಚಿಕ್ಕವರಿರುವಾಗ ಶಿಶುಪದ್ಯವೊಂದಿತ್ತು. ಶಾಲೆಯಲ್ಲಿ ಕಂಠಪಾಠ ಮಾಡಿ ಉರುಹಚ್ಚಿ, ಬಾಯಿಪಾಠದಂತೆ ಹೇಳುತ್ತಿದ್ದ ಕಾಲ ಅದು, ಈಗಲೂ ನಮ್ಮಂಥ ಅನೇಕರಿಗೆ ಆ ಪದ್ಯನೆನಪಿದೆ.

'ತಿರುಕನೋರ್ವನೂರಮುಂದೆ
ಮುರುಕು ಧರ್ಮಶಾಲೆಯಲ್ಲಿ
ಒರಗಿರುತ್ತಲೊಂದು ಕನಸಕಂಡನೆಂತೆನೆ'– ಎನ್ನುವ ಪದ್ಯ.

ತಿರುಕನೊಬ್ಬ ಕನಸಿನಲ್ಲಿ ರಾಜನಾಗಿ ವೈಭವ ಅನುಭವಿಸಿ, ತಿಂದುಬಂದ ಅನ್ನವನ್ನೂ ಕಳೆದುಕೊಂಡು, ಮತ್ತೆ ತಿರುಪೆಗೆ ತೆರಳಿದ ಸಂಗತಿಯನ್ನು ಕವಿತೆ ಕತೆಯ ರೂಪದಲ್ಲಿ ತಿಳಿಸಿದ ಕವಿತೆ ಅದು. ಇಂದಿಗೂ ನಮಗೆ ಗೊತ್ತಿದೆ. ಪಂಪ, ರನ್ನ, ಜನ್ನ, ನಾಗಚಂದ್ರ ಮುಂತಾದ ಪ್ರಾಚೀನ ಕವಿಗಳಿಂದ ಶುರುವಾಗಿ ಹೊಸಗನ್ನಡದ ಆಧುನಿಕ ಕಾವ್ಯದವರೆಗೆ 'ಸ್ವಪ್ನ'ಗಳು ಕಾವ್ಯದ ಸಾಮಗ್ರಿಯಾಗಿಯೂ ಬಳಕೆಯಾಗಿವೆ. ಕನಸುಗಳು ಅಂತರಂಗದ ಅಭೀಪ್ಸೆಗಳಿಗೆ ಶುಭಸೂಚನೆಯ ಸಾಂಕೇತಿಕ ಪ್ರತಿಮೆಗಳಿಗೆ ಪೂರಕವಾಗಿ, ಹುಟ್ಟಿದ ಅದೆಷ್ಟೋ ಉದಾಹರಣೆಗಳಿವೆ. ನೇಮಿಚಂದ್ರನ 'ಲೀಲಾವತಿ' ಮತ್ತು ದೇವ ಕವಿಯ 'ಕುಸುಮಾವಳಿ' ಕಾವ್ಯಗಳು ಸ್ವಪ್ನದಲ್ಲಿ ಕಂಡ ನಲ್ಲ ನಲ್ಲೆಯನ್ನು ವಾಸ್ತವದಲ್ಲಿ ಹುಡುಕಿ ಕೊಂಡು ಹೋಗುವ ಕಥಾ ಹಂದರವನ್ನು ಒಳಗೊಂಡಿದ್ದು,

ಅಕ್ಕ ಕೇಳವ್ವ ಅಕ್ಕಯ್ಯ ನಾನೊಂದು ಕನಸಕಂಡೆ
ಅಕ್ಕಿಯಡಕೆ ಓಲೆ ತೆಂಗಿನಕಾಯ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಬಂದುದ ಕಂಡೆ
ಮಿಕ್ಕು ಮೀರಿ ಹೋಹನ ಕೈಪಿಡಿದು
ಚೆನ್ನಮಲ್ಲಿಕಾರ್ಜುನಯ್ಯನ ಕಂಡು ಕಣ್ತೆರೆದು॥

ಇದು ಮಹಾ ಶಿವಶರಣೆ ಮಹಾದೇವಿ ಅಕ್ಕನ ವಚನದೊಂದು ಮಾದರಿ. 'ಕನಸು'– ಹೇಗೆಲ್ಲಾ ಸಾಹಿತ್ಯ ಪ್ರಕಾರಗಳಲ್ಲಿ ಬಳಕೆಯಾಗಿದೆ ನೋಡಿ! ಇಲ್ಲಿನ ವಚನದಲ್ಲಿ ಅಕ್ಕ ತನ್ನ ಆರಾಧ್ಯ ದೈವ ಮನಸ್ಸಿನಲ್ಲಿ ಮತ್ತೆ ಕನಸಿನಲ್ಲಿ ಸಾಕಾರಗೊಳ್ಳುವ 'ಸ್ವಪ್ನಗೀತ'ಕ್ಕೆ ಭಾಷ್ಯ ಬರೆದಂತೆ ಅಕ್ಕನ ವಚನ ಮೂಡಿಬಂದಿದೆ.

'ಕೆರೆಗೆ ಹಾರ'– ಎಂಬ ಜನಪದ ಕಥನ ಗೀತೆಯಲ್ಲಿ ಕೆರೆಗೆ ಹಾರವಾದ ಭಾಗೀರಥಿಯನ್ನು ನೆನೆದು ಗಂಡ ಮಹಾದೇವ ರಾಯನಿಗೆ ಕನಸೊಂದು ಬಿದ್ದಂತೆ ಜನಪದಗೀತೆ ಹೇಳುತ್ತದೆ.

ಗಂಡ ಮಹದೇವರಾಯ ದಂಡಿನೊಳಗೈದಾನು
ದಂಡಿನೊಳಗೈದಾನು ಕಂಡಾನು ಕೆಟ್ಟಕನಸ
ಸೆಲ್ಯ ಸುಟ್ಟಂಗಾತು ಕೋಲು ಮುರಿದಂಗಾತು
ಕಟ್ಟಿಸಿದ ಮಾಲೆಲ್ಲಾ ತಟ್ಟನೆ ಬಿದ್ದಂಗಾತು

ಅಂದರೆ ದಂಡಿನಲ್ಲಿದ್ದ ಮದೇವರಾಯನಿಗೆ ದೂರದ ಊರಿನಲ್ಲಿ ತನ್ನ ಹೆಂಡತಿ ಕೆರೆಗೆ ಹಾರವಾದ ಸಂಗತಿ ಸ್ವಪ್ನ ಸಂಕೇತಗಳ ಮೂಲಕ ಮನಸ್ಸಿನ ಮೂಲೆಯಲ್ಲಿ ಪ್ರತಿಫಲಿಸಿದ ಉದಾಹರಣೆ ಕಾವ್ಯದ ಸ್ವಪ್ನಲೀಲೆಗೆ ಸಾಕ್ಷಿ.

ರಾಷ್ಟ್ರಕವಿ ಕುವೆಂಪು ಅವರ ಕಲ್ಕಿ ಪದ್ಯವಂತೂ ಸ್ವಪ್ನ ಲೋಕದಲ್ಲೇ ನಡೆವ ಕ್ರಾಂತಿಯ ಹೆಜ್ಜೆ.

ನಿದ್ದೆಯ ಲೋಕದಿ ಕನಸಿನ ಬೀದಿ
ತಿರುಗಿದೆ ತೊಳಲಿದೆ ತಪ್ಪಿತು ಹಾದಿ
ಕಲ್ಕಿ ಕಲ್ಕಿ ಎನ್ನುತ ಚೀರಿ
ಕನಸೊಡೆದೆದ್ದೆ
ಇನ್ನೆಲ್ಲಿಯ ನಿದ್ದೆ?

ಹೀಗೆ ಮುಕ್ತಾಯವಾಗುವ 'ಕಲ್ಕಿ' ಕವಿತೆಯಲ್ಲಿ ಅಸಮಾನತೆಯ ವಿರುದ್ಧ ಯುದ್ಧ ಸಾರುವ ಕವಿಯಮನಸ್ಸು ನಿದ್ದೆ ಮತ್ತು ಸ್ವಪ್ನಗಳ ಜೊತೆಯಾಟದಲ್ಲಿ ಸ್ವಪ್ನದ ಅಭಿವ್ಯಕ್ತಿಗೆ ಇರುವ ಆಂತರ್ಯದ ಶಕ್ತಿಯನ್ನು ತಮ್ಮ ಶಬ್ದಗಾರುಡಿಗೆ ಮೇಳವಿಸಿ ಕಟ್ಟಿದ ಅಪರೂಪದ ಅವಿಸ್ಮರಣೆಯನ್ನು ಕವಿತೆಯಲ್ಲಿ ಕಲ್ಕಿ ಕಟ್ಟಿಕೊಡುತ್ತದೆ.

ಹೀಗೆ ಸಾಹಿತ್ಯ, ಸಿನಿಮಾ, ರಂಗಭೂಮಿಯಿಂದ ಹಿಡಿದು ಸಾಮಾನ್ಯನ ಮತ್ತು ಅಸಾಮಾನ್ಯರ ತನಕನಿದ್ರಾವಸ್ಥೆಯಲ್ಲಿ, ಎಚ್ಚರದಲ್ಲಿ, ಹಗಲಿನಲ್ಲಿ, ರಾತ್ರಿಯಲ್ಲಿ ಜನರ ಜೀವದ ಜೊತೆ ಈ ಸ್ವಪ್ನ ಸುಂದರಿಯ ಚೆಲ್ಲಾಟ, ರಸ, ಸರಸ. ನಾವು ಬೇಕೆಂದರೂ, ಬೇಡವೆಂದರೂ ಬಿಡದೆ ಬೆನ್ನತ್ತುವ ಈ ಸ್ವಪ್ನ ಲೋಕದ ಕುರಿತು ಮಾತೊಂದಿದೆ ಮುಂಜಾನೆಯಲ್ಲಿ ಬೀಳುವ ಕನಸುಗಳು ನನಸಾಗುತ್ತವಂತೆ. ಹಾಗಾದರೆ ನಮ್ಮ ಮೈನವಿರೇಳಿಸುವ, ನಮ್ಮನ್ನು ರೋಮಾಂಚನಗೊಳಿಸುವ, ನಮ್ಮನ್ನು ಸುಖಿಸುವ, ನಮ್ಮನ್ನು ಪ್ರೇರೇಪಿಸುವ, ನಮ್ಮನ್ನು ಉದ್ದೀಪನಗೊಳಿಸುವ, ನಮ್ಮನ್ನು ಬೆರಗುಗೊಳಿಸುವ, ನಮ್ಮನ್ನು ಬೆಳೆಸುವ, ನಮ್ಮನ್ನು ಬೆಸೆಯುವ, ನಮ್ಮನ್ನು ಬೆದರಿಸದೇ ಬದುಕಿಸುವ ಸುಂದರ ಸ್ವಪ್ನಗಳು ಮುಂಜಾನೆಯಲ್ಲಿಯೇ ಕಾಣಿಸಲಿ, ಸ್ವಪ್ನ ಲೋಕದ ಸುಂದರಿ ನಮಗೆ ಮಾತ್ರ ಹೇಳಿಹೋದ ನಮ್ಮ ನಮ್ಮ ಕಣ್ಣಾಲಿಯ ಕನಸುಗಳು ನಮ್ಮ ಬದುಕಿನ ಹಗಲುಗಳಲ್ಲಿ ನನಸಾಗಲಿ, ಏನಂತೀರೀ?

## ಮೈಸೂರು ಡರ್ಬಿ ಗೆದ್ದ 'ಮಿರಾಕಲ್ ಸ್ಟಾರ್'





ಮೈಸೂರು ರೇಸ್ ಕ್ಲಬ್ ಲಿಮಿಟೆಡ್ (ಎಂಆರ್‌ಸಿ) ಅಧ್ಯಕ್ಷರೂ ಆದ ಹಿರಿಯ ಸ್ಟೀವರ್ಡ್ ಜಿ.ವೆಂಕಟೇಶ್, ಭಾನುವಾರ ಮೈಸೂರಿನ ಮೈಸೂರು ರೇಸ್ ಕ್ಲಬ್‌ನಲ್ಲಿ ನಡೆದ ಮೈಸೂರು (ಮಾನ್ಸೂನ್) ರೇಸ್ 2025ರ 15ನೇ ದಿನದಂದು ರೇಸ್‌ಗಳನ್ನು ಗೆದ್ದ 'ಮಿರಾಕಲ್ ಸ್ಟಾರ್'ನ ಮಾಲೀಕರಾದ ಶರ್ಮಿಳಾ ಪದ್ಮನಾಭನ್ (ದಿವಂಗತ ಎಸ್.ಪದ್ಮನಾಭನ್ ಅವರ ಪ್ರತಿನಿಧಿ. ರೇಡಿಯಂಟ್ ಬ್ಲಡ್‌ಸ್ಟಾಕ್ ಪ್ರೈ.ಲಿಮಿಟೆಡ್) ಅವರಿಗೆ 'ದಿ ಮೈಸೂರು ಡರ್ಬಿ (ಗ್ರೇಡ್ 1)' ಟ್ರೋಫಿಯನ್ನು ಪ್ರದಾನ ಮಾಡಿದರು. ಈ ವಿಜೇತ ಕುದುರೆಗೆ ತರಬೇತಿ ನೀಡಿದ ಜೇಮ್ಸ್ ಮೆಕ್‌ಕೌನ್, ಸವಾರಿ ಮಾಡಿದ ಜಾಕಿ ಸೂರಜ್ ನರೇಡು, ಎಂಆರ್‌ಸಿ ಸ್ಟೀವರ್ಡ್‌ಗಳು ಹಾಗೂ ಸಮಿತಿ ಸದಸ್ಯರು ಚಿತ್ರದಲ್ಲಿದ್ದಾರೆ.

## ಬೆಂಗಳೂರು ಟರ್ಫ್ ಕ್ಲಬ್ ಟ್ರೋಫಿ ಮುಡಿಗೇರಿಸಿಕೊಂಡ 'ಗೋಲ್ಡ್ ಕೈಟ್'

ಮೈಸೂರು ರೇಸ್ ಕ್ಲಬ್‌ನಲ್ಲಿ (ಎಂಆರ್‌ಸಿ) ಭಾನುವಾರ ನಡೆದ ಮೈಸೂರು (ಮಾನ್ಸೂನ್) ರೇಸ್ 2025ರ 15ನೇ ದಿನದಂದು ರೇಸ್‌ಗಳನ್ನು ಗೆದ್ದ ಗೋಲ್ಡ್ ಕೈಟ್‌ನ ತರಬೇತುದಾರ ಕೆ.ಆದಿತ್ಯ ಅವರಿಗೆ ಕರ್ನಾಟಕ ಸರ್ಕಾರವನ್ನು ಪ್ರತಿನಿಧಿಸುವ ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್‌ನ ಸ್ಟೀವರ್ಡ್ ಡಾ.ಎನ್.ನಿತ್ಯಾನಂದರಾವ್ ಅವರು 'ದಿ ಬೆಂಗಳೂರು ಟರ್ಫ್ ಕ್ಲಬ್ ಟ್ರೋಫಿ'ಯನ್ನು ಪ್ರದಾನ ಮಾಡಿದರು. ಕುನಾಲ್ ನಟವರ್‌ಲಾಲ್ ಶರ್ಮಾ ಒಡೆತನದ ವಿಜೇತ ಕುದುರೆಯನ್ನು ಜಾಕಿ ಹಿಂದು ಸಿಂಗ್ ಸವಾರಿ ಮಾಡಿದರು. ಎಂಆರ್‌ಸಿ ಅಧ್ಯಕ್ಷರು, ಸ್ಟೀವರ್ಡ್‌ಗಳು ಮತ್ತು ಸಮಿತಿ ಸದಸ್ಯರು ಚಿತ್ರದಲ್ಲಿದ್ದಾರೆ.



## ವಿದ್ಯಾರ್ಥಿನಿಲಯ ಪ್ರವೇಶಾತಿಗೆ ಅರ್ಜಿ ವಿಸ್ತರಣೆ

ಮೈಸೂರು,ಅ.27– ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2025–26ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಪಡೆಯಲು ಬಯಸುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು swdhmis.karnataka.gov.inರಲ್ಲಿ ಅರ್ಜಿ ಸಲ್ಲಿಸಲು ಅ.31 ಅಂತಿಮ ದಿನ. ಅರ್ಜಿ ಸಲ್ಲಿಸಿದ ನಂತರ ಆನ್‌ಲೈನ್ ಅರ್ಜಿ ಪ್ರತಿಯೊಂದಿಗೆ ದೃಢೀಕೃತ ದಾಖಲೆಗಳನ್ನು ಆಯ್ಕೆ ಮಾಡಿರುವ ವಿದ್ಯಾರ್ಥಿನಿಲಯಗಳ ಮೇಲ್ವಿಚಾರಕರಿಗೆ ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಗ್ರೇಡ್–1 ಸಮಾಜ ಕಲ್ಯಾಣ ಇಲಾಖೆ, ಮೈಸೂರು ತಾಲೂಕು ಡಾ॥ ಬಾಬು ಜಗಜೀವನರಾಂ ಭವನ ಕಟ್ಟಡ, ಆದಿಪಂಪ ರಸ್ತೆ ಒಂಟಿ ಕೊಪ್ಪಲು ಪೂರ್ವ, ಬಡಾವಣೆ ಪಡುವಾರಹಳ್ಳಿ ಮೈಸೂರು–12, ದೂ.ಸಂಖ್ಯೆ: 0821–2520910 ಸಂಪರ್ಕಿಸಬಹುದು ಎಂದು ಮೈಸೂರು ತಾಲೂಕು, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್–1 ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

ಮೈಸೂರು ಮಿತ್ರ

ಮಂಗಳವಾರ 28 ಅಕ್ಟೋಬರ್ 2025

# ಮುಂದಿನ ಪೀಳಿಗೆ ದೃಷ್ಟಿಯಿಂದ ನೈಸರ್ಗಿಕ ಸಂಪತ್ತನ್ನು ಮಿತವಾಗಿ ಬಳಸಿ

● ಅರಣ್ಯ ಸಚಿವ ಈಶ್ವರ ಖಂಡ್ರೆ ಜನತೆಗೆ ಕರೆ ● ಮೈಸೂರಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ಸುವರ್ಣ ಮಹೋತ್ಸವ ● ದಿವಂಗತ ಇಂದಿರಾಗಾಂಧಿಯವರು ಪರಿಸರ, ಅರಣ್ಯ ಸಂರಕ್ಷಣೆ ಕಾನೂನು ರೂಪಿಸಿದ ಸ್ಮರಣೀಯರು




ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ 'ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ'ಯ ಸುವರ್ಣ ಮಹೋತ್ಸವವನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಉದ್ಘಾಟಿಸಿದರು. ಶಾಸಕರಾದ ಜಿ.ಟಿ.ದೇವೇಗೌಡ, ಪಿ.ಎಂ.ನರೇಂದ್ರಸ್ವಾಮಿ, ಸಿ.ಅನಿಲ್‌ಕುಮಾರ್, ಕೆ.ಹರೀಶ್‌ಗೌಡ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಅ.27(ಎಂಕೆ)– 'ಕಾಡು ಬೆಳೆಸಿ–ನಾಡು ಉಳಿಸಿ', 'ಹಸಿರೇ ಉಸಿರು' ಪರಿಸರ ಸಂರಕ್ಷಣೆಯ ಘೋಷಣೆ ಮೂಲಕ ಪ್ರಕೃತಿ ಚೆನ್ನಾಗಿದ್ದರೆ ಮಾತ್ರವೇ ಮನುಷ್ಯ ಜೀವಿಸಲು ಸಾಧ್ಯ ಎಂಬುದನ್ನು ಮನವರಿಕೆ ಮಾಡಿಕೊಟ್ಟ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ, ಮುಂದಿನ ತಲೆಮಾರಿಗಾಗಿ ನೈಸರ್ಗಿಕ ಸಂಪತ್ತನ್ನು ಹಿತಮಿತವಾಗಿ ಬಳಸಬೇಕು. ಅರಣ್ಯ ನಾಶ ಮಾಡುವುದನ್ನು ನಿಲ್ಲಿಸಬೇಕು. ಜೀವಕುಲ ರಕ್ಷಣೆಗಾಗಿ ಸಂಕಲ್ಪ ಮಾಡುವಂತೆ ಕರೆ ನೀಡಿದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಮೈಸೂರು ಮತ್ತು ಕೊಡಗು ಜಿಲ್ಲಾಡಳಿತ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿ ಸಹಯೋಗದೊಂದಿಗೆ ಆಯೋಜಿಸಿದ್ದ 'ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ'ಯ ಸುವರ್ಣ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹವಾಮಾನ ವೈಪರಿತ್ಯದಿಂದಾಗಿ ಏನೆಲ್ಲಾ ಬದಲಾವಣೆಗಳಾಗುತ್ತಿವೆ ಎಂಬುದನ್ನು ನೋಡುತ್ತಿದ್ದೇವೆ. ಕೊರೊನಾ ಸಂದರ್ಭದಲ್ಲಿ ಆಮ್ಲಜನಕದ ಮಹತ್ವವನ್ನು ಅರಿತಿದ್ದೇವೆ. ಜಾಗತಿಕ ತಾಪಮಾನ ಹೆಚ್ಚಾಗುತ್ತಿದೆ. ಆದ್ದರಿಂದ ರಾಜ್ಯದಲ್ಲಿನ ವನ್ಯ ಸಂಪತ್ತನ್ನು ಕಾಪಾಡುವುದು ಎಲ್ಲರ ಜವಾಬ್ದಾರಿ ಎಂದು ಹೇಳಿದರು.

ವನ್ಯಜೀವಿಗಳು ಪ್ರಕೃತಿ ಸಮತೋಲನ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸಲಿದ್ದು, ಮಾನವ ಮತ್ತು ವನ್ಯಜೀವಿಗಳ ನಡುವೆ ಸಹಬಾಳ್ವೆ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಕಾಡಂಚಿನಲ್ಲಿ ವಾಸಿಸುವ ಜನರಿಗೆ ವನ್ಯಜೀವಿಗಳ ಸ್ವಭಾವದ ಬಗ್ಗೆ ತಿಳಿಹೇಳುವ ಅಗತ್ಯವಿದೆ. ಹಾಗೆಯೇ ಹವಾಮಾನ ವೈಪರೀತ್ಯದಿಂದಾಗಿ ಪ್ರಕೃತಿ ವಿಕೋಪಗಳು ಸಂಭವಿಸುತ್ತಿವೆ. 2 ವರ್ಷಗಳ ಹಿಂದೆ ಉತ್ತರ ಕನ್ನಡ ಜಿಲ್ಲೆಯ ಶಿರೂರಿನಲ್ಲಿ ಗುಡ್ಡ ಕುಸಿತ, ಕೇರಳದ ವಯನಾಡಿನಲ್ಲಾದ ಭೂ ಕುಸಿತ, ಕಾಲ ಕಾಲಕ್ಕೆ ಮಳೆಯಾಗದೆ ಅತಿವೃಷ್ಟಿ ಮತ್ತು ಅನಾವೃಷ್ಟಿ ಉಂಟಾಗುತ್ತಿರುವುದು. ಪ್ರವಾಹ ಪರಿಸ್ಥಿತಿ ನಿರ್ಮಾಣ. ಉಷ್ಣಾಂಶ ಹೆಚ್ಚಳದಿಂದಾಗುತ್ತಿರುವ ಸಾವು–ನೋವುಗಳೆಲ್ಲವೂ ನಿಯಂತ್ರಣವಾಗಬೇಕಾದರೆ ಪರಿಸದ ಕಾಳಜಿ ವಹಿಸಬೇಕು. ಹೆಚ್ಚು ಹೆಚ್ಚು ಮರ ಬೆಳೆಸಬೇಕು, ಅರಣ್ಯ ಸಂರಕ್ಷಿಸಬೇಕು ಎಂದು ಹೇಳಿದರು.

ದೂರದರ್ಶಿತ್ವದ ನಾಯಕರಾಗಿದ್ದ ದಿವಂಗತ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ಪರಿಸರ, ವನ ಮತ್ತು ವನ್ಯಜೀವಿ ಉಳಿಸಲು ರೂಪಿಸಿದ ಕಾನೂನುಗಳು ಮತ್ತು ಕ್ರಮಗಳ ಫಲವಾಗಿ ಇಡೀ ದೇಶದಲ್ಲಿ ಪರಿಸರ ಮತ್ತು ಅರಣ್ಯ ಸಂಪತ್ತು ಉಳಿದಿದೆ. ಆನೆ ಗಣತಿ ಯಲ್ಲಿ ಕರ್ನಾಟಕ ರಾಜ್ಯ ದೇಶದಲ್ಲಿ ನಂಬರ್ ಒನ್ ಸ್ಥಾನದಲ್ಲಿದೆ. ಹುಲಿ ಸಂರಕ್ಷಣೆಯಲ್ಲೂ ಮುಂಚೂಣಿಯಲ್ಲಿದ್ದೇವೆ ಎಂದು ತಿಳಿಸಿದರು.

**ಪರಿಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ:** ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾತನಾಡಿ, ಜನರ ಜೀವನ ಮತ್ತು ಆರೋಗ್ಯವು ಪರಿಸರವನ್ನು ಅವಲಂಬಿಸಿದೆ. ಹಾಗಾಗಿ ಪರಿಸರವನ್ನು ಸಂರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಬೇಕು. ಉತ್ತಮ ಆಕ್ಸಿಜನ್ ನೀಡುವಂತಹ ಗಿಡ–ಮರಗಳನ್ನು ಬೆಳೆಸಬೇಕು. ಮುಖ್ಯವಾಗಿ ಯುವಕ–ಯುವತಿಯರು ಪರಿಸರ ಸಂರಕ್ಷಣೆ ಮಾಡುವ ಕಡೆಗೆ ಹೆಚ್ಚು ಗಮನ ನೀಡಬೇಕು ಎಂದು ಹೇಳಿದರು.

**ಸಹಕರಿಸಿ:** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಮಾತನಾಡಿ, ಕಳೆದ 50 ವರ್ಷದ ಹಿಂದೆ ಆರಂಭವಾದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಂತ ಹಂತವಾಗಿ ಬೆಳೆದು ಪರಿಸರ ಸಂರಕ್ಷಣೆಗೆ ತನ್ನದೆ ಕೊಡುಗೆ ನೀಡುತ್ತಿದೆ. ಕಾವೇರಿನದಿ ದಿನೇ ದಿನೆ ಕಲುಷಿತವಾಗುತ್ತಿದ್ದು, ನದಿ ಸೇರುವ ತ್ಯಾಜ್ಯಕ್ಕೆ ಕಡಿವಾಣ ಹಾಕಬೇಕಿದೆ. ಹಾಗೆಯೇ ಮೈಸೂರು ಮತ್ತೊಮ್ಮೆ ದೇಶದ ಸ್ವಚ್ಛ ನಗರವಾಗಿ ಖ್ಯಾತಿ ಪಡೆಯಲು ಮಂಡಳಿ ನೀಡುವ ಸಲಹೆಗಳಿಗೆ ನಗರಪಾಲಿಕೆ ಸಹಕರಿಸುವ ಮೂಲಕ ಮಾಲಿನ್ಯ ನಿಯಂತ್ರಣಕ್ಕೆ ಸಹಕರಿಸಬೇಕು ಎಂದರು.

**ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ ಪ್ರದಾನ:** ಬಳಿಕ ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ, ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ, ಪರಿಸರ ಮತ್ತು ಸಾಮಾಜಿಕ ತಜ್ಞರಾದ ಕೀರ್ತಿ ಡಿಸೋಜ ಹಾಗೂ ಕೊಡಗು ಜಿಲ್ಲೆಯ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ಹ್ಯೂಮನ್ ವರ್ಲ್ಡ್ ಫಾರ್ ಅನಿಮಲ್ಸ್ ಸೇರಿ ಒಟ್ಟು ಆರು ಸಂಸ್ಥೆಗಳಿಗೆ 'ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಹಾಗೆಯೇ ಮೈಸೂರು ಮತ್ತು ಕೊಡಗು ಜಿಲ್ಲೆಯ ವ್ಯಾಪ್ತಿಯ ನಗರಪಾಲಿಕೆ, ನಗರಸಭೆ, ಪುರಸಭೆ ಮತ್ತು ಗ್ರಾಮ ಪಂಚಾಯತಿಗಳಲ್ಲಿ ಕೆಲಸ ಮಾಡುವ ಸ್ವಚ್ಛತಾ ಕಾರ್ಮಿಕರಿಗೆ ಹಾಗೂ ಪರಿಸರ ಸಂರಕ್ಷಣೆ ಕುರಿತು ಹಮ್ಮಿಕೊಂಡಿದ್ದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಅಭಿನಂದನಾ ಪತ್ರಗಳನ್ನು ನೀಡಲಾಯಿತು.

ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ.ಹರೀಶ್‌ಗೌಡ ಸುವರ್ಣ ಮಹೋತ್ಸವದ ಅಧ್ಯಕ್ಷತೆ ವಹಿಸಿದ್ದರು. ಅರಣ್ಯ ವಸತಿ ಮತ್ತು ವಿಹಾರಧಾಮಗಳ ನಿಗಮದ ಅಧ್ಯಕ್ಷ ಸಿ.ಅನಿಲ್‌ಕುಮಾರ್, ಶಾಸಕರಾದ ಜಿ.ಟಿ.ದೇವೇಗೌಡ, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಡಾ.ಯತೀಂದ್ರ, ಕೆ.ಶಿವಕುಮಾರ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯ ಮರಿಸ್ವಾಮಿಗೌಡ, ಸದಸ್ಯ ಕಾರ್ಯದರ್ಶಿ ಎಸ್.ಎಸ್.ಲಿಂಗರಾಜು, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್‌ರೆಡ್ಡಿ, ಜಿಪಂ ಸಿಇಓ ಎಸ್.ಯುಕೇಶ್‌ಕುಮಾರ್, ಮೈಸೂರು ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಅಸೀಫ್, ಎಡಿಸಿ ಡಾ.ಪಿ.ಶಿವರಾಜು ಮತ್ತಿತರರು ಉಪಸ್ಥಿತರಿದ್ದರು.

## ಕ್ಯೂಆರ್ ಕೋಡ್ ಡಿ–ಆಕ್ಟಿವೇಟೆಡ್...!

ವಿವಿಧ ಪತ್ರಿಕೆಗಳಲ್ಲಿ ಜಾಹಿರಾತು ನೀಡಿದ್ದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸುವರ್ಣ ಮಹೋತ್ಸವ ಕಾರ್ಯಕ್ರಮದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಹೆಸರು ನೊಂದಾಯಿಸಿಕೊಳ್ಳುವಂತೆ ಪ್ರಕಟಿಸಿದ್ದ ಕ್ಯೂಆರ್ ಕೋಡ್ (QR code) ನಿಷ್ಕ್ರಿಯಗೊಂಡಿತ್ತು. ಸ್ಕ್ಯಾನ್ ಮಾಡಿದರೆ ಕ್ಯೂಆರ್ ಕೋಡ್ ಡಿ–ಆಕ್ಟಿವೇಟೆಡ್ ಎಂದು ತೋರಿಸುತ್ತಿತ್ತು.

## ಮೈಸೂರು ಪ್ಲಾಸ್ಟಿಕ್ ಮುಕ್ತ ನಗರವಾಗಿಸಲು ಕೈ ಜೋಡಿಸಿ...

“ ಮೈಸೂರು ನಗರವನ್ನು ಏಕ ಬಳಕೆ ಪ್ಲಾಸ್ಟಿಕ್ ಮುಕ್ತ ನಗರ ಎಂದು ಮುಖ್ಯಮಂತ್ರಿಗಳೇ ಘೋಷಿಸಿದ್ದಾರೆ. ಈ ನಿಟ್ಟಿನಲ್ಲಿ ಮಂಡಳಿ ಅಧಿಕಾರಿಗಳು ಸ್ಥಳೀಯ ಸಂಸ್ಥೆಗಳೊಂದಿಗೆ ಸೇರಿ ಮೈಸೂರು ನಗರವನ್ನು ಏಕಬಳಕೆ ಪ್ಲಾಸ್ಟಿಕ್ ಮುಕ್ತ ಮಾಡಲು ಕೈಜೋಡಿಸಬೇಕು. ಮಾರುಕಟ್ಟೆಗೆ ಹೋಗುವಾಗ ಬಟ್ಟೆ ಕೈಚೀಲ ತೆಗೆದುಕೊಂಡು ಹೋಗಬೇಕು. ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್ ಬಳಸಬಾರದು. ಸ್ವಚ್ಛತೆಯಲ್ಲಿ ನಿರ್ಲಕ್ಷ್ಯತೆ ವಹಿಸಬಾರದು. ತ್ಯಾಜ್ಯ ನೀರನ್ನು ಸಂಸ್ಕರಣೆ ಮಾಡಬೇಕು. ಮಾಲಿನ್ಯ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸಬೇಕು.

–ಈಶ್ವರ ಬಿ.ಖಂಡ್ರೆ, ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ

## ಇದೇನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕಾರ್ಯಕ್ರಮವೋ...? ಇಲ್ಲ ಕಾಂಗ್ರೆಸ್ ಸಮಾವೇಶವೋ...?



ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸುವರ್ಣ ಮಹೋತ್ಸವದ ಅಂಗವಾಗಿ ಮಹಾರಾಜ ಕಾಲೇಜು ಮೈದಾನದ ಎದುರಿನ ಕೃಷ್ಣರಾಜ ಬುಲೆವಾರ್ಡ್ ರಸ್ತೆಯಲ್ಲಿ ಅಳವಡಿಸಿರುವ ಕಾಂಗ್ರೆಸ್ ನಾಯಕರ ಕಟೌಟ್‌ಗಳನ್ನು ಕಾಣಬಹುದು.

ಮೈಸೂರು, ಅ.27(ಎಂಕೆ)– ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಸೋಮವಾರ ನಡೆದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವದ ಸರ್ಕಾರಿ ಕಾರ್ಯಕ್ರಮ ಕಾಂಗ್ರೆಸ್ ಸಮಾವೇಶವಾಗಿ ಬದಲಾಗಿತ್ತು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಿಂದ ಹಿಡಿದು ರಾಮಸ್ವಾಮಿ ವೃತ್ತದವರೆಗೆ ರಸ್ತೆ ಡಿವೈಡರ್ ಮಧ್ಯದಲ್ಲಿ, ಮಹಾರಾಜ ಕಾಲೇಜು ಮೈದಾನದ ಸುತ್ತಲು ಮತ್ತು ವೇದಿಕೆಯಲ್ಲಿ ಕಾಂಗ್ರೆಸ್ ಶಾಸಕರು, ಸಚಿವರ ಹಾಗೂ ಮುಖಂಡರ ಕಟೌಟ್‌ಗಳು ರಾರಾಜಿಸುತ್ತಿದ್ದವು.

50 ವರ್ಷಗಳ ಸುದೀರ್ಘ ಸೇವೆ ನೀಡಿರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕಾರ್ಯಕ್ರಮಗಳ ಒಂದೇ ಒಂದು ಮಾಹಿತಿಯಾಗಲಿ, ಇದುವರೆಗೆ ಕೈಗೊಂಡಿರುವ ಕಾರ್ಯಕ್ರಮಗಳ ವಿವರವಾಗಲಿ, ಮಂಡಳಿಯ ಸಾಧನೆ ಪಟ್ಟಿಯಾಗಲೀ ಎಲ್ಲಿಯೂ ಕಾಣಲಿಲ್ಲ. ಕಣ್ಣು ಹಾಯಿಸಿದ ಕಡೆಯಲ್ಲೆಲ್ಲಾ ಕಾಂಗ್ರೆಸ್ ರಾಜಕಾರಣಿಗಳ ಫ್ಲೆಕ್ಸ್, ಕಟೌಟ್‌ಗಳೇ ಕಂಗೊಳಿಸುತ್ತಿದ್ದವು!!

ಸುವರ್ಣ ಮಹೋತ್ಸವ ಕಾರ್ಯಕ್ರಮಕ್ಕೆ ವಿವಿಧ ಕಾಲೇಜುಗಳಿಂದ ವಿದ್ಯಾರ್ಥಿಗಳನ್ನು ಕರೆತಂದಿದ್ದರೂ ಬಹುತೇಕ ವಿದ್ಯಾರ್ಥಿಗಳು ಕಾರ್ಯಕ್ರಮ ಉದ್ಘಾಟನೆಯಾದ 30–40 ನಿಮಿಷದಲ್ಲೇ ಜಾಗ ಖಾಲಿ ಮಾಡಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಮಂಡಳಿ ಅಧ್ಯಕ್ಷ ಪಿ.ಎಂ.ನರೇಂದ್ರ ಸ್ವಾಮಿ ಅವರಿಂದ ಹಿಡಿದು ಭಾಷಣ ಮಾಡಿದ ಯಾರೊಬ್ಬರು ಮಂಡಳಿಯ 50 ವರ್ಷದ ಸಾಧನೆ, ಕಾರ್ಯಕ್ರಮ ಗಳ ವಿಚಾರವಾಗಿ ಮಾತನಾಡದೆ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರ ಕೊಡುಗೆಯನ್ನು ಸ್ಮರಿಸಿದರು.

ಇದೆಲ್ಲವನ್ನು ಗಮನಿಸಿದ ಹಲವು ಮಂದಿ ಇದೇನು ಸರ್ಕಾರಿ ಕಾರ್ಯಕ್ರಮವೋ... ಇಲ್ಲ ಪಕ್ಷದ ಕಾರ್ಯಕ್ರಮವೋ ಎಂದು ಗೊಣಗುತ್ತಾ ಎದ್ದು ಹೋಗುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು.

## ಹಣಕಾಸು ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಎಂಎಲ್‌ಸಿ ಕೆ.ವಿವೇಕಾನಂದ ಧನ್ಯವಾದ



ಕೆ.ವಿವೇಕಾನಂದ

ಮೈಸೂರು,ಅ.27(ಜಿಎ)–ಆದರ್ಶ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ನೇಮಕಗೊಂಡಿರುವ ಅತಿಥಿ ಉಪನ್ಯಾಸಕರಿಗೆ ಸಂಭಾವನೆಗಾಗಿ ಅನುದಾನ ಬಿಡುಗಡೆ ಮಾಡುವಂತೆ ಹಣಕಾಸು ಇಲಾಖೆ ಪ್ರಧಾನ ಕಾರ್ಯದರ್ಶಿ ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರಿಗೆ ನಿರ್ದೇಶಿಸಿರುವುದಕ್ಕೆ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಧನ್ಯವಾದ ತಿಳಿಸಿದ್ದಾರೆ.

ಅ.23ರಂದು ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ಪದವಿ ಪೂರ್ವ ಶಿಕ್ಷಣ ಇಲಾಖೆ ಕಾಲೇಜಿನ ಮೇಲ್ವಿಚಾರಣೆ ಮತ್ತು ಉಸ್ತುವಾರಿಯನ್ನು ಇತರೆ ಇಲಾಖೆಯವರಿಂದ ಮಾಡಿಸುವ ಸುತ್ತೋಲೆಯನ್ನು ಹಿಂಪಡೆಯುವಂತೆ ಮತ್ತು ನೂತನವಾಗಿ ಆರಂಭವಾಗಿರುವ ಸರ್ಕಾರಿ ಆದರ್ಶ ಕಾಲೇಜುಗಳ ಅತಿಥಿ ಉಪನ್ಯಾಸಕರ ವೇತನ ಮಂಜೂರು ಮಾಡದಿರುವ ಬಗ್ಗೆ ಹಾಗೂ ಆಡಳಿತಾತ್ಮಕ ಇತರೆ ವಿಚಾರಗಳ ಬಗ್ಗೆ ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕ ಭರತ್ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದರು.

ಇದಕ್ಕೆ ನಿರ್ದೇಶಕರು ಸಕರಾತ್ಮಕವಾಗಿ ಸ್ಪಂದಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದರು. ಅಲ್ಲದೆ, ಹಣಕಾಸು ಇಲಾಖೆ ಕಾರ್ಯದರ್ಶಿಗಳಿಗೆ ಮತ್ತು ಸಂಬಂಧಪಟ್ಟ ಅಧಿಕಾರಿ ವರ್ಗದವರಿಗೂ ಸದರಿ ವಿಚಾರವಾಗಿ ಕೋರಿಕೊಳ್ಳಲಾಗಿತ್ತು. ಅದರನ್ವಯ ಇಂದು ಹಣಕಾಸು ಇಲಾಖೆಯ ಕಾರ್ಯದರ್ಶಿಗಳು ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರಿಗೆ ಪತ್ರ ಬರೆದು ವೇತನ ಬಿಡುಗಡೆ ಮಾಡಲು ತಿಳಿಸಲಾಗಿದೆ. ಇದಕ್ಕೆ ಸಹಕರಿಸಿದ ಹಣಕಾಸು ಇಲಾಖೆ ಅಧಿಕಾರಿ ವರ್ಗದವರಿಗೆ ಮತ್ತು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ ಶಿಕ್ಷಣ) ಎಲ್ಲಾ ಅಧಿಕಾರಿ ವರ್ಗದವರಿಗೆ ಧನ್ಯವಾದ ತಿಳಿಸಿದ್ದಾರೆ.

## ಕನ್ನಡ ರಾಜ್ಯೋತ್ಸವದ ಅಂಗವಾಗಿ ವಿವಿಧ ಸ್ಪರ್ಧೆ



ಮೈಸೂರು,ಅ.27–ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಮತ್ತು ನೇಗಿಲಯೋಗಿ ಮಹಿಳಾ ಹಿತೈಷಿ ಸೇವಾ ಬಳಗದ ವತಿಯಿಂದ 2025ನೇ ಸಾಲಿನ ಕನ್ನಡ ರಾಜ್ಯೋತ್ಸವದ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಡ್ರಾಯಿಂಗ್ ಸ್ಪರ್ಧೆ–2 ವಿಭಾಗ 9ರಿಂದ 12 ವರ್ಷ, 12ರಿಂದ–15 ವರ್ಷ; ಫ್ಯಾನ್ಸಿ ಡ್ರೆಸ್ ಸ್ಪರ್ಧೆ–2 ವಿಭಾಗ 2ರಿಂದ 5 ವರ್ಷ, 5ರಿಂದ 9 ವರ್ಷ; ಪ್ರಸಿದ್ಧ ಕವಿಗಳ ಕನ್ನಡ ಭಾವಗೀತೆ ಸ್ಪರ್ಧೆ–2 ವಿಭಾಗ 9ರಿಂದ 12 ವರ್ಷ, 12ರಿಂದ 15 ವರ್ಷ ಸ್ಪರ್ಧೆಗಳನ್ನು ನಡೆಸಲಾಗುತ್ತದೆ. ಆಸಕ್ತ ಅರ್ಹರು ತಮ್ಮ ಇತ್ತೀಚಿನ ಭಾವಚಿತ್ರ, ಆಧಾರ್‌ಕಾರ್ಡ್‌ದೊಂದಿಗೆ ನೋಂದಣಿ ಮಾಡಿಸಿಕೊಳ್ಳುವುದು. ನೋಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ ನೇಗಿಲಯೋಗಿ ಮರುಳೇಶ್ವರ ಸೇವಾ ಭವನ, ಜಯನಗರ, ಮೈಸೂರು ಕಚೇರಿಗೆ ಭೇಟಿ ನೀಡುವುದು. ದೂರವಾಣಿ ಸಂಖ್ಯೆ 95131 12155, 8296791429, 9483453005, 9900629393 ಸಂಪರ್ಕಿಸುವುದು.

## ಶ್ರವಣಯಂತ್ರ ಕೊಡುಗೆ



ಪೇರೆಂಟ್ಸ್ ಅಸೋಸಿಯೇಶನ್ ಆಫ್ ಡೆಫ್ ಚಿಲ್ಡ್ರನ್ ಅವರು ನಡೆಸುತ್ತಿರುವ ಇನ್ಸ್ಟಿಟ್ಯೂಟ್ ಆಫ್ ಮದರ್ & ಡೆಫ್ ಚೈಲ್ಡ್ ಸಂಸ್ಥೆಗೆ ಹೈದರಾಬಾದಿನ ಮೀನಾಕ್ಷಿ ವೆಂಕಟರಾಮನ್ ಫೌಂಡೇಶನ್ ಟ್ರಸ್ಟಿಗಳಾದ ಡಾ. ಸೇತುರಾಮನ್ ಮತ್ತು ಶ್ರೀಮತಿ ವಸಂತ ಅವರು ಭೇಟಿ ನೀಡಿ ಸಂಸ್ಥೆಯ ವಿದ್ಯಾರ್ಥಿಗಳಾದ ಮುಜೀಬ್ ಮತ್ತು ಸುಷ್ಮ ತಂಬಾಕೆ ಅವರಿಗೆ ಶ್ರವಣಯಂತ್ರ ಕೊಡುಗೆಯಾಗಿ ನೀಡಿದರು. ಚಿತ್ರದಲ್ಲಿ ಶಿಕ್ಷಕಿಯರಾದ ಪರಿಮಳ ಮೂರ್ತಿ, ಅಶ್ವಿನಿ, ಅಶ್ವಿನಿ ಪಾಟೀಲ್, ವಿಜಯ ಹಾಗೂ ಮಕ್ಕಳಿದ್ದಾರೆ.

## ಭಾರತದ ತೀವ್ರನಿಗಾ ಘಟಕಗಳಲ್ಲಿ ಕಿಡ್ನಿ ವೈಫಲ್ಯತೆ ಬದಲಾದ ಸನ್ನಿವೇಶಗಳು; ವಿಶೇಷ ಉಪನ್ಯಾಸ



ಜೆಎಸ್‌ಎಸ್ ಆಸ್ಪತ್ರೆ ಮತ್ತು ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಅಕಾಡೆಮಿಕ್ ಸೊಸೈಟಿಯಿಂದ ವಿಶೇಷ ಉಪನ್ಯಾಸ ನಡೆಯಿತು.

ಮೈಸೂರು, ಅ. 27– ಜೆಎಸ್‌ಎಸ್ ಆಸ್ಪತ್ರೆ ಮತ್ತು ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಅಕಾಡೆಮಿಕ್ ಸೊಸೈಟಿ ವತಿಯಿಂದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ಸ್ಮರಣಾರ್ಥ ಭಾರತದ ತೀವ್ರನಿಗಾ ಘಟಕಗಳಲ್ಲಿ ಕಿಡ್ನಿ ವೈಫಲ್ಯತೆಯ ಬದಲಾದ ಸನ್ನಿವೇಶಗಳು ವಿಷಯ ಕುರಿತು ವಿಶೇಷ ಉಪನ್ಯಾಸ ಆಯೋಜಿಸಲಾಗಿತ್ತು.

ಮುಖ್ಯ ಉಪನ್ಯಾಸಕರಾಗಿ ಆಗಮಿಸಿದ್ದ ಹೈದರಾಬಾದ್ ಯಶೋಧ ಆಸ್ಪತ್ರೆ ಮೂತ್ರಪಿಂಡ ಮತ್ತು ಕಿಡ್ನಿ ಕಸಿ ಸೇವೆಗಳ ಮುಖ್ಯಸ್ಥರು, ನಿರ್ದೇಶಕ ಡಾ. ಎಂ.ರಾಜಶೇಖರ್ ಚಕ್ರವರ್ತಿ ಮಾತನಾಡಿ, ತೀವ್ರವಾದ ಕಿಡ್ನಿ ವೈಫಲ್ಯವು ಭಾರತದಲ್ಲಿ ಪ್ರಮುಖ ಆರೋಗ್ಯ ಸಮಸ್ಯೆಯಾಗಿದೆ, ವಿಶೇಷವಾಗಿ ಆಸ್ಪತ್ರೆಗೆ ದಾಖಲಾದ ರೋಗಿಗಳಲ್ಲಿ ಸಾಮಾನ್ಯವಾಗಿ ತೀವ್ರನಿಗಾ ಘಟಕದ ರೋಗಿಗಳಲ್ಲಿ ಕಿಡ್ನಿ ವೈಫಲ್ಯವು ಹೆಚ್ಚಿದ್ದು, ಕಿಡ್ನಿ ವೈಫಲ್ಯತೆಯು ಅನಾರೋಗ್ಯದ ತೀವ್ರತೆ ಮತ್ತು ಐಸಿಯುಗಳಲ್ಲಿ ಚಿಕಿತ್ಸೆ ಪಡೆದ ಪ್ರಕರಣಗಳಲ್ಲಿ ಕಂಡುಬರುತ್ತದೆ.

ಚಿಕಿತ್ಸೆಯ ಸನ್ನಿವೇಶಗಳು ಮತ್ತು ಬದಲಾವಣೆಗಳು, ವೈದ್ಯಕೀಯ ಪ್ರಗತಿಗಳು, ಲಭ್ಯವಿರುವ ತಂತ್ರಜ್ಞಾನಗಳು, ಮತ್ತು ರೋಗಿಗಳ ನಿರ್ವಹಣೆ ಮೇಲೆ ಅವಲಂಬಿತವಾಗಿವೆ. ಮೂತ್ರಪಿಂಡ ವೈಫಲ್ಯವನ್ನು ನಿರ್ವಹಿಸಲು ಸುಧಾರಿತ ರೋಗನಿರ್ಣಯ ಮತ್ತು ಚಿಕಿತ್ಸಾ ವಿಧಾನಗಳು ಮುಖ್ಯವಾಗಿವೆ ಎಂದರು.

ರೋಗಿಗಳು ಮತ್ತು ಅವರ ಕುಟುಂಬದ ಸದಸ್ಯರೊಂದಿಗೆ ಸಂವಹನ ಮತ್ತು ಸಮಲೋಚನೆ ನಡೆಸುವುದು ಉತ್ತಮ ಅಭ್ಯಾಸ. ಸಮಾಜಕ್ಕೆ ನೀಡಬೇಕಾದ ಜವಾಬ್ದಾರಿಗಳು ಮತ್ತು ಕರ್ತವ್ಯಗಳ ಬಗ್ಗೆ ವೈದ್ಯರಿಗೆ ಸ್ಫೂರ್ತಿದಾಯಕ ಉಪನ್ಯಾಸ ನೀಡಿದ ಅವರು, ಚಿಕಿತ್ಸಾ ವಿಧಾನದಲ್ಲಿ ನವೀನತೆ ಅಳವಡಿಸುವಂತೆ ಕರೆ ನೀಡಿದರು. ನಿರಂತರ ಸಂಶೋಧನೆಗಳು ನಡೆಯುತ್ತಲೇ ಇರುತ್ತದೆ. ನಮ್ಮ ಆಧುನಿಕತೆಯ ತಂತ್ರಜ್ಞಾನದ ತುಡಿತ ನಿರಂತರವಾಗಿರಬೇಕು ಎಂದು ತಿಳಿಸಿದರು. ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಸಿ.ಪಿ.ಮಧು, ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಡಾ.ಡಿ.ನಾರಾಯಣಪ್ಪ, ಉಪಪ್ರಾಂಶುಪಾಲರಾದ ಡಾ.ಮಹಂತಪ್ಪ ಡಾ. ಪ್ರವೀಣ್ ಕುಲಕರ್ಣಿ, ವೈದ್ಯಕೀಯ ವಿಭಾಗದ ಮುಖ್ಯಸ್ಥ ಡಾ. ವೈ.ಎಸ್.ರವಿಕುಮಾರ್, ಇಂಡಿಯನ್ ಸೊಸೈಟಿ ಆಫ್ ಕ್ರಿಟಿಕಲ್ ಕೇರ್ ಮೆಡಿ ಸಿನ್ ಮೈಸೂರು ವಿಭಾಗದ ಛೇರ್ಮನ್ ಡಾ.ವೈದ್ಯನಾಥನ್, ಜೆಎಸ್‌ಎಸ್ ಅಕಾಡೆಮಿಕ್ ಸೊಸೈಟಿ ಛೇರ್ಮನ್ ಡಾ. ಮಂಜುನಾಥ ಶೆಟ್ಟಿ, ಕಾರ್ಯದರ್ಶಿ ಡಾ. ಅಶೋಕ್.ಪಿ, ಡಾ.ಅಕ್ಷಯ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ರಾಜ್ಯ ಮಟ್ಟದ ಜನಪದ, ಕನ್ನಡ ಗೀತೆಗಳ ನೃತ್ಯ ಸ್ಪರ್ಧೆ

ಮೈಸೂರು,ಅ.27– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು ಅವರು ಈ ಬಾರಿಯು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ನ.8ರಂದು ಕೇಂದ್ರ ಸಂಘದ ಆವರಣದಲ್ಲಿ ಹಮ್ಮಿಕೊಂಡಿರುವುದರಿಂದ ರಾಜ್ಯೋತ್ಸವ–2025ರ ಅಂಗವಾಗಿ ರಾಜ್ಯ ಮಟ್ಟದ ಜನಪದ, ಕನ್ನಡ ಗೀತೆಗಳ ನೃತ್ಯ(ಗುಂಪು ಸ್ಪರ್ಧೆ) ಸ್ಪರ್ಧೆಯನ್ನು ಬೆಂಗಳೂರಿನಲ್ಲಿ ಆಯೋಜಿಸಲಾಗಿದೆ.

ಸ್ಪರ್ಧೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯ ಸರ್ಕಾರದ ಖಾಯಂ ನೌಕರರು ಭಾಗವಹಿಸಬಹುದಾಗಿದೆ. ಆಸಕ್ತರು https://forms.gle/8pR3m5nXowwQzccs9 ಮೂಲಕ ನ.2ರ ಸಂಜೆ 5ರವರೆಗೆ ನೋಂದಾಯಿಸಿಕೊಳ್ಳಬಹುದು. ಪ್ರಥಮ ಬಹುಮಾನ ರೂ 1,00,000, ದ್ವಿತೀಯ ಬಹುಮಾನ ರೂ.75,000, ತೃತೀಯ ಬಹುಮಾನ ರೂ.50,000, ಸಮಾಧಾನಕರ ಬಹುಮಾನ ರೂ.20,000 ನೀಡಲಾಗುತ್ತದೆ. ಸ್ಪರ್ಧೆಗಳು ನಡೆಯುವ ಸ್ಥಳ ಮತ್ತು ಕಾರ್ಯಕ್ರಮದ ವಿವರಗಳನ್ನು ನೋಂದಣಿ ಅಂತಿಮ ದಿನಾಂಕದ ನಂತರ ಕೇಂದ್ರ ಸಂಘವು ತಿಳಿಸುತ್ತದೆ ಎಂದು ಪ್ರಕಟಣೆ ತಿಳಿಸಿದೆ

## ಅ.31ರಂದು ನಿರ್ಗಮನ ಪಥ ಸಂಚಲನ

ಮೈಸೂರು,ಅ.27–ಪೊಲೀಸ್ ತರಬೇತಿ ಶಾಲೆ, ಮೈಸೂರು 9ನೇ ತಂಡದ ಮಹಿಳಾ ನಾಗರಿಕ ಪೊಲೀಸ್ ಕಾನ್‌ಸ್ಟೇಬಲ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನವನ್ನು ಅ.31ರಂದು ಬೆಳಗ್ಗೆ 8 ಗಂಟೆಗೆ ಕವಾಯತು ಮೈದಾನ ಪೊಲೀಸ್ ತರಬೇತಿ ಶಾಲೆ, ಜ್ಯೋತಿನಗರ, ಮೈಸೂರು ಇಲ್ಲಿ ಆಯೋಜಿಸಲಾಗಿದೆ. ಹೆಚ್ಚುವರಿ ಪೊಲೀಸ್ ನಿರ್ದೇಶಕ ಅಲೋಕ್‌ಕುಮಾರ್ ಮುಖ್ಯ ಅತಿಥಿಗಳಾಗಿ ಹಾಗೂ ಪಥಸಂಚಲನ ಪರಿವೀಕ್ಷಣೆ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸುವರು.

## ಇಂದು ಕನ್ನಡ ಚಿತ್ರಗೀತೆಗಳ ಗಾಯನ

ಮೈಸೂರು,ಅ.27(ಜಿಎ)–ಕನ್ನಡ ರಾಜ್ಯೋತ್ಸವ ಪ್ರಯುಕ್ತ ಸ್ಟ್ಯಾನ್ಲಿ ಪಾರ್ಕರ್ ಸ್ಕೂಲ್ ಆಫ್ ಮ್ಯೂಸಿಕ್ ವತಿಯಿಂದ ಅ.28ರಂದು ಸಂಜೆ 4 ಗಂಟೆಯಿಂದ ರಾತ್ರಿ 9ರವರೆಗೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ಕನ್ನಡ ಚಿತ್ರಗೀತೆ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಮುಖ್ಯಸ್ಥ ಸ್ಟ್ಯಾನ್ಲಿ ಪಾರ್ಕರ್ ಈ ವಿಷಯ ತಿಳಿಸಿ, ಕನ್ನಡ ಚಿತ್ರಗಳ ಸುಮಾರು 60 ಗೀತೆಗಳನ್ನು ಹಾಡಲಾಗುವುದು. ಸಂಸ್ಥೆಯ 24 ವಿದ್ಯಾರ್ಥಿಗಳು ಪ್ರಸ್ತುತಪಡಿಸಲಿದ್ದಾರೆ. ಗಾಯಕರು ಭುವನೇಶ್ವರಿ ತಾಯಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಎನ್.ಅಮರ್, ಯದುನಂದನ್, ದೇವಪ್ಪ ಉಪಸ್ಥಿತರಿದ್ದರು.

## ಕರ್ನಾಟಕ ಸೇನಾ ಪಡೆಯಿಂದ ಗಾಂಧಿ ಜಯಂತಿ ಆಚರಣೆ



ವಿವಿಧ ಕ್ಷೇತ್ರದ ಸಾಧಕರಿಗೆ ಎಂಎಲ್‌ಸಿ ಡಾ. ಡಿ.ತಿಮ್ಮಯ್ಯ ಮಹಾತ್ಮ ಗಾಂಧೀಜಿ ಸದ್ಭಾವನಾ ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಮೈಸೂರು,ಅ.27–ಕರ್ನಾಟಕ ಸೇನಾ ಪಡೆ ವತಿಯಿಂದ ಮೈಸೂರಿನ ರೋಟರಿ ಸಭಾಂಗಣದಲ್ಲಿ ಆಯೋಜಿಸಿದ್ದ ಗಾಂಧೀಜಿ ಜಯಂತಿ ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಮಹಾತ್ಮ ಗಾಂಧೀಜಿ ಅವರು ಈ ದೇಶ, ವಿಶ್ವದ ಅತ್ಯುತ್ತಮ ಶಾಂತಿ & ಅಹಿಂಸ ನಾಯಕ. ನಾವು ಯಾರು ಪರಮಾತ್ಮನನ್ನು ನೋಡಿಲ್ಲ. ಪರಮಾತ್ಮನನ್ನು ನಾವು ಶಕ್ತಿ ಕೊಡು ಎಂದು ಕೇಳಿಕೊಳ್ಳುತ್ತೇವೆ. ಆದರೆ ಮಹಾತ್ಮ ನಮ್ಮ ದೇಶದ 150 ಕೋಟಿ ಜನರಿಗೆ ಶಕ್ತಿಯನ್ನು ನೀಡಿದವರು. ಗಾಂಧೀಜಿಯವರ ತ್ಯಾಗ, ಹೋರಾಟ, ಶ್ರಮವನ್ನು ಈ ದೇಶದಲ್ಲಿ ಯಾರು ನೆನಪಿಸಿಕೊಳ್ಳುತ್ತಿಲ್ಲ. ಇಂದು ಭಾರತ ಆರ್ಥಿಕತೆಯಲ್ಲಿ ವಿಶ್ವದಲ್ಲಿ 3ನೇ ಸ್ಥಾನಕ್ಕೆ ಹೋಗಲು ಇವರ ಆಶೀರ್ವಾದ, ಸಂಕಲ್ಪವೇ ಕಾರಣ. ಮಹಾತ್ಮ ಗಾಂಧೀಜಿ ಅವರ ತ್ಯಾಗ ಶಾಂತಿ ಅಹಿಂಸಾ ಮಾರ್ಗವನ್ನು ಭಾರತೀಯರೆಲ್ಲರೂ ಅನುಸರಿಸಬೇಕು. ಬಹಳ ವರ್ಷಗಳ ಕಾಲ ಬ್ರಿಟಿಷರು ನಮ್ಮನ್ನು ಆಳಿದರು. 1857ರಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಶುರುವಾದರೂ ಅನೇಕ ಮಹನೀಯರು ಸ್ವಾತಂತ್ರ್ಯ ಕೊಡಿಸುವ ನಿಟ್ಟಿನಲ್ಲಿ ಹೋರಾಟಗಳನ್ನು ಮಾಡಿದರೂ, ಕಟ್ಟಕಡೆಯದಾಗಿ ಮಹಾತ್ಮ ಗಾಂಧೀಜಿಯವರ ನಾಯಕತ್ವದಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ದಕ್ಕಿತು. ಇವರ ಜಯಂತಿ, ಇವರ ತತ್ವ ಆದರ್ಶಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಎಂದರು.

ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಗಾಂಧಿವಾದಿ, ನಿವೃತ್ತ ಪ್ರಸಾರಾಂಗ ನಿರ್ದೇಶಕ ಕೆ.ಟಿ.ವೀರಪ್ಪ, ಕೆಆರ್ ಆಸ್ಪತ್ರೆ ನಿವೃತ್ತ ವೈದ್ಯಾಧಿಕಾರಿ ಡಾ.ಎಲ್. ದೇವೇಗೌಡ, ಸಮಾಜ ಸೇವಕರಾದ ಕೆ.ಆರ್.ಧನ್ಯಕುಮಾರ್, ಕಿಯೋನಿಕ್ಸ್ ಸುಜುಕಿ ವ್ಯವಸ್ಥಾಪಕ ನಿರ್ದೇಶಕ ಬಾಲಾಜಿ ಪಿ.ಎಸ್, ಹಿರಿಯ ಸಾಹಿತಿ ಡಾ.ಪುಷ್ಪ ಎಂ.ಅಯ್ಯಂಗಾರ್, ನೇತ್ರ ರೋಗ ತಜ್ಞ ಡಾ.ಸುಧೀಂದ್ರ ಆರ್, ಧಾರ್ಮಿಕ ಮುಖಂಡ ಡಾ.ಶ್ರೀಷಾ ಭಟ್, ರಾಣಿಪ್ರಭ ಇತರರಿಗೆ ಮಹಾತ್ಮ ಗಾಂಧೀಜಿ ಸದ್ಭಾವನಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಮಹಾರಾಣಿ ವಿಜ್ಞಾನ ಕಾಲೇಜಿನ ಸುಮಾರು 40 ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ ಮಹಾತ್ಮ ಗಾಂಧೀಜಿ ಕುರಿತು ಮಾತನಾಡಿದರು. ಮಹಾತ್ಮ ಗಾಂಧೀಜಿ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷ ಟಿಜಿ ಆದಿಶೇಷಗೌಡ, ಮೈಸೂರು ನಗರಪಾಲಿಕೆ, ವಲಯ 3ರ ಸಹಾಯಕ ಆಯುಕ್ತ ಎಂ.ಸಂದೀಪ್, ಹಿರಿಯ ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಕರ್ನಾಟಕ ರಾಜ್ಯಾಧ್ಯಕ್ಷ ಶ್ರೀನಿವಾಸಗೌಡ, ಮೈಸೂರು ಜಿಲ್ಲಾ ಅಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಕೃಷ್ಣಪ್ಪ, ಹನುಮಂತಯ್ಯ, ಸಿಂಧುವಳ್ಳಿ ಶಿವಕುಮಾರ್, ಬೋಗಾದಿ ಸಿದ್ದೇಗೌಡ, ವರಕೂಡು ಕೃಷ್ಣೇಗೌಡ, ಪ್ರಭಾಕರ್, ನೇಹ, ಭಾಗ್ಯಮ್ಮ, ಜ್ಯೋತಿ, ಗೀತಾಗೌಡ, ಡಾ.ಶಾಂತರಾಜೇ ಅರಸ್, ಮೋಗಣ್ಣಾಚಾರ್, ಬಸವರಾಜು, ಕುಮಾರ್, ರಘು ಅರಸ್, ರವೀಶ್, ವಿಷ್ಣು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಮಂಗಳವಾರ 28 ಅಕ್ಟೋಬರ್ 2025

# ಶಿಕ್ಷಕರ ಅಸಭ್ಯ ವರ್ತನೆ ವಿರುದ್ಧ ವಿದ್ಯಾರ್ಥಿಗಳ ಪ್ರತಿಭಟನೆ

ಪಾಂಡವಪುರ, ಅ.27–ಸರಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕರು ಸರಿಯಾಗಿ ಪಾಠ ಮಾಡುತ್ತಿಲ್ಲ. ಕೆಲವು ಶಿಕ್ಷಕರು ಮಕ್ಕಳೊಂದಿಗೆ ಅಸಭ್ಯವಾಗಿ ವರ್ತಿಸುತ್ತಾರೆ ಎಂದು ಆರೋಪಿಸಿ ಶಾಲೆಯ ಕೆಲ ವಿದ್ಯಾರ್ಥಿಗಳು ಪಟ್ಟಣದ ತಹಶೀಲ್ದಾರ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ತಹಶೀಲ್ದಾರ್ ಕಚೇರಿಯ ಬಳಿಗೆ ಆಗಮಿಸಿದ ವಿದ್ಯಾರ್ಥಿಗಳು ಕಚೇರಿಯ ಮುಂಭಾಗ ಪ್ರತಿಭಟನೆ ನಡೆಸಿ ಶಿಕ್ಷಕರ ವಿರುದ್ಧ ಆಕ್ರೋಶ ಹೊರಹಾಕಿದರು. ಸರಕಾರಿ ಪ್ರೌಢಶಾಲೆಯಲ್ಲಿ ಕೆಲವು ಶಿಕ್ಷರು ಸರಿಯಾಗಿ ಪಾಠ ಪ್ರವಚನ ಮಾಡು ತ್ತಿಲ್ಲ. ಪಾಠ ಮಾಡದಿರುವುದನ್ನು ಪ್ರಶ್ನಿ ಸುವ ಮಕ್ಕಳಿಗೆ ಬೆದರಿಕೆ ಹಾಕುವ ಜತೆಗೆ ಅಶ್ಲೀಲ ಶಬ್ದಗಳಿಂದ ಅಸಭ್ಯವಾಗಿ ಮಾತನಾಡುತ್ತಾರೆ. ಪ್ರಶ್ನೆ ಮಾಡುವ ಮಕ್ಕಳ ವಿಡಿಯೋ, ಫೋಟೋ ತೆಗೆದುಕೊಂಡು ನಿಮ್ಮ ಬಾಲ ಕಟ್ ಮಾಡುತ್ತೇವೆ ಎಂದು ಧಮ್ಕಿ ಹಾಕುತ್ತಿದ್ದಾರೆ ಎಂದು ಕಿಡಿಕಾರಿದರು.

ಶಾಲೆಯಲ್ಲಿ ಶಿಕ್ಷಕರ ದುರ್ವತನೆ ಬಗ್ಗೆ ಸ್ಥಳೀಯ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಗಮನಕ್ಕೂ ತಂದೆವು, ಅವರೂ ಸಹ ಶಾಲೆಗೆ ಭೇಟಿ ಕೊಟ್ಟು ಶಿಕ್ಷಕರೊಂದಿಗೆ ಚರ್ಚಿಸಿದ್ದಾರೆ. ಅದಾದ ಬಳಿಕವೂ ಶಿಕ್ಷಕರ ವರ್ತನೆ ಮುಂದುವರೆದಿದೆ, ಈ ವಿಚಾರವಾಗಿ ಮಕ್ಕಳ ಸಹಾಯವಾಣಿಗೂ ಕರೆ ಮಾಡಿ ಮಾಹಿತಿ ನೀಡಿದ್ದೇವೆ. ಅಲ್ಲಿನ ಅಧಿಕಾರಿಗಳು ಬಂದು ಮಕ್ಕಳೊಂದಿಗೆ ಚರ್ಚಿಸಿ ಶಿಕ್ಷಕರಿಗೆ ಸೂಚನೆ ನೀಡಿದ್ದಾರೆ. ಶಿಕ್ಷಕರ ಈ ವರ್ತನೆಯಿಂದಾಗಿ ಮಾನಸಿಕವಾಗಿ ಒತ್ತಡವಾಗುತ್ತಿದೆ, ಸಮಸ್ಯೆ ಬಗೆಹರಿಸಬೇಕೆಂದು ಒತ್ತಾಯಿಸಿದರು.

ಮಕ್ಕಳೊಂದಿಗೆ ಶಾಲೆಗೆ ಆಗಮಿಸಿದ ತಹಶೀಲ್ದಾರ್ ಬಸವರೆಡ್ಡಪ್ಪ ರೋಣದ ಮಕ್ಕಳ ಸಮಸ್ಯೆ ಬಗ್ಗೆ ಚರ್ಚಿಸಿ, ಶಿಕ್ಷರಿಗೂ ಕಿವಿಮಾತು ಹೇಳಿದರು. ಶಿಕ್ಷಕರ ನಡವಳಿಕೆ ಬಗ್ಗೆ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಮಾಕೇಗೌಡ ಸಹ ಬೇಸರ ವ್ಯಕ್ತಪಡಿಸಿದರು.

ತಹಶೀಲ್ದಾರ್ ಬಸವರೆಡ್ಡಪ್ಪ ರೋಣದ ಅವರು, ಮಕ್ಕಳು ಪ್ರತಿಭಟನೆ ಮಾಡಿದ ಹಿನ್ನೆಲೆಯಲ್ಲಿ ಶಾಲೆಗೆ ಭೇಟಿಕೊಟ್ಟು ಮಕ್ಕಳು ಹಾಗೂ ಶಿಕ್ಷಕರೊಂದಿಗೆ ಚರ್ಚಿಸಿದ್ದೇನೆ. ಮೇಲ್ನೋಟಕ್ಕೆ ಇಲ್ಲಿ ಶಿಕ್ಷಕರ ಬಣಗಳು ಕಾಣುತ್ತಿವೆ. ಶಿಕ್ಷಕರಿಗೆ ಸೂಚನೆಕೊಟ್ಟು ಕೊನೆ ಅವಕಾಶ ಕೊಟ್ಟಿದ್ದೇವೆ. ಹೀಗೆ ಮುಂದುವರೆದರೆ ಶಿಸ್ತು ಕ್ರಮಜರುಗಿಸಲಾಗುವುದು ಎಂದರು.


## ನವೆಂಬರ್ 5 ರಂದು ಕಲಾಶ್ರೀ ಸ್ಪರ್ಧೆ

ಮಂಡ್ಯ, ಅ.27– 2025 26ನೇ ಸಾಲಿನಲ್ಲಿ ಮಕ್ಕಳ ದಿನಾಚರಣೆಯ ಅಂಗವಾಗಿ 5 ರಿಂದ 15 ವರ್ಷದ ಒಳಗಿನ ಮಕ್ಕಳಿಗೆ ಜಿಲ್ಲೆಯ ಬಾಲ ಭವನದಲ್ಲಿ ಜಿಲ್ಲಾಮಟ್ಟದ ಕಲಾಶ್ರೀ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಸೃಜನಾತ್ಮಕ ಕಲೆ, ಸೃಜನಾತ್ಮಕ ಪ್ರದರ್ಶನ ಕಲೆ, ಸೃಜನಾತ್ಮಕ ಬರವಣಿಗೆ ಮತ್ತು ವಿಜ್ಞಾನದಲ್ಲಿ ನೂತನ ಆವಿಷ್ಕಾರ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ನಡೆಸಲಾಗುವುದು 6 ರಿಂದ 16 ವರ್ಷದ ಒಳಗಿನ ಮಕ್ಕಳು ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕಾರ್ಯಕ್ರಮ ಸಂಯೋಜಕರಾದ ಪಿ.ಕೋಮಲ ದೂರವಾಣಿ ಸಂಖ್ಯೆ 9036801065 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಹಾಗೂ ಜಿಲ್ಲಾ ಬಾಲ ಭವನ ಸಮಿತಿ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯೋಧ ಲೋಕೇಶ್‌ಗೆ ಗ್ರಾಮದಲ್ಲಿ ಅಶ್ರುತರ್ಪಣದ ವಿದಾಯ



ವೀರಯೋಧನ ಪಾರ್ಥಿವ ಶರೀರಕ್ಕೆ ಶಾಸಕ ಹೆಚ್.ಟಿ.ಮಂಜು ಅಂತಿಮ ನಮನ ಸಲ್ಲಿಸುತ್ತಿರುವುದು.

ಕೆ.ಆರ್.ಪೇಟೆ, ಅ.27– ಭಾರತೀಯ ಗಡಿ ಭದ್ರತಾ ಪಡೆಯಲ್ಲಿ ಯೋಧರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಪಂಜಾಬ್ ರಾಜ್ಯದ ಪಠಾಣ್ ಕೋಟ್‌ನಲ್ಲಿ ಹೃದಯಾಘಾತಕ್ಕೊಳಗಾದ ಮೈಲಾರಪಟ್ಟಣ ಲೋಕೇಶ್(44)ರವರ ಪಾರ್ಥಿವ ಶರೀರವನ್ನು ಸೋಮವಾರ ಗ್ರಾಮಕ್ಕೆ ತರಲಾಯಿತು.

ಪಠಾಣ್ ಕೋಟ್‌ನಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತಂದು, ಅಲ್ಲಿಂದ ಸೇನಾ ವಿಶೇಷ ವಾಹನದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಪಾರ್ಥಿವ ಶರೀರವನ್ನು ಗಡಿ ಭದ್ರತಾ ಪಡೆಯ ವಾಹನದಲ್ಲಿ ಪಟ್ಟಣದ ಹೇಮಾ ವತಿ ಬಡಾವಣೆಯ ಮನೆಯ ಬಳಿಗೆ ತಂದು ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು. ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ್ದ ದೇಶಭಕ್ತರು ಸರತಿಯ ಸಾಲಿನಿಂದ ಮೃತ ಯೋಧನಿಗೆ ಆಶ್ರು ತರ್ಪಣದೊಂದಿಗೆ ಅಂತಿಮ ನಮನ ಸಲ್ಲಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ, ಶಾಸಕ ಹೆಚ್.ಟಿ. ಮಂಜು, ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ನಾಗೇಂದ್ರ ಕುಮಾರ್, ಆರ್.ಟಿ.ಓ.ಮಲ್ಲಿಕಾರ್ಜುನ್, ತಹಸೀಲ್ದಾರ್ ಡಾ.ಎಸ್.ಯು.ಅಶೋಕ್, ರಾಜಸ್ವ ನಿರೀಕ್ಷಕ ಜ್ಞಾನೇಶ್, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ವಿ.ಡಿ. ಹರೀಶ್, ಪುರಸಭೆ ಅಧ್ಯಕ್ಷೆ ಪಂಕಜಾ ಪ್ರಕಾಶ್, ಉಪಾಧ್ಯಕ್ಷೆ ಸೌಭಾಗ್ಯ ಉಮೇಶ್, ಸದಸ್ಯರಾದ ಡಿ.ಪ್ರೇಮಕುಮಾರ್, ಹೆಚ್.ಆರ್.ಲೋಕೇಶ್, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಸ್.ಆರ್.ಆನಂದ್ ಕುಮಾರ್ ಮೊದಲಾದ ನೂರಾರು ಗಣ್ಯರು ಅಂತಿಮ ನಮನ ಸಲ್ಲಿಸಿದರು.

ಮೃತ ಮೈಲಾರಪಟ್ಟಣ ಲೋಕೇಶ್ ಪತ್ನಿ, 12 ವರ್ಷದ ಮತ್ತು 7 ವರ್ಷದ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಸಾರ್ವಜನಿಕರ ದರ್ಶನದ ನಂತರ ಪಾರ್ಥಿವ ಶರೀರ ವನ್ನು ಗಡಿ ಭದ್ರತಾ ಪಡೆಯ ವಿಶೇಷ ವಾಹನದಲ್ಲಿಟ್ಟು ಅವರ ಹುಟ್ಟೂರು ನಾಗಮಂಗಲ ತಾಲೂಕಿನ ಮೈಲಾರ ಪಟ್ಟಣ ಗ್ರಾಮಕ್ಕೆ ಕೊಂಡೊಯ್ದು ನಾಗಮಂಗಲ ತಹಸೀಲ್ದಾರ್ ಆದರ್ಶ ಅವರ ನೇತೃತ್ವದಲ್ಲಿ ಪೊಲೀಸರು, ಮೂರು ಸುತ್ತು ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು. ಯೋಧನ ಪಾರ್ಥಿವ ಶರೀರದ ಮೇಲೆ ಹೊದಿಸಲಾಗಿದ್ದ ತ್ರಿವರ್ಣ ಧ್ವಜವನ್ನು ಜಿಲ್ಲಾಡಳಿತದ ಹಾಗೂ ಸೇನಾ ಅಧಿಕಾರಿಗಳು ಕುಟುಂಬದವರಿಗೆ ಹಸ್ತಾಂತರ ಮಾಡಿದರು.

## ಮನೆಯ ಹಲವೆಡೆ ರಕ್ತ: ಆತಂಕದಲ್ಲಿ ದಂಪತಿ



ಮನೆಯಲ್ಲಿ ರಕ್ತ ಚೆಲ್ಲಾಡಿರುವುದು


ಮದ್ದೂರು, ಅ.27–ತಾಲೂಕಿನ ಹೊಂಬಾಳೇಗೌಡನದೊಡ್ಡಿ ಮನೆಯೊಂದರಲ್ಲಿ ಏಕಾಏಕಿ ಹಲವು ಕಡೆಗಳಲ್ಲಿ ರಕ್ತ ಕಾಣಿಸಿಕೊಂಡು ಆತಂಕ ಮೂಡಿಸಿದೆ.

ಗ್ರಾಮದ ಸೌಮ್ಯ ಸತೀಶ್ ದಂಪತಿ ಮನೆಯಲ್ಲಿ ಸೋಮವಾರ ರಕ್ತ ಕಾಣಿಸಿಕೊಂಡಿದ್ದು, ಬೆಳಗ್ಗೆ 9 ಗಂಟೆ ಸಮಯದಲ್ಲಿ ಮನೆ ಸ್ವಚ್ಛ ಮಾಡುವಾಗ ಸ್ನಾನದ ಮನೆಯಲ್ಲಿ ಮೊದಲಿಗೆ ರಕ್ತ ಕಾಣಿಸಿಕೊಂಡಿದೆ. ನಂತರ ಮನೆಯ ಹಲವು ಭಾಗಗಳಲ್ಲಿ ರಕ್ತ ಕಾಣಿಸಿಕೊಂಡಿದೆ.

ಸೌಮ್ಯ ಸತೀಶ್ ದಂಪತಿಗೆ ಯಾವುದೇ ರೀತಿಯ ಗಾಯ ವಾಗಿಲ್ಲ. ಆದರೂ ಮನೆಯಲ್ಲಿ ರಕ್ತ ಹೇಗೆ ಬಂತು ಎಂಬುವುದರ ಬಗ್ಗೆ ಗಾಬರಿಗೊಂಡ ಪೊಲೀಸರಿಗೆ ತಿಳಿಸಿದ್ದಾರೆ. ಘಟನೆ ತಿಳಿದ ಗ್ರಾಮಸ್ಥರು ಮನೆಯ ಬಳಿ ಆತಂಕದಿಂದ ಬಂದು ನೋಡುತ್ತಿದ್ದುದು ಸಾಮಾನ್ಯವಾಗಿತ್ತು.

ನಂತರ ಮದ್ದೂರು, ಬೆಸಗರಹಳ್ಳಿ ಪೊಲೀಸರು ಮನೆಗೆ ಬಂದು ಪರಿಶೀಲನೆ ಮಾಡಿ, ರಕ್ತವನ್ನು ಪರೀಕ್ಷೆ ಮಾಡಲು ಸಂಗ್ರಹಿಸಿಕೊಂಡು ಹೋಗಿದ್ದಾರೆ. ಯಾವ ರಕ್ತ ಹಾಗೂ ಮನೆಗೆ ರಕ್ತ ಹೇಗೆ ಬಂತು ಎಂಬುವುದರ ಬಗ್ಗೆ ಪ್ರಯೋಗಾಲಯದಿಂದ ವರದಿ ಬಂದ ನಂತರ ತಿಳಿಯಬೇಕಾಗಿದೆ.

## ಬಸ್ ರಿವರ್ಸ್ ಚಲಿಸಿ; ಮಹಿಳೆ ಸಾವು





ಬಸ್ ಹಿಂಬದಿ ಚಲಿಸಿ ಗುದ್ದಿದ ಪರಿಣಾಮ ತೀವ್ರ ಗಾಯಗೊಂಡಿರುವ ಮಹಿಳೆ

ಶ್ರೀರಂಗಪಟ್ಟಣ, ಅ.27–ಕೇರಳ ಮೂಲದ ಬಸ್ ಹಿಂಬದಿ ಚಲಿಸಿ ಮಹಿಳೆಯರಿಗೆ ಗುದ್ದಿದ ಪರಿಣಾಮ ಓರ್ವ ಮಹಿಳೆ ಸಾವನ್ನಪ್ಪಿ ಮತ್ತೊಬ್ಬರು ಗಾಯಗೊಂಡ ಘಟನೆ ಭಾನುವಾರ ರಾತ್ರಿ ಕೆಆರ್‌ಎಸ್ ಬೃಂದಾವನ ಬಸ್ ಪಾರ್ಕಿಂಗ್‌ನಲ್ಲಿ ನಡೆದಿದೆ.

ಕೇರಳ ಮೂಲದ ಕೊಲ್ಲಂ ಬಳಿ ಗ್ರಾಮದ ಮಹಿಳೆ ಮೃತಪಟ್ಟವರಾಗಿದ್ದಾರೆ. ಇವರು ಬೃಂದಾವನ ವೀಕ್ಷಣೆ ಮಾಡಿ ಬಂದು ಊಟ ಮಾಡುತ್ತಿರುವಾಗ ಕೇರಳ ಕೊಪ್ಪಂನಿಂದ ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಕರೆತಂದಿದ್ದ ಬಸ್ಸಿನ ಚಾಲಕ ಬ್ರೇಕ್ ತೆಗೆದು ಚಾಲನೆ ಮುಂದಾದ್ದ ಸಂದರ್ಭದಲ್ಲಿ ಏಕಾಏಕಿ ಹಿಂಬದಿ ಚಲಿಸಿದೆ.

ಹಿಂದೆ ಕಟ್ಟೆಯಲ್ಲಿ ಕುಳಿತು ಊಟ ಮಾಡುತ್ತಿದ್ದ ಇಬ್ಬರು ಮಹಿಳೆಯರಿಗೆ ಬಸ್ ಗುದ್ದಿದ ಪರಿಣಾಮ ತಲೆ, ಮುಖ ಹಾಗೂ ಕಣ್ಣುಗಳಿಗೆ ತೀವ್ರವಾಗಿ ಗಾಯಗಳಾಗಿವೆ ಕೂಡಲೇ ಬಸ್ ಮೂಲಕವೇ ಮೈಸೂರು ಖಾಸಗಿ ಆಸ್ಪತ್ರೆಗೆ ಕರೆದೊಯ್ದಿದ್ದು, ಅಲ್ಲಿ ಕೌಸಲ್ಯ ಎಂಬ ಮಹಿಳೆ ಸಾವನಪ್ಪಿದ್ದು, ಗಾಯಗೊಂಡಿದ್ದ ನಾರಯಣಿ ಎಂಬ ಮಹಿಳೆಯನ್ನು ತೀವ್ರವಾಗಿ ನಿಗಾ ಘಟಕದಲ್ಲಿರಿಸಲಾಗಿದೆ. ಸ್ಥಳಕ್ಕೆ ಕೆ.ಆರ್.ಸಾಗರ ಪೊಲೀಸ್ ಠಾಣೆ ಪಿ.ಎಸ್.ಐ ರಮೇಶ್ ಕರಿಕಟ್ಟೆ ಭೇಟಿ ನೀಡಿ ಪರಿಶೀಲಿಸಿದರು.

# ಡಿಸಿಸಿ ಬ್ಯಾಂಕ್ ಚುನಾವಣೆ: ಕಾಂಗ್ರೆಸ್ ಬೆಂಬಲಿತ ಆರು ಮಂದಿ ಅವಿರೋಧ ಆಯ್ಕೆ



ಡಿಸಿಸಿ ಬ್ಯಾಂಕ್‌ಗೆ ಅವಿರೋಧವಾಗಿ ಆಯ್ಕೆಯಾದ ಕಾಂಗ್ರೆಸ್ ಪಕ್ಷದ ಬೆಂಬಲಿತ ಅಭ್ಯರ್ಥಿಗಳನ್ನು ಅಭಿನಂದಿಸಲಾಯಿತು

ಮಂಡ್ಯ, ಅ.27–ಡಿಸಿಸಿ ಬ್ಯಾಂಕ್‌ಗೆ ಸೋಮವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವ್ಯವಸಾಯ ಪತ್ತಿನ ಸಹಕಾರ ಸಂಘದಿಂದ ಶಾಸಕ ಪಿ.ಎಂ.ನರೇಂದ್ರಸ್ವಾಮಿ, ನಟ ಸಚಿನ್ ಚಲುವರಾಯಸ್ವಾಮಿ ಹಾಗೂ ಸಂದರ್ಶ್, ಟಿಎಪಿಸಿಎಂಎಸ್ ನಿಂದ ದಿನೇಶ್, ಕೈಗಾರಿಕಾ ಮತ್ತು ಇತರೆ ಕ್ಷೇತ್ರದಿಂದ ಜೋಗಿಗೌಡ, ಜಿಲ್ಲಾ ಬಳಕೆದಾರರು ಹಾಗೂ ವ್ಯವಸಾಯೇತರ ಪತ್ತಿನ ಸಹಕಾರ ಸಂಘದಿಂದ ಹಾಲಳ್ಳಿ ಅಶೋಕ್‌ರವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ರವಿಕುಮಾರ್ ಗಣಿಗ, ಬಹುಮತ ನಮ್ಮದೇ ಇರುವುದರಿಂದ ಡಿಸಿಸಿ ಬ್ಯಾಂಕ್ ನ ಅಧಿಕಾರ ನಮಗೆ ಸಿಗಲಿದೆ ಎಂದಿದ್ದಾರೆ.

## ಭಾರೀ ಮಳೆಗೆ ಮನೆ ಗೋಡೆ ಕುಸಿತ: ತಹಸೀಲ್ದಾರ್ ಪರಿಶೀಲನೆ



ಮಳೆಗೆ ಹಾನಿಗೊಳಗಾದ ಮನೆಯನ್ನು ತಹಸೀಲ್ದಾರ್ ಎಸ್.ಯು.ಅಶೋಕ್ ಪರಿಶೀಲಿಸಿದರು.

ಕಿಕ್ಕೇರಿ, ಅ.27–ಕಳೆದ ವಾರದಿಂದ ಬಿಡದೆ ಸುರಿಯುತ್ತಿರುವ ಮಳೆಯಿಂದ ಮಣ್ಣಿನ ಗೋಡೆ ಮನೆಗಳು ಶೀತವಾಗಿ ಒಂದೊಂದಾಗಿ ಕುಸಿಯಲು ಆರಂಭಿಸಿವೆ.

ಸಮೀಪದ ಕಾರಿಗಾನಹಳ್ಳಿ, ಹೆಗ್ಗಡಹಳ್ಳಿ ಮತ್ತಿತರ ಗ್ರಾಮಗಳಲ್ಲಿ ಬಡತನದಿಂದ ಬದುಕು ಸಾಗಿಸುತ್ತಿರುವ ಮಣ್ಣಿನ ಗೋಡೆಯ ಹೆಂಚಿನ ಮನೆಯಲ್ಲಿ ವಾಸ ಮಾಡುತ್ತಿರುವ ಮನೆಗಳು ಸಾಕಷ್ಟು ಹಾನಿಯಾಗಿವೆ. ಹೋಬಳಿಯ ಕಾರಿಗನಹಳ್ಳಿ ಗ್ರಾಮದ ಲೀಲಾವತಿ ಕಾಂತರಾಜು, ಪುಟ್ಟಮ್ಮ ಲೇಟ್ ರಾಜೇಗೌಡ, ಸುನಂದ ಸುರೇಶ್, ಹೆಗ್ಗಡಹಳ್ಳಿ ಶಿವಕುಮಾರ್ ಅವರ ಮನೆಗಳು ಮಳೆಗೆ ಸಂಪೂರ್ಣ ಹಾನಿಯಗಿವೆ.

ಹಾನಿಗೊಳಗಾದ ಮನೆಗಳನ್ನು ವೀಕ್ಷಣೆ ಮಾಡಲು ಘಟನಾ ಸ್ಥಳಕ್ಕೆ ತಹಸೀಲ್ದಾರ್ ಎಸ್.ಯು.ಅಶೋಕ್ ತೆರಳಿ ಪರಿಶೀಲನೆ ಮಾಡಿದರು. ಸರ್ಕಾರದಿಂದ ಹಾನಿಗೊಳಗಾದ ಮನೆಗಳಿಗೆ ಸರ್ಕಾರದ ನಿಯಮಾವಳಿಯಂತೆ ಪ್ರಾಕೃತಿಕ ವಿಕೋಪದಡಿಯಲ್ಲಿ ಸೂಕ್ತ ಪರಿಹಾರ ನೆರವು ಕೊಡಿಸಲಾಗುವುದು ಎಂದರು. ರಾಜಸ್ವ ನಿರೀಕ್ಷಕ ಜ್ಞಾನೇಶ್, ಗ್ರಾಮ ಲೆಕ್ಕಾಧಿಕಾರಿ ರಘು, ಗ್ರಾ.ಪಂ ಮಾಜಿ ಅಧ್ಯಕ್ಷ ಜಯರಾಮ್, ಮುಖಂಡ ಬಸವರಾಜಪ್ಪ, ರವಿಕುಮಾರ್, ನಾಗರಾಜ್, ಗಂಗಾಧರ್, ಸುರೇಶ್ ಮತ್ತಿತರರಿದ್ದರು.

## ಚಿನಕುರಳಿಯ ದೇವಸ್ಥಾನಗಳಲ್ಲಿ ಕಾರ್ತಿಕ ಮಾಸದ ಉತ್ಸವ

ಚಿನಕುರಳಿ, ಅ.27– ಗ್ರಾಮದಲ್ಲಿ ಕಾರ್ತಿಕ ಮಾಸದ ಮೊದಲನೇ ಸೋಮವಾರದ ಪ್ರಯುಕ್ತ ದಿ.ಸಾಕಮ್ಮ ಮಂಚೇಗೌಡರ ಕುಟುಂಬ ವರ್ಗದಿಂದ ಶ್ರೀ ಸಿದ್ಧಿ ವಿನಾಯಕ ದೇವಸ್ಥಾನ, ಶ್ರೀ ರಾಮೇಶ್ವರ ದೇವಸ್ಥಾನ, ಶ್ರೀ ಅಂಕನಾಥೇಶ್ವರ ದೇವಸ್ಥಾನ, ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಶ್ರೀ ಮನೆ ಮಂಚಮ್ಮ ಹಾಗೂ ಶ್ರೀ ಮಾಸ್ತಮ್ಮ ದೇವಸ್ಥಾನ, ಶ್ರೀ ಲಕ್ಷ್ಮಿ ದೇವಿ ದೇವಸ್ಥಾನದ ವಿಗ್ರಹಗಳಿಗೆ ಅಭಿಷೇಕ ಮತ್ತು ವಿಶೇಷ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು.

ನಂತರ ಶ್ರೀ ಆಂಜನೇಯಸ್ವಾಮಿಯ ಉತ್ಸವವನ್ನು ಗ್ರಾಮದ ಎಲ್ಲಾ ಪ್ರಮುಖ ಬೀದಿಗಳಲ್ಲೂ ಮೆರವಣಿಗೆ ಮೂಲಕ ಅದ್ಧೂರಿಯಾಗಿ ನೆರವೇರಿಸಲಾಯಿತು. ಎಲ್ಲಾ ದೇವಾಲಯಗಳಲ್ಲೂ ವಿದ್ಯುತ್ ದೀಪಾಲಂಕಾರದಿಂದ ಅಲಂಕರಿಸಲಾಗಿತ್ತು.

ಮೂರನೇ ಪುಟದಿಂದ

## ನಾನೇ ಸಿಎಂ

ಇಂತಹ ಒಂದು ಸಂದೇಶ ಸಿದ್ದರಾಮಯ್ಯನವರಿಗೆ ರವಾನಿಸಲಾಗಿದೆಯೇ ಎಂಬ ಚರ್ಚೆಗಳು ರಾಜಕೀಯ ವಲಯದಲ್ಲಿ ನಡೆಯುತ್ತಿದೆ. ಮುಂದಿನ ತಿಂಗಳು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿ ಎರಡೂವರೆ ವರ್ಷವನ್ನು ಪೂರ್ಣಗೊಳಿಸುತ್ತಿದ್ದಾರೆ. ಹೀಗಾಗಿ ಎರಡೂವರೆ ವರ್ಷ ಪೂರ್ಣಗೊಂಡ ಬಳಿಕ ಸಿಎಂ ಸ್ಥಾನವನ್ನು ಕಾಂಗ್ರೆಸ್ ಹೈಕಮಾಂಡ್ ಬೇರೆಯವರಿಗೆ ನೀಡುತ್ತಾ ಇಲ್ಲವೇ ಸಿದ್ದರಾಮಯ್ಯರನ್ನು ಪೂರ್ಣಾವಧಿಗೆ ಸಿಎಂ ಆಗಿ ಮುಂದುವರಿಸುತ್ತಾ ಎಂಬುದು ಈಗ ಕುತೂಹಲಕ್ಕೆ ಕಾರಣವಾಗಿದೆ. ಈ ಮಧ್ಯೆ ಖಾಸಗಿ ವಾಹಿನಿಯ ಕಾರ್ಯಕ್ರಮದಲ್ಲಿ ಸೋಮವಾರ ಮಾತಾಡಿದ ಸಿದ್ದರಾಮಯ್ಯ, ಐದು ವರ್ಷ ಇರಿ ಎಂದು ಜನ ಆಶೀರ್ವಾದ ಮಾಡಿದ್ದಾರೆ. ಆದರೆ, ಕಾಂಗ್ರೆಸ್ ಪಕ್ಷದಲ್ಲಿ ಹೈಕಮಾಂಡ್‌ನವರ ತೀರ್ಮಾನ ಅಂತಿಮ ಎಂದಿದ್ದಾರೆ.

ಸಂಪುಟ ಪುನರ್ ರಚನೆ ಮಾಡಿ, ಹೊಸಬರಿಗೆ ಅವಕಾಶ ಕೊಡಿ ಎಂದು ಹೈಕಮಾಂಡ್‌ನವರು 3–4 ತಿಂಗಳ ಹಿಂದೆಯೇ ಹೇಳಿದ್ದಾರೆ. ಆಗ ನಾನು ಸರ್ಕಾರಕ್ಕೆ ಎರಡೂವರೆ ವರ್ಷ ತುಂಬಲಿ ಎಂದು ಹೇಳಿದ್ದೆ. ಈಗ ಹೈಕಮಾಂಡ್‌ನವರು ಒಪ್ಪಿಗೆ ಕೊಟ್ಟರೆ ಸಂಪುಟ ಪುನರ್ ರಚನೆ ಮಾಡುತ್ತೇನೆ ಎಂದರು.

**ಸ್ಪರ್ಧೆ ನಿರ್ಧರಿಸಿಲ್ಲ:** 2028ರ ವಿಧಾನ ಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ಇನ್ನೂ ನಿರ್ಧರಿಸಿಲ್ಲ ಎಂದು ಅವರು ಹೇಳಿದ್ದಾರೆ. ಹಿಂದೆ ನಾನು 2028ರ ಚುನಾವಣೆಯಲ್ಲಿ ಸ್ಪರ್ಧೆ ಮಾಡಲ್ಲ ಎಂದು ಹೇಳಿದ್ದೆ. ಆದರೆ ಈಗ ಸ್ಪರ್ಧೆ ಮಾಡಲೇ ಬೇಕು ಎಂದು ನನ್ನ ಸ್ನೇಹಿತರು, ಬೆಂಬಲಿಗರು ಹೇಳುತ್ತಿದ್ದಾರೆ. ನೀವು ಸ್ಪರ್ಧಿಸಿದರೆ ಪಕ್ಷಕ್ಕೆ ಅನುಕೂಲವಾಗುತ್ತದೆ. ಅಧಿಕಾರಕ್ಕೆ ಬರಲು ಅನುಕೂಲವಾಗುತ್ತದೆ ಎಂದು ಒತ್ತಾಯಿಸುತ್ತಿದ್ದಾರೆ. ಆದರೆ, ನಾನು ಇದರ ಬಗ್ಗೆ ಇನ್ನೂ ಗಂಭೀರವಾಗಿ ಯೋಚಿಸಿಲ್ಲ ಎಂದಿದ್ದಾರೆ.

ಜನಾಶೀರ್ವಾದ ಎಲ್ಲಿಯವರೆಗೆ ಇರುತ್ತೊ ಅಲ್ಲಿವರೆಗೆ ನಾನು ಅಧಿಕಾರದಲ್ಲಿರುತ್ತೇನೆ. ಯಾವುದೇ ದಾಖಲೆಯ (ದೇವರಾಜ ಅರಸು ಅವರ ದಾಖಲೆ) ಮೇಲೆ ನಂಬಿಕೆ ಇಲ್ಲ. ಜನರ ಕಷ್ಟಗಳು, ಕಾರ್ಪಣ್ಯಗಳಿಗೆ ನೆರವಾಗುವುದು ಮುಖ್ಯ ಎಂದು ಹೇಳಿದ್ದಾರೆ.

2023 ರಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ದಿನದಿಂದಲೇ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೇ ಪವರ್ ಶೇರಿಂಗ್ ಆಗಿದ್ದು, ಎರಡೂವರೆ ವರ್ಷದ ಬಳಿಕ ಡಿಕೆಶಿಗೆ ಸಿದ್ದರಾಮಯ್ಯ ಸಿಎಂ ಸ್ಥಾನವನ್ನು ಬಿಟ್ಟುಕೊಡಲಿದ್ದಾರೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿತ್ತು. ಆದರೆ ಅದನ್ನು ಸಿದ್ದರಾಮಯ್ಯ ಮತ್ತವರ ಬೆಂಬಲಿಗರು ನಿರಾಕರಿಸುತ್ತಲೇ ಇದ್ದರು. ಮತ್ತೊಂದೆಡೆ ಸರ್ಕಾರ ಎರಡು ವರ್ಷ ಪೂರೈಸುತ್ತಿ ದ್ದಂತೆಯೇ ಡಿಕೆಶಿ ಮುಖ್ಯಮಂತ್ರಿಯಾಗುತ್ತಾರೆ ಎಂದು ಅವರ ಬೆಂಬಲಿಗರು ಹೇಳುತ್ತಲೇ ಬಂದಿದ್ದಾರೆ. ಐದು ವರ್ಷ ನಾನೇ ಸಿಎಂ ಎಂದು ಈವರೆಗೂ ಹೇಳುತ್ತಿದ್ದ ಸಿದ್ರಾಮಯ್ಯ ಅವರ ಇಂದಿನ ಹೇಳಿಕೆ ಪವರ್ ಶೇರಿಂಗ್ ಒಪ್ಪಂದ ವಿಚಾರಕ್ಕೆ ಮತ್ತಷ್ಟು ಪುಷ್ಠಿ ನೀಡುವಂತಿದೆ.

## ರಾಜಣ್ಣ 'ನವೆಂಬರ್ ಕ್ರಾಂತಿ' ಭವಿಷ್ಯ

ಅರ್ಥೈಸುವ ಅಗತ್ಯವಿಲ್ಲ, ಅವರ ಹೇಳಿಕೆಯಲ್ಲಿ ಸಿಎಲ್‌ಪಿ ನಾಯಕತ್ವ ಕುರಿತು ಪ್ರಸ್ತಾಪಿಸಿಲ್ಲ ಎಂದರು.

**ವರಿಷ್ಠರ ತೀರ್ಮಾನ:** ಇದರ ನಡುವೆ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಂಪುಟ ಪುನರ್ ರಚನೆ ವರಿಷ್ಠರ ತೀರ್ಮಾನ, ಅಲ್ಲಿಂದ ಇದುವರೆಗೆ ಯಾವುದೇ ಮಾಹಿತಿ ಬಂದಿಲ್ಲ, ಸೂಚನೆ ಬಂದರೆ ಪ್ರತಿಕ್ರಿಯಿಸಬಹುದು ಎಂದರು. ದಲಿತ ನಾಯಕರೊಬ್ಬರು ಮುಖ್ಯಮಂತ್ರಿ ಆದರೆ ನಮ್ಮ ಸಮಾಜಕ್ಕೆ ದೊರೆಯುವ ದೊಡ್ಡ ಗೌರವ, ಆದರೆ, ಸದ್ಯಕ್ಕೆ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. ಮುಂದೆ ಅಂತಹ ಅವಕಾಶ ಬಂದಾಗ ನಮ್ಮವರೊಬ್ಬರು ರಾಜ್ಯದ ನಾಯಕತ್ವ ವಹಿಸಿಕೊಳ್ಳಲಿ.

**ಮುನಿಯಪ್ಪ ಸಿಎಂ ಆದರೂ ಸಂತೋಷ:** ಏಳು ಬಾರಿ ಸಂಸದರಾಗಿ, ಕೇಂದ್ರದಲ್ಲಿ ಸಚಿವರಾಗಿ ಕಾರ್ಯನಿರ್ವಹಿಸಿ ಇದೀಗ ನಮ್ಮ ಸಹೋದ್ಯೋಗಿ ಆಗಿರುವ ಕೆ.ಎಚ್. ಮುನಿಯಪ್ಪ ಮುಖ್ಯಮಂತ್ರಿ ಆದರೆ ಸಂತೋಷ. ಅಂತೂ ನಮ್ಮವರಿಗೆ ಅವಕಾಶ ದೊರೆಯಿತು ಎಂದು ನಿಟ್ಟುಸಿರು ಬಿಡಬಹುದು. ರಾಜಕೀಯದಲ್ಲಿ ಯಾರೂ ಸನ್ಯಾಸಿಗಳಲ್ಲ. ನನ್ನನ್ನೂ ಸೇರಿದಂತೆ ಹಲವರಿಗೆ ಮುಖ್ಯಮಂತ್ರಿ ಆಗಬೇಕೆಂಬ ಕನಸಿದೆ. ಅದಕ್ಕೆಲ್ಲಾ ಕಾಲ ಕೂಡಿ ಬರಬೇಕು ಎಂದರು.

**ವರಿಷ್ಠರಿಂದ ಗೊಂದಲ ನಿವಾರಣೆ:** ಕೃಷಿ ಸಚಿವ ಚಲುವರಾಯಸ್ವಾಮಿ ಪ್ರತಿಕ್ರಿಯಿಸಿ, ನಮ್ಮಲ್ಲಿ ಯಾವುದೇ ಗೊಂದಲ ಇದ್ದರೂ ಪಕ್ಷದ ವರಿಷ್ಠರು ಬಗೆಹರಿಸುತ್ತಾರೆ, ಅವರ ನಿರ್ಧಾರವೇ ಅಂತಿಮ. ಪಕ್ಷದ ಚೌಕಟ್ಟಿನಲ್ಲಿ ಮುಖ್ಯಮಂತ್ರಿ ಸೇರಿದಂತೆ ನಾವೆಲ್ಲರೂ ಕೆಲಸ ಮಾಡುತ್ತಿದ್ದೇವೆ, ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರು ಅನ್ಯೋನ್ಯವಾಗಿರುವುದಕ್ಕೆ ನಮ್ಮ ದೆಹಲಿ ನಾಯಕತ್ವವೇ ಕಾರಣ. ಪಕ್ಷ ಮತ್ತು ಸರ್ಕಾರದಲ್ಲಿ ಎಂತಹದ್ದೇ ಗೊಂದಲಗಳಿದ್ದರೂ ಅದನ್ನು ಬಗೆಹರಿಸುವ ಶಕ್ತಿ ದೆಹಲಿ ನಾಯಕರಿಗಿದೆ, ನಮ್ಮ ನಡುವೆ ಗೊಂದಲ ಸೃಷ್ಟಿಸಲು ಸಾಧ್ಯವಿಲ್ಲ ಎಂದಿದ್ದಾರೆ.

## ಸಂಘರ್ಷ ನಿರ್ವಹಣಾ ಕಾರ್ಯಪಡೆ ರಚನೆ

ಹೊಲ–ಗದ್ದೆಗಳಲ್ಲಿ ಕಾಣಿಸಿಕೊಂಡಾಗ ತತ್ ಕ್ಷಣವೇ ಜನರಿಗೆ ವಾಟ್ಸ್ ಅಪ್ ಸಂದೇಶಗಳ ಮೂಲಕ ಮಾಹಿತಿ ನೀಡಲು ಸಮಗ್ರ ಕಮಾಂಡ್ ಸೆಂಟರ್ ಸ್ಥಾಪಿಸಲು ಈಗಾಗಲೇ ಸೂಚನೆ ನೀಡಲಾಗಿದ್ದು, ತುರ್ತು ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಅರಣ್ಯ ಪ್ರದೇಶದಲ್ಲಿ ವನ್ಯಜೀವಿಗಳಿಂದ ಜನರಿಗಾಗಲೀ, ಜನರಿಂದ ವನ್ಯಜೀವಿಗಳಿಗಾಗಲೀ ತೊಂದರೆ ಆಗದಂತೆ, ಅತ್ತ ಬೆಳೆ ಹಾನಿ ಆಗದಂತೆ ನಿಗಾ ಇಡಲು ಗಸ್ತು ಹೆಚ್ಚಳದ ಅಗತ್ಯವಿದೆ. ಆದರೆ, ಇದಕ್ಕೆ ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆ ಇದ್ದು, ಹುದ್ದೆಗಳ ಭರ್ತಿಗೆ ಕ್ರಮ ವಹಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

**ಐದು ದಿನದಲ್ಲಿ ಉಪಾಯ ತಿಳಿಸಿ:** ಅಗತ್ಯ ಇರುವ ಮುಂಚೂಣಿ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಬೇಕು. ಆನೆ, ಹುಲಿಗಳು ಸೇರಿದಂತೆ ವನ್ಯಜೀವಿ ಕಾಡಿನಿಂದ ಹೊರಗೆ ಹೋಗದಂತೆ ನಿಯಂತ್ರಿಸಲು ಏನೆಲ್ಲಾ ಕ್ರಮ ಕೈಗೊಳ್ಳಬಹುದು ಎಂಬ ಬಗ್ಗೆ 5 ದಿನಗಳ ಒಳಗಾಗಿ ವರದಿ ಸಲ್ಲಿಸಿ ಎಂದೂ ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಸೂಚನೆ ನೀಡಿದರು. ಅಗತ್ಯ ಇರುವ ಕಡೆಯಲ್ಲಿ ಟೆಂಟಕಲ್ ಫೆನ್ಸಿಂಗ್, ಸೌರ ತಂತಿ ಬೇಲಿ, ಆನೆ ಕಂದಕ ಅಳವಡಿಸಲು ಹಾಗೂ ರೈಲ್ವೆ ಬ್ಯಾರಿಕೇಡ್‌ಗೆ ಚೈನ್ ಲಿಂಕ್ ಬೇಲಿ ಹಾಕಲು ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು.

ಸಭೆಯಲ್ಲಿ ಶಾಸಕರುಗಳಾದ ಅನಿಲ್ ಚಿಕ್ಕಮಾದು, ಗಣೇಶ್ ಪ್ರಸಾದ್, ಮುಖ್ಯ ವನ್ಯಜೀವಿ ಪರಿಪಾಲಕ ಪಿ.ಸಿ. ರೇ, ಪ್ರಧಾನ ಕಾರ್ಯದರ್ಶಿ ಮನೋಜ್ ಕುಮಾರ್, ಎಪಿಸಿಸಿಎಫ್ ಮನೋಜ್ ರಾಜನ್, ಚಾಮರಾಜನಗರದ ಜಿಲ್ಲಾಧಿಕಾರಿ ಶಿಲ್ಪಾನಾಗ್ ಮತ್ತು ಪೊಲೀಸ್ ವರಿಷ್ಠಾಧಿಕಾರಿ ಕವಿತಾ, ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್ ಮತ್ತಿತರರು ಪಾಲ್ಗೊಂಡಿದ್ದರು.

ಇದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾವು ಮೈಸೂರಿನಿಂದ ಬಂಡೀಪುರಕ್ಕೆ ಬರುವ ಮಾರ್ಗದಲ್ಲಿ ನಾಲ್ಕೈದು ರೈತ ಸಂಘಟನೆಯ ಪ್ರತಿನಿಧಿಗಳು ತಮ್ಮನ್ನು ಭೇಟಿ ಮಾಡಿ ಕಾಡಿನಲ್ಲಿ ಸಫಾರಿ ನಡೆಸುವುದರಿಂದ ವನ್ಯಜೀವಿಗಳು ಹೊರ ಬರುತ್ತಿವೆ. ಹೀಗಾಗಿ ಸಫಾರಿ ನಿಲ್ಲಿಸಬೇಕು ಎಂದು ಒತ್ತಾಯಿಸಿದ್ದಾರೆ. ಈ ಬಗ್ಗೆ ಅಧಿಕಾರಿಗಳ ಸಭೆ ಕರೆದು ಸಮಾಲೋಚಿಸಲಾಗುವುದು ಎಂದರು.

**ರೈತರಿಗೆ ನೆರವಾಗಲು ಸೂಚನೆ:** ರೈತರು ತಮ್ಮ ಜಮೀನಿನಲ್ಲಿ ಬೆಳೆದ ತೇಗ, ಶ್ರೀಗಂಧ ಇತ್ಯಾದಿ ವೃಕ್ಷಗಳನ್ನು ಕಡಿಯಲು ಮತ್ತು ಸಾಗಾಟಕ್ಕೆ ಅನುಮತಿ ನೀಡುವಲ್ಲಿ ವಿಳಂಬ ಆಗುತ್ತಿರುವ ಬಗ್ಗೆ ರೈತ ಸಂಘಟನೆಗಳು ದೂರು ನೀಡಿದ್ದು, ತ್ವರಿತವಾಗಿ ರೈತರ ಸಮಸ್ಯೆಗೆ ಸ್ಪಂದಿಸುವಂತೆ ಸೂಚಿಸಿದರು.

ಕಾಳಿಂಗ ಸರ್ಪಗಳ ಸಂಶೋಧನೆ ಹೆಸರಲ್ಲಿ ಶೋಷಣೆ ನಡೆಯುತ್ತಿರುವ ಬಗ್ಗೆ ತನಿಖೆಗೆ ಆದೇಶಿಸಿ 50 ದಿನ ಕಳೆದರೂ ಇನ್ನೂ ಕ್ರಮ ಕೈಗೊಳ್ಳದ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ವರದಿ ಪಿಸಿಸಿಎಫ್‌ಗೆ ಸಲ್ಲಿಕೆಯಾಗಿದೆ. ಅದನ್ನು ಪರಾಮರ್ಶಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

## ಮೈಸೂರಿಂದ ಮುಂಬೈ, ಗೋವಾ, ತಿರುಪತಿಗೆ ವಿಮಾನ

ಬಂದಿದ್ದು, ಅತೀ ಶೀಘ್ರ ವಿಮಾನ ಹಾರಾಟ ಆರಂಭವಾಗಲಿದೆ ಎಂದು ತಿಳಿಸಿದರು. ಎರಡನೇ ಹಂತದಲ್ಲಿ ತಿರುಪತಿ ಮತ್ತು ಗೋವಾ ಪ್ರವಾಸಿ ತಾಣಗಳಿಗೆ ವಿಮಾನ ಸಂಪರ್ಕ ಕಲ್ಪಿಸುವ ಬಗ್ಗೆ ಪ್ರಕ್ರಿಯೆ ನಡೆದಿದ್ದು, ಅವರಿಗೆ ಬೇಕಾದ ಸೌಲಭ್ಯಗಳನ್ನು ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಕಲ್ಪಿಸಲು ಈಗಾಗಲೇ ನಿಲ್ದಾಣದ ಅಧಿಕಾರಿಗಳೊಂದಿಗೆ ಚರ್ಚಿಸಿದ್ದೇನೆ. ಕೈಗಾರಿಕೋದ್ಯಮಿಗಳು, ವರ್ತಕರು ಮತ್ತು ಪ್ರವಾಸಿಗರಿಗೆ ಇದರಿಂದ ಅನುಕೂಲವಾಗಲಿದೆ ಎಂದರು.

ಮೈಸೂರಿನ ಹೆಬ್ಬಾಳು, ಮೇಟಗಳ್ಳಿ, ಹೂಟಗಳ್ಳಿ, ಕೂರ್ಗಳ್ಳಿ, ನಂಜನಗೂಡಿನ ತಾಂಡವಪುರ, ತಾಂಡ್ಯ, ಕೋಚನಹಳ್ಳಿ ಸೇರಿದಂತೆ ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ ಏಷ್ಯನ್ ಪೇಂಟ್ಸ್‌ನಂತಹ ಹಲವು ಬೃಹತ್ ಉದ್ಯಮಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಹಾಗೂ ಐಟಿ–ಬಿಟಿ ಕಂಪನಿಗಳು ತಲೆ ಎತ್ತಿರುವುದರಿಂದ ಮೈಸೂರಿಗೆ ಇನ್ನಷ್ಟು ವಿಮಾನಗಳ ಹಾರಾಟ ಅವಶ್ಯಕತೆಯಿದೆ ಎಂದು ಯದುವೀರ್ ತಿಳಿಸಿದರು.

**ದೀರ್ಘಾವಧಿ ಯೋಜನೆ:** ಕೇವಲ ಒಂದೆರಡು ವಿಮಾನಗಳು ಹಾರಾಟ ಮಾಡಿದರೆ ಸಾಲದು. ಮುಂಬೈ, ಗೋವಾ ಮತ್ತು ತಿರುಪತಿಯಂತಹ ಪ್ರವಾಸಿ ತಾಣ ಮತ್ತು ಯಾತ್ರಾ ಸ್ಥಳಗಳಿಗೆ ವಾರಾಂತ್ಯಗಳಲ್ಲಿ ತೆರಳಲು ಹೆಚ್ಚು ಮಂದಿ ಇಚ್ಛೆಪಡುವುದರಿಂದ ಅವರಿಗೆ ವಿಮಾನ ವ್ಯವಸ್ಥೆ ಮಾಡುವ ಅಗತ್ಯವಿದೆ. ಅಲ್ಲದೇ ಮೈಸೂರು–ತಿರುಪತಿ ಸೇವೆಗೆ ಭಕ್ತರಿಂದ ಬಾರೀ ಬೇಡಿಕೆ ಇರುವ ಕಾರಣ ಅವರು ಬಸ್ ಅಥವಾ ರೈಲು ಮಾರ್ಗವನ್ನು ಅವಲಂಬಿಸಬೇಕಾಗಿದೆ. ಅದರಿಂದ ಹೆಚ್ಚು ಸಮಯದ ಬೇಕಾಗುವ ಕಾರಣ ಭಕ್ತರು ವಿಮಾನ ಪ್ರಯಾಣ ಇಷ್ಟಪಡುತ್ತಾರೆ ಎಂದೂ ಹೇಳಿದರು.

ಈ ಹಿಂದೆ ಮೈಸೂರಿನಿಂದ ಬೆಂಗಳೂರು, ಹೈದರಾಬಾದ್, ಚೆನ್ನೈ, ಕೊಚ್ಚಿ ಹಾಗೂ ಗೋವಾ ನಗರಗಳಿಗೆ ವಿಮಾನ ಹಾರಾಟವಿತ್ತು. ಆದರೆ ಕೆಲ ಕಾರಣಗಳಿಂದಾಗಿ ಬೆಂಗಳೂರು, ಗೋವಾ, ಕೊಚ್ಚಿ ನಗರಗಳ ನಡುವಿನ ವಿಮಾನ ಹಾರಾಟ ಸಂಪರ್ಕ ಕಡಿತಗೊಂಡಿತು. ಪ್ರಸ್ತುತ ಕೇವಲ ಹೈದರಾಬಾದ್ ಮತ್ತು ಚೆನ್ನೈ ನಗರಗಳಿಗೆ ಮಾತ್ರ ಈ ಸೇವೆ ಲಭ್ಯವಿದ್ದು ಹೈದರಾಬಾದ್ ವಿಮಾನವು ಮಧ್ಯಾಹ್ನ 12.30 ಕ್ಕೆ ಮೈಸೂರಿಗೆ ಆಗಮಿಸಿ 1.15ಕ್ಕೆ ಹೊರಡುತ್ತಿದೆ. ಚೆನ್ನೈ ವಿಮಾನವು ಸಂಜೆ 6.30 ಕ್ಕೆ ಮೈಸೂರಿಗೆ ಆಗಮಿಸಿ 7.40ಕ್ಕೆ ಹಿಂತಿರುಗುತ್ತಿದೆ.

ಮೈಸೂರು, ಕಲಬುರಗಿ, ಹುಬ್ಬಳ್ಳಿ ಮತ್ತು ಬೆಳಗಾವಿ ವಿಮಾನ ನಿಲ್ದಾಣಗಳಿಂದ ಒಟ್ಟು ವಿಮಾನಗಳ ಚಾಲನೆ ಶೇಕಡಾ 60 ರಷ್ಟು ಕುಸಿದಿದೆ. 2021–22 ರಲ್ಲಿ 13,180 ರಿಂದ 2024 –25 ರಲ್ಲಿ ಕೇವಲ 5,372 ಕ್ಕೆ ಇಳಿಕೆಯಾಗಿದೆ. ಇದೇ ಅವಧಿಯಲ್ಲಿ ಪ್ರಯಾಣಿಕರ ದಟ್ಟಣೆಯೂ 4,89,040 ರಿಂದ 3.34,213 ಕ್ಕೆ ಇಳಿದಿದ್ದು, ಉಡಾನ್ ಯೋಜನೆಯ ಅಂತ್ಯವು ಕುಸಿತಕ್ಕೆ ಪ್ರಮುಖ ಕಾರಣವೆಂದು ಉಲ್ಲೇಖಿಸಲಾಗಿದೆ.

## ಹೇಗೆ ಹೇಳುತ್ತಾರೋ ಹಾಗೆ ನಡೆಯುತ್ತೇವೆ

ಸೂಚಿಸಲು ಅವರ ಮನೆಗೆ ಭೇಟಿ ನೀಡಿದ್ದೆ. ನಾನು ತಿಹಾರ್ ಜೈಲಿನಲ್ಲಿದ್ದಾಗ ಅವರು ಸೋನಿಯಗಾಂಧಿ ಅವರ ಜೊತೆ ಬಂದು ನನ್ನನ್ನು ಭೇಟಿ ಮಾಡಿದ್ದರು. ನನಗೂ ಅವರಿಗೂ ಬಹಳ ಆತ್ಮೀಯತೆ. ನಮ್ಮ ಪಕ್ಷದ ನಾಯಕರು ಅವರು. ಎಸ್.ಎಂ.ಕೃಷ್ಣ ಅವರು ಅಧಿಕಾರದಲ್ಲಿದ್ದಾಗ ನಮಗೆ ಪ್ರಧಾನ ಕಾರ್ಯದರ್ಶಿಯಾಗಿದ್ದರು. ನನ್ನನ್ನು ತಮ್ಮನಂತೆ ಕಂಡಿದ್ದರು, ನನ್ನ ಕೆಲಸಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಹಾಗಾಗಿ ನಾನು ಅವರ ಮನೆಗೆ ಭೇಟಿ ನೀಡಿದ್ದೆ ಎಂದು ತಿಳಿಸಿದರು.

ನೀವು ಹೈಕಮಾಂಡ್ ಭೇಟಿಗೆ ದಿಲ್ಲಿಗೆ ಹೋಗಿದ್ದಿರಿ ಎಂದು ಚರ್ಚೆಯಾಗುತ್ತಿದೆಯಲ್ಲ ಎಂದು ಕೇಳಿದಾಗ, ನಾನು ದಿಲ್ಲಿಗೆ ಹೋಗಿದ್ದ ವಿಷಯ, ಕೆಲಸದ ಬಗ್ಗೆ ಮಾತ್ರ ಹೇಳಬಲ್ಲೆ. ಹೈಕಮಾಂಡ್ ಭೇಟಿ ಬಗ್ಗೆ ನೀವು ಮಾಧ್ಯಮದವರು, ಸಾರ್ವಜನಿಕರು, ಇನ್ನೂ ಬೇರೆಯವರು ಏನು ಬೇಕಾದರೂ ಚರ್ಚೆ ಮಾಡಿಕೊಳ್ಳಿ. ಯಾರು ಬೇಕಾದರೂ ಮಾತಾಡಿಕೊಳ್ಳಲಿ. ನನಗದು ಸಂಬಂಧ ಪಡದ ವಿಷಯ ಎಂದರು.

## ಕಾಂಗ್ರೆಸ್ ಅವಕಾಶ ನೀಡಲ್ಲ

ಉಪಮುಖ್ಯಮಂತ್ರಿ ಮತ್ತು ಪಕ್ಷದ ಹೈಕಮಾಂಡ್ ಮಟ್ಟದಲ್ಲಿ ನಿರ್ಧರಿಸಲಾಗುತ್ತದೆ. ಆದ್ದರಿಂದ ನಾನು ಅದರ ಬಗ್ಗೆ ಏನನ್ನೂ ಹೇಳಲಾರೆ ಎಂದರು.

ನವೆಂಬರ್ ಕ್ರಾಂತಿಯ ಬಗ್ಗೆಯೂ ನನಗೆ ಗೊತ್ತಿಲ್ಲ. ಪಕ್ಷವಿದೆ ಮತ್ತು ಹೈಕಮಾಂಡ್ ಇದೆ. ಅವರು ಯಾವುದೇ ಕ್ರಾಂತಿಗೆ ಏಕೆ ಅವಕಾಶ ನೀಡುತ್ತಾರೆ, ಅವರು ಅದಕ್ಕೆ ಅನುಮತಿಸುವುದಿಲ್ಲ ಎಂದು ಹೇಳಿದರು. ಮಹಾರಾಷ್ಟ್ರ ಮಾದರಿಯಲ್ಲಿ ರಾಜಕೀಯ ಬೆಳವಣಿಗೆಗಳು ನಡೆಯಲಿದೆ ಎಂದು ವಿಪಕ್ಷಗಳು ಭವಿಷ್ಯ ನುಡಿದಿವೆ. ಕರ್ನಾಟಕದಲ್ಲಿ ಏಕನಾಥ ಶಿಂಧೆ ಹಾಗೂ ಅಜಿತ್ ಪವಾರ್ ರೀತಿಯಲ್ಲಿ ನಾಯಕತ್ವ ಹುಟ್ಟಿಕೊಳ್ಳುತ್ತದೆಯೇ ಎಂದು ಕೇಳಿದಾಗ, ಅಂತಹ ಪ್ರಯತ್ನ ಅಸಾಧ್ಯ ಎಂದರು.

ಇದೇ ವೇಳೆ ಸಿಎಂ ಸಿದ್ದರಾಮಯ್ಯ ಅವರ ಪುತ್ರ ಡಾ.ಯತೀಂದ್ರ ಅವರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಜಾರಕಿಹೊಳಿ, ಪಕ್ಷ ಮತ್ತು ಸರ್ಕಾರದಿಂದ ಪ್ರತ್ಯೇಕವಾದ ಅಹಿಂದ ಚಳುವಳಿಯನ್ನು (ಸಿದ್ದರಾಮಯ್ಯ ನಂತರ) ಮುನ್ನಡೆಸುವ ಬಗ್ಗೆ ಮಾತನಾಡಿದ್ದಾರೆ. ಇದಕ್ಕೂ ಮುಖ್ಯಮಂತ್ರಿ ಬದಲಾವಣೆಗೂ ಯಾವುದೇ ಸಂಬಂಧವಿಲ್ಲ. ನಾನು ಸಿಎಂ ಹುದ್ದೆ ಅಥವಾ ಪಕ್ಷದ ಅಧ್ಯಕ್ಷ ಹುದ್ದೆಯನ್ನು ಕೇಳಿಲ್ಲ ಮತ್ತು ಅವರು (ಯತೀಂದ್ರ) ಕೂಡ ಸಿಎಂ ಅಥವಾ ಪಕ್ಷದ ಅಧ್ಯಕ್ಷ ಹುದ್ದೆಯ ಬಗ್ಗೆ ಮಾತನಾಡಲಿಲ್ಲ ಎಂದು ಹೇಳಿದರು.

ದಲಿತ ಮುಖ್ಯಮಂತ್ರಿ ಬೇಡಿಕೆಯ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಜಾರಕಿಹೊಳಿ, ದಲಿತರಿಗೆ ಅವಕಾಶ ನೀಡಿದರೆ ಒಳ್ಳೆಯದು ಎಂದು ನಾನು ಸೇರಿದಂತೆ ಹಲವರು ಹೇಳಿದ್ದೇವೆ. ಪಕ್ಷವು ಅಂತಿಮವಾಗಿ ಯಾರು ಮತ್ತು ಯಾವ ಸಮುದಾಯದಿಂದ ಮುಖ್ಯಮಂತ್ರಿಯಾಗುತ್ತಾರೆ ಎಂಬುದನ್ನು ನಿರ್ಧರಿಸುತ್ತದೆ ಎಂದರು.

ಕಾಂಗ್ರೆಸ್ ಪಕ್ಷದಲ್ಲಿ ದಲಿತರೊಬ್ಬರು ಮುಖ್ಯಮಂತ್ರಿಯಾಗುವ ಸಾಧ್ಯತೆ ಇದೆಯೇ ಎಂದು ಕೇಳಿದಾಗ, ಮುಂದಿನ ದಿನಗಳಲ್ಲಿ ಅದು ಸಾಧ್ಯವಾಗಬಹುದು. ನಾವು ಕಾಯಬೇಕಾಗುತ್ತದೆ. ತಕ್ಷಣ ಅಂತಹ ಸಂದರ್ಭ ಇಲ್ಲ. ನಾವು ಅವಕಾಶವನ್ನು ಸೃಷ್ಟಿಸಬೇಕಾಗುತ್ತದೆ ಎಂದು ಉತ್ತರಿಸಿದರು.

## ವಿಶೇಷ ಸಮಗ್ರ ಪರಿಷ್ಕರಣೆ

ಖಚಿತಪಡಿಸುತ್ತದೆ ಎಂದು ಸ್ಪಷ್ಟಪಡಿಸಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಲಿರುವ ಕೇರಳದಲ್ಲಿ ಎಸ್‌ಐಆರ್ ಪ್ರಕ್ರಿಯೆ ಮುಂದೂಡಬೇಕೆಂಬ ಮನವಿ ಸಂಬಂಧ ಪ್ರತಿಕ್ರಿಯಿಸಿ, ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಇದುವರೆಗೆ ಯಾವುದೇ ಅಧಿಸೂಚನೆ ಹೊರಡಿಸದಿರುವ ಕಾರಣದಿಂದ ಕೇರಳದಲ್ಲೂ ಎರಡನೇ ಹಂತದಲ್ಲಿ ಎಸ್‌ಐಆರ್ ನಡೆಸಲು ಆಯೋಗ ಮುಂದಾಗಿದೆ ಎಂದರು.

**ಬಂಗಾಳದಲ್ಲೂ ಅಡ್ಡಿ ಎದುರಾಗದು:** ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ನಡೆದರೆ ಅಲ್ಲಿ ರಕ್ತಪಾತ ಆಗಲಿದೆ ಎಂದು ವರದಿಯಾಗಿರುವ ಬಗ್ಗೆ ಪ್ರತಿಕ್ರಿಯಿಸಿದ ಜ್ಞಾನೇಶ್ ಕುಮಾರ್, ಚುನಾವಣಾ ಆಯೋಗ ತನ್ನ ಕರ್ತವ್ಯ ನಿರ್ವಹಿಸುತ್ತಿದೆ ಮತ್ತು ರಾಜ್ಯ ಸರ್ಕಾರಗಳು ಸಾಂವಿಧಾನಿಕವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಬದ್ಧವಾಗಿವೆ. ಎಲ್ಲಾ ಸಾಂವಿಧಾನಿಕ ಸಂಸ್ಥೆಗಳು ಸಂವಿಧಾನದಲ್ಲಿ ತಿಳಿಸಿರುವಂತೆ ತಮ್ಮ ಜವಾಬ್ದಾರಿ ನಿರ್ವಹಿಸುತ್ತವೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ ಮತದಾರರ ಪಟ್ಟಿ ಸಿದ್ಧಪಡಿಸಲು ಮತ್ತು ಚುನಾವಣೆ ನಡೆಸಲು ಅಗತ್ಯವಿರುವ ಸಿಬ್ಬಂದಿ ಒದಗಿಸಲು ರಾಜ್ಯಗಳು ಬದ್ಧವಾಗಿವೆ ಎಂದಿದ್ದಾರೆ

### ಬಿಹಾರದಲ್ಲಿ ಪ್ರಕ್ರಿಯೆ ಪೂರ್ಣ

ಬಿಹಾರದಲ್ಲಿ ಸೆ.30ರಂದು ಪ್ರಕಟಿಸಿದ ಅಂತಿಮ ಪಟ್ಟಿಯಲ್ಲಿ 7.42 ಕೋಟಿ ಮತದಾರರ ಹೆಸರುಗಳು ಇದ್ದವು. ವಿಶೇಷ ಪರಿಷ್ಕರಣೆ ಬಳಿಕ 3.66 ಲಕ್ಷ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಹೀಗೆ ಕೈಬಿಡಲಾದ ಮತದಾರರಿಗೆ ಚುನಾವಣಾ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಲು ನೆರವಾಗುವಂತೆ ಬಿಹಾರ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಸುಪ್ರೀಂಕೋರ್ಟ್ ಸೂಚಿಸಿದೆ. ಇದುವರೆಗೂ ಯಾವುದೇ ಮೇಲ್ಮನವಿ ಸಲ್ಲಿಕೆಯಾಗಿಲ್ಲ ಎಂದು ಚುನಾವಣಾ ಆಯೋಗ ಹೇಳುತ್ತಿದೆ. ಬಿಹಾರದಲ್ಲಿ ವಿಧಾನಸಭಾ ಚುನಾವಣೆ ಘೋಷಣೆಯಾಗಿದ್ದು ನ.6 ಹಾಗೂ 11ರಂದು ಮತದಾನ ನಡೆದು, ನ.14 ರಂದು ಮತ ಎಣಿಕೆ ನಡೆಯಲಿದೆ.

## ಇಂದು ಗಿಡಗಳ ವಿತರಣೆ, ಜಾಗೃತಿ ಕಾರ್ಯಕ್ರಮ

**ಮೈಸೂರು:** ಅಪೂರ್ವ ಸ್ನೇಹ ಬಳಗದಿಂದ ರಾಷ್ಟ್ರೀಯ ಆಯುರ್ವೇದ ದಿನ ಅಂಗವಾಗಿ ವಿವಿಧ ಜಾತಿಯ ಆಯುರ್ವೇದ ಗಿಡಗಳ ವಿತರಣೆ ಹಾಗೂ ಜಾಗೃತಿ ಕಾರ್ಯಕ್ರಮವನ್ನು ಚಾಮುಂಡಿಪುರಂನಲ್ಲಿರುವ ಅಪೂರ್ವ ಹೋಟೆಲ್ ಮುಂಭಾಗ ಅ.28ರಂದು ಬೆಳಗ್ಗೆ 8.30ಕ್ಕೆ ಆಯೋಜಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್.ಶ್ರೀವತ್ಸ, ವೈದ್ಯ ಡಾ.ಚಂದ್ರಶೇಖರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಮಾಜಿ ಮೇಯರ್ ಸಂದೇಶಸ್ವಾಮಿ ಇತರರು ಭಾಗವಹಿಸಲಿದ್ದಾರೆ.

# ಮೈಸೂರಲ್ಲಿ ನೋ ಪಾರ್ಕಿಂಗ್ ಜಾಗದಲ್ಲಿ ನಿಲ್ಲುವ ವಾಹನಗಳಿಗೆ ವ್ಹೀಲ್‌ಲಾಕ್

## ಸಂಚಾರಿ ಪೊಲೀಸರ ಮತ್ತೊಂದು ಸುತ್ತಿನ ವಿಶೇಷ ಕಾರ್ಯಾಚರಣೆ



ಮೈಸೂರು ಮಿತ್ರ ವರದಿ ಫಲಶ್ರುತಿ


ಮೈಸೂರಿನ ಸಯ್ಯಾಜಿರಾವ್ ರಸ್ತೆಯ ನೋ ಪಾರ್ಕಿಂಗ್‌ನಲ್ಲಿ ಕಾರುಗಳ ಅಡ್ಡಾದಿಡ್ಡಿ ನಿಲುಗಡೆ

ಮಾರುಕಟ್ಟೆಗೆ ಹೋಗಿ ವಾಪಸ್ ಬರುವ ತನಕ ನಿಲ್ಲುವ ಕಾರುಗಳು

ಟೌನ್ ಹಾಲ್‌ನ ಮಲ್ಟಿ ಲೆವೆಲ್ ಪಾರ್ಕಿಂಗ್ ಸ್ಲಾಟ್ ನಿರುಪಯುಕ್ತ

ಮೈಸೂರಿನ ಸಯ್ಯಾಜಿರಾವ್ ರಸ್ತೆಯ ದೇವರಾಜ ಮಾರುಕಟ್ಟೆ ಮುಂಭಾಗದ ನೋ ಪಾರ್ಕಿಂಗ್‌ನಲ್ಲಿ ನಿಲ್ಲಿಸಿದ್ದ ವಾಹನಗಳಿಗೆ ವ್ಹೀಲ್ ಲಾಕ್ ಮಾಡಿದ ಸಂಚಾರಿ ಪೊಲೀಸರು.

ಮೈಸೂರು, ಅ.27 (ಆರ್‌ಕೆ, ಬಿಎಲ್‌ಯು)– ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯ ದೇವರಾಜ ಮಾರುಕಟ್ಟೆ ಮುಂಭಾಗದ ನೋ ಪಾರ್ಕಿಂಗ್ ಸ್ಥಳದಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲಿಸುವ ಕಾರ್‌ಗಳಿಗೆ ಇಂದು ಸಂಚಾರಿ ಪೊಲೀಸರು ವ್ಹೀಲ್ ಲಾಕ್ ಹಾಕಿದರು. ಸಂಚಾರ ನಿಯಮ ಪಾಲಿಸದವರಿಗೆ ಬಿಸಿ ಮುಟ್ಟಿಸಲು ಅಭಿಯಾನ ಆರಂಭಿಸಿದ್ದಾರೆ.

'ಮೈಸೂರು ಮಿತ್ರ'ನ ಸೋಮವಾರ ಸಂಚಿಕೆಯಲ್ಲಿ ಮೈಸೂರಿನ ಸಯ್ಯಾಜಿ ರಾವ್ ರಸ್ತೆಯ ನೋ ಪಾರ್ಕಿಂಗ್‌ನಲ್ಲಿ ಕಾರುಗಳ ಅಡ್ಡಾದಿಡ್ಡಿ ನಿಲುಗಡೆ ಬಗ್ಗೆ ವರದಿ ಪ್ರಕಟವಾಗಿತ್ತು.

ನ್ಯೂ ಸಯ್ಯಾಜಿರಾವ್ ರಸ್ತೆಯ ದೇವರಾಜ ಮಾರುಕಟ್ಟೆ ಮುಂಭಾಗದ ನೋ ಪಾರ್ಕಿಂಗ್‌ನಲ್ಲಿ ಹತ್ತಾರು ಕಾರುಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸಲಾಗುತ್ತಿದ್ದು, ಕಿರಿದಾದ ರಸ್ತೆಯಲ್ಲಿ ಇತರೆ ವಾಹನಗಳು ಸಾಗಲು ಸಾಧ್ಯವಾಗದೆ ಟ್ರಾಫಿಕ್ ಜಾಮ್ ಆಗುತ್ತಿತ್ತು. ಕಾರು ನಿಲುಗಡೆ ಮಾಡದಂತೆ ಸಂಚಾರಿ ಪೊಲೀಸರು ಸೂಚನೆ ನೀಡಿದರೂ ನಿರ್ಲಕ್ಷ್ಯ ಮಾಡುತ್ತಿದ್ದರು.

ಈ ಬಗ್ಗೆ 'ಮೈಸೂರು ಮಿತ್ರ'ನ ವರದಿಯನ್ನು ಗಂಭೀರವಾಗಿ ಪರಿಗಣಿಸಿರುವ ಸಂಚಾರಿ ಪೊಲೀಸರು ಅಡ್ಡಾ ದಿಡ್ಡಿಯಾಗಿ ನಿಲ್ಲಿಸುವ ಕಾರುಗಳಿಗೆ ಸೋಮವಾರದಿಂದ ವ್ಹೀಲ್‌ಲಾಕ್ ಮಾಡಲು ಆರಂಭಿಸಿದ್ದಾರೆ. ಇಂದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಸಂಚಾರ ವಿಭಾಗದ ಎಸಿಪಿ ಎಂ.ಶಿವಶಂಕರ್, ವ್ಹೀಲ್ ಲಾಕ್ ಅಭಿಯಾನವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಿಬ್ಬಂದಿಗೆ ಸೂಚನೆ ನೀಡಿದರು.

ನ್ಯೂ ಸಯ್ಯಾಜಿರಾವ್ ರಸ್ತೆ, ಧನ್ವಂತರಿ ರಸ್ತೆ, ದೇವರಾಜ ಮಾರುಕಟ್ಟೆ ಪಕ್ಕದಲ್ಲಿರುವ ಬೋಟಿ ಬಜಾರ್ ಸೇರಿದಂತೆ ಇತರೆಡೆ ನೋ ಪಾರ್ಕಿಂಗ್‌ನಲ್ಲಿ ನಿಲ್ಲಿಸಿದ್ದ ವಾಹನಗಳಿಗೆ ವ್ಹೀಲ್‌ಲಾಕ್ ಮಾಡಿ, ಅವುಗಳಿಗೆ ನೋಟೀಸ್ ಅಂಟಿಸಲಾಯಿತು.

## ಸಂಚಾರ ನಿಯಮದ ಜಾಗೃತಿಗೂ ಜಗ್ಗದ ಜನರು

"ನೋ ಪಾರ್ಕಿಂಗ್‌ನಲ್ಲಿ ವಾಹನ ನಿಲುಗಡೆ ಸೇರಿದಂತೆ ಸಂಚಾರ ನಿಯಮ ಪಾಲಿಸದವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸಂಚಾರಿ ಪೊಲೀಸರಿಗೆ ಸೂಚನೆ ನೀಡಿದ್ದೇನೆ ಎಂದು ತಿಳಿಸಿದರು. ನೋ ಪಾರ್ಕಿಂಗ್‌ನಲ್ಲಿ ವಾಹನ ನಿಲುಗಡೆ ಮಾಡಬಾರದು ಎಂಬುದು ಸೇರಿದಂತೆ ಸಂಚಾರ ನಿಯಮದ ಉಲ್ಲಂಘನೆ ಬಗ್ಗೆ ಪರಿಣಾಮಕಾರಿ ಜಾಗೃತಿ ಮೂಡಿಸುತ್ತಿದ್ದೇವೆ. ಆದರೆ ಜನರು ಸಂಚಾರ ನಿಯಮ ಪಾಲನೆ ಮಾಡದೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ಟೌನ್‌ಹಾಲ್ ಒಳಗಿರುವ ಮಲ್ಟಿ ಲೆವೆಲ್ ಪಾರ್ಕಿಂಗ್ ಲಾಟ್‌ನಲ್ಲಿ ಶುಲ್ಕ ಪಾವತಿಸಿ ವಾಹನ ಪಾರ್ಕಿಂಗ್ ನಿಲುಗಡೆ ಸೌಲಭ್ಯ ಕಲ್ಪಿಸಲಾಗಿದೆ. ಆದರೆ ದಸರಾ ವೇಳೆ ಮಾತ್ರ ಇದನ್ನು ಬಳಕೆ ಮಾಡುವ ಜನರು ತರುವಾಯ ಅತ್ತ ತಿರುಗಿಯೂ ನೋಡುವುದಿಲ್ಲ.

–ಎಂ.ಶಿವಶಂಕರ್, ಎಸಿಪಿ, ಸಂಚಾರ ವಿಭಾಗ

"ಸಯ್ಯಾಜಿರಾವ್ ರಸ್ತೆ, ದೇವರಾಜ ಅರಸ್ ರಸ್ತೆ ಸೇರಿದಂತೆ ನಗರದ ಹೃದಯ ಭಾಗದಲ್ಲಿ ಸಂಚಾರ ದಟ್ಟಣೆ ಸುಧಾರಣೆ, ಸುಗಮ ಸಂಚಾರ ವ್ಯವಸ್ಥೆಗೆ ಟೌನ್‌ಹಾಲ್‌ನಲ್ಲಿ ಮಲ್ಟಿಲೆವೆಲ್ ಪಾರ್ಕಿಂಗ್ ಲಾಟ್ ನಿರ್ಮಾಣ ಮಾಡಲಾಗಿದೆ. ಆದರೆ ಜನರು ಅದರ ಬಳಕೆಗೆ ನಿರ್ಲಕ್ಷ್ಯ ತೋರಿದ್ದಾರೆ.

–ವೆಂಕಟೇಶ್, ಅಭಿವೃದ್ಧಿ ಅಧಿಕಾರಿ, ಮೈಸೂರು ನಗರ ಪಾಲಿಕೆ

## ಡಾ.ಉಮಾಕಾಂತ್‌ಗೆ 'ರಾಸ್ಟ್ ಫೆಲೋಶಿಪ್ ಅವಾರ್ಡ್ 2025'



ಮೈಸೂರು,ಅ.27–ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯ ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ.ಆರ್.ಎಸ್. ಉಮಾಕಾಂತ್ ಅವರು "ಬಯೋಕೆಮಿಕಲ್ ಜೆನೆಟಿಕ್ಸ್" ಕ್ಷೇತ್ರದಲ್ಲಿ ವಿಶೇಷ ಸಂಶೋಧನೆ ಮತ್ತು ಬೋಧನೆಗೆ ಪ್ರತಿಷ್ಠಿತ "ರಾಸ್ಟ್ ಫೆಲೊಶಿಪ್ ಅವಾರ್ಡ್ 2025"ಗೆ ಅಯ್ಕೆಯಾಗಿದ್ದಾರೆ.

ವೆಸ್ಟರ್ನ್ ಘಾಟ್ ರಿಸರ್ಚರ್ ಅಸೋಸಿಯೇಷನ್ ಫಾರ್ ಅಗ್ರಿಕಲ್ಚರಲ್ ಸೈನ್ಸಸ್ ಅನ್ಡ್ ಟೆಕ್ನಾಲಜಿ ಸಂಸ್ಥೆಯವರು ಮಧುರೈನಲ್ಲಿ ಡಿಸೆಂಬರ್ 2025ರಲ್ಲಿ ಅಯೋಜಿಸಿರುವ ಅಗ್ರಿ ಟೆಕ್ನೊವ–2025 ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ಸ್ಮರಣಿಕೆ ಮತ್ತು ಮೆಚ್ಚುಗೆಯ ಪ್ರಮಾಣಪತ್ರ ಹೊಂದಿದೆ. ಡಾ.ಉಮಾಕಾಂತ್ ಅವರು ಪ್ರಸ್ತುತ ಬೋಧನೆ ಹಾಗೂ ಸಂಶೋಧನೆ ಜೊತೆ ಹೆಚ್ಚುವರಿಯಾಗಿ ಮೈಸೂರು ವಿವಿ ಮಾಹಿತಿ ಮತ್ತು ಸಂವಹನ ವಿಭಾಗದ (ಐಸಿಡಿ) ನಿರ್ದೇಶಕರಾಗಿ, ಇ-ಪ್ರೊಕ್ಯೂರ್‌ಮೆಂಟ್ ಸೆಲ್‌ನ ಸಂಯೋಜಕರಾಗಿ ಮತ್ತು ಯು.ಯು.ಸಿ.ಎಮ್.ಎಸ್. ಹಾಗೂ ಪರೀಕ್ಷಾ ಶಾಖೆಯ ನೋಡಲ್ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ರಾಮಕೃಷ್ಣ ವಿದ್ಯಾಕೇಂದ್ರದ ವಿದ್ಯಾರ್ಥಿಗಳಿಗೆ ಬಹುಮಾನ



ಅಥ್ಲೆಟಿಕ್ಸ್ ಕ್ರೀಡಾಕೂಟದ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

**ಮೈಸೂರು:** ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ದಕ್ಷಿಣ ವಲಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ಆಯೋಜಿಸಿದ್ದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ರಾಮಕೃಷ್ಣ ವಿದ್ಯಾಕೇಂದ್ರದ 10ನೇ ತರಗತಿಯ ಶ್ರೀಕಾಂತ್ ಉದ್ದ ಜಿಗಿತದಲ್ಲಿ ಪ್ರಥಮ ಬಹುಮಾನ, ತ್ರಿವಿಧ ಜಿಗಿತದಲ್ಲಿ ಪ್ರಥಮ ಬಹುಮಾನ, ಹೆಚ್.ಎಸ್. ಪೂರ್ಣೇಶ್ (10ನೇ ತರಗತಿ) ಪೋಲ್ ವಾಲ್ಟ್‌ನಲ್ಲಿ ಪ್ರಥಮ ಬಹುಮಾನ, ಲಿಖಿತ ಪಿ. (10ನೇ ತರಗತಿ) ಜಾವಲಿನ್ ಥ್ರೋನಲ್ಲಿ ಪ್ರಥಮ ಬಹುಮಾನ, ತ್ರಿವಿಧ ಜಿಗಿತದಲ್ಲಿ ಪ್ರಥಮ ಬಹುಮಾನ, ಎತ್ತರ ಜಿಗಿತದಲ್ಲಿ ದ್ವಿತೀಯ ಬಹುಮಾನ, 9ನೇ ತರಗತಿಯ ಗುಂಫನ ಎಂ.ಎಸ್. 800 ಮೀಟರ್ ಓಟದಲ್ಲಿ ದ್ವಿತೀಯ ಬಹುಮಾನ, ಯಶಿಕ ಕೆ. (10ನೇ ತರಗತಿ) ಡಿಸ್‌ಕಸ್ ಥ್ರೋನಲ್ಲಿ ದ್ವಿತೀಯ ಬಹುಮಾನ ಪಡೆದು ವಲಯ ಮಟ್ಟದಿಂದ ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

## ಶುಭಾಶಯ



ಮೈಸೂರಿನ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಪದಾಧಿಕಾರಿಗಳು ಶನಿವಾರ ಧರ್ಮಸ್ಥಳಕ್ಕೆ ಭೇಟಿ ನೀಡಿ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ.ವೀರೇಂದ್ರ ಹೆಗಡೆ ಅವರ ಪಟ್ಟಾಭಿಷೇಕದ 58ನೇ ವರ್ಧಂತ್ಯೋತ್ಸವದ ಶುಭಾಶಯ ಕೋರಿ ಆಶೀರ್ವಾದ ಪಡೆದರು. ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಜಿ.ರಾಘವೇಂದ್ರ, ಕಡಕೊಳ ಜಗದೀಶ್, ಎಸ್.ಎನ್.ರಾಜೇಶ್, ಹರೀಶ್ ನಾಯ್ಡು, ಮಹೇಶ್‌ಕುಮಾರ್ ಹಾಗೂ ಪದಾಧಿಕಾರಿಗಳು ಹಾಜರಿದ್ದರು.

## ಅವಿಲಾ ಕಾನ್ವೆಂಟ್ ಬಾಲಕಿಯರ ತಂಡಕ್ಕೆ ಜಿಲ್ಲಾ ಮಟ್ಟದ ಪ್ರಶಸ್ತಿ



ಮೈಸೂರು,ಅ.27–ಮೈಸೂರು ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನಗರದ ಭಾರತೀಯ ವಿದ್ಯಾಭವನ ಶಾಲಾ ಮೈದಾನದಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಶಾಲಾ ಬಾಸ್ಕೆಟ್‌ಬಾಲ್ ಪಂದ್ಯಾವಳಿಯಲ್ಲಿ ಅವಿಲಾ ಕಾನ್ವೆಂಟ್ ಪ್ರೌಢಶಾಲೆಯ 14–17 ವಯೋಮಿತಿಯ ಬಾಲಕಿಯರ ತಂಡಗಳು ಸತತ 18 ವರ್ಷಗಳಿಂದ ಜಿಲ್ಲಾ ಮಟ್ಟದ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದೆ.

ಶಾಲಾ ವ್ಯವಸ್ಥಾಪಕರಾದ ಸಿಸ್ಟರ್ ಮಂಜರಿ, ಮುಖ್ಯೋಪಾಧ್ಯಾಯಿನಿ ಸಿಸ್ಟರ್ ಮಸೀಟಾ, ಸಿಸ್ಟರ್ ನಸೀಟಾ, ಸಿಸ್ಟರ್ ಮರಿಯಜ್ಯೋತಿ, ದೈಹಿಕ ಶಿಕ್ಷಣ ಶಿಕ್ಷಕರಾದ ಎಲಿಯಾಸ್ ಅರುಳಪ್ಪ ತನ್ನಿ ಅಭಿನಂದಿಸಿದರು. ಈ ವೇಳೆ ವಿದ್ಯಾರ್ಥಿಗಳಾದ ಭೂಮಿಕ, ಶ್ರೇಯ, ಲಿಪಿ, ಚಿನ್ಮಯಿ, ಚೈತ್ರ ಕೀರ್ತನ, ಖುಷಿ, ಜಾಸ್ಮಿನ್, ಧನ್ವಿ, ಹಿಮಶ್ರೀ, ಅನ್ವಿತ, ಅನನ್ಯ, ಸುಶ್ಮಿತ, ಶಿವಾನಿ ಗುಪ್ತ, ಭಂದವಿ, ನಿಷಾ, ಲಾವಣ್ಯ, ಸನ್ನಿಧಿ, ಸುಶುಮ್ನಶ್ರೀ, ನೊನಾಕ್ಷಲ್ಯೆ, ಸೋನಂ ಗುಪ್ತ, ಶ್ರಾವ್ಯ, ಕವನ, ಆರಾಧ್ಯ, ಚೈತನ್ಯ, ವಿರಾಟ್, ಸಮಿಕ್ಷಮಲ್ಯೆ, ವಿವಾನ್, ಅಂಕಿತ್ ಉಪಸ್ಥಿತರಿದ್ದರು.

## ಪಿರಿಯಾಪಟ್ಟಣದಲ್ಲಿ ಲಯನ್ಸ್ ಟ್ವಿನ್ನಿಂಗ್ ವಿಶೇಷ ಸಭೆ

ಮೈಸೂರು, ಅ. 27– ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಬಾಸಿಡರಸ್ ಮತ್ತು ಲಯನ್ಸ್ ಕ್ಲಬ್ ಆಫ್ ಪಿರಿಯಾಪಟ್ಟಣ ಲಯನ್ಸ್ ಸಂಸ್ಥೆಗಳು ಟ್ವಿನ್ನಿಂಗ್ (Twinning) ಕಾರ್ಯಕ್ರಮದ ಅಂಗವಾಗಿ ವಿಶೇಷ ಸಭೆಯನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಉದ್ದೇಶವು ಕ್ಲಬ್‌ಗಳ ನಡುವಿನ ಸ್ನೇಹ, ಸೇವಾ ಸಹಕಾರ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಬಲಪಡಿಸುವುದಾಗಿದೆ.

ಸಭೆಯಲ್ಲಿ ಎರಡು ಕ್ಲಬ್‌ಗಳ ಸದಸ್ಯರು ಪರಸ್ಪರ ಅನುಭವ ಹಂಚಿಕೊಂಡು, ಸೇವಾ ಯೋಜನೆಗಳ ಬಗ್ಗೆ ಚರ್ಚಿಸಿದರು. ಅಂಬಾಸಿಡರ್ ಸಂಸ್ಥೆಯ ಅಧ್ಯಕ್ಷ ಲಯನ್ ಡಾ.ಆರ್.ಡಿ.ಕುಮಾರ್ ಮಾತನಾಡಿ, ಸಮಾಜಮುಖಿ ಚಟುವಟಿಕೆಗಳ ಮೂಲಕ ಮಾನವೀಯ ಮೌಲ್ಯಗಳನ್ನು ವೃದ್ಧಿಸುವ ಅಗತ್ಯವನ್ನು ಒತ್ತಿಹೇಳಿದರು.

ಪಿರಿಯಾಪಟ್ಟಣ ಸಂಸ್ಥೆಯ ಅಧ್ಯಕ್ಷ ಲಯನ್ ಜೆ.ಗಿರೀಶ್ ಮಾತನಾಡಿ, ಇಂತಹ ಕಾರ್ಯಕ್ರಮಗಳ ಆಯೋಜನೆ ಮಾಡಿದರೆ ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಂಡು ಹೊಸ ರೀತಿಯಲ್ಲಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡಬಹುದು ಎಂದು ತಿಳಿಸಿದರು.

ಎರಡು ಸಂಸ್ಥೆಗಳು ಪರಸ್ಪರ ಬ್ಯಾನರ್ ಮತ್ತು ಲಯನ್ಸ ಟ್ವಿನ್ನಿಂಗ್ ಪ್ರಮಾಣ ಪತ್ರಗಳನ್ನು ಬದಲಾವಣೆಯನ್ನು ಮಾಡಿಕೊಂಡರು. ಲಯನ್ಸ್ ಜಿಲ್ಲೆ 317 ಜಿಯ ಸಂಪುಟ ಕಾರ್ಯದರ್ಶಿ ಲಯನ್ ಟಿ.ಹೆಚ್ ವೆಂಕಟೇಶ್ ಮೈಸೂರಿನ ನರ್ಸಿಂಗ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಸಂಜನಾ ಎಂಬ ವಿದ್ಯಾರ್ಥಿಗೆ ವಾರ್ಷಿಕ ಶುಲ್ಕ 25000ಗಳನ್ನು ನೀಡಿದರು.

ಪ್ರಾಂತೀಯ ಅಧ್ಯಕ್ಷ ಲಯನ್ ಹೆಚ್.ಸಿ. ಕಾಂತರಾಜು, ಜಿಲ್ಲಾ ಅಧ್ಯಕ್ಷ ಮಾಕಾಳ ಶಿವಕುಮಾರ್, ವಿ.ಶ್ರೀಧರ್ ಹಾಗೂ ಉಭಯ ಸಂಸ್ಥೆಗಳ ಕಾರ್ಯದರ್ಶಿ ಕೆ.ಟಿ.ವಿಷ್ಣು ಮತ್ತು ವಿಜಯಕುಮಾರ್, ಖಜಾಂಚಿ ಡಾ.ಜಿ.ಕಿಶೋರ್ ಮತ್ತು ಆನಂದ್ ಉಪಸ್ಥಿತರಿದ್ದರು. ಇದೇ ವೇಳೆ ನಿವೃತ್ತ ಸಬ್‌ಇನ್ಸ್‌ಪೆಕ್ಟರ್ ಎಂ.ಡಿ.ಅಪ್ಪಾಜಿ ಅವರ ಸೇವಾ ಕಾರ್ಯಕ್ಷಮತೆಯ ಅಂಗವಾಗಿ ರಾಯಭಾರಿ ಆರಕ್ಷಕ ಎಂಬ ಪ್ರಶಸ್ತಿ ನೀಡಿ ಗೌರವಿಸಲಾಯಿತು.




ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಬಾಸಿಡರಸ್, ಲಯನ್ಸ್ ಕ್ಲಬ್ ಆಫ್ ಪಿರಿಯಾಪಟ್ಟಣ ಲಯನ್ಸ್ ಸಂಸ್ಥೆಗಳು ಟ್ವಿನಿಂಗ್ ಕಾರ್ಯಕ್ರಮದ ಅಂಗವಾಗಿ ವಿಶೇಷ ಸಭೆಯನ್ನು ಆಯೋಜಿಸಲಾಗಿತ್ತು.

## ಹರಿವಿದ್ಯಾಲಯ ಪಿಯು ಕಾಲೇಜಿಗೆ ಚಾಲೆಂಜರ್ಸ್ ಕಪ್



ಚಾಲೆಂಜರ್ಸ್ ಅಕಾಡೆಮಿಯು ಮೈಸೂರಿನ ಸುಬ್ಬರಾಯನಕೆರೆ ಬ್ಯಾಸ್ಕೆಟ್‌ಬಾಲ್ ಅಂಕಣದಲ್ಲಿ ಆಯೋಜಿಸಿದ್ದ ಚಾಲೆಂಜರ್ಸ್ ಕಪ್–2025 ಬ್ಯಾಸ್ಕೆಟ್‌ಬಾಲ್ ಪಂದ್ಯಾವಳಿಯಲ್ಲಿ ಹರಿವಿದ್ಯಾಲಯ ಸಂಯುಕ್ತ ಪದವಿಪೂರ್ವ ಕಾಲೇಜಿನ ಬಾಲಕರ ತಂಡವು ಜ್ಞಾನೋದಯ ಪದವಿ ಪೂರ್ವ ಕಾಲೇಜಿನ ವಿರುದ್ಧ ಜಯ ಸಾಧಿಸಿ ಚಾಂಪಿಯನ್ ಪಟ್ಟ ತಮ್ಮದಾಗಿಸಿಕೊಂಡರು. ವೈಯಕ್ತಿಕ ಪ್ರಶಸ್ತಿಗಳಾದ ಬೆಸ್ಟ್ ಪ್ಲೇಯರ್, ಬೆಸ್ಟ್ ಶೂಟರ್ ಪ್ರಶಸ್ತಿಗಳನ್ನು ಪ್ರಥಮ ಪಿಯುಸಿ ವಿದ್ಯಾರ್ಥಿಗಳಾದ ನಿಗಮ್, ಪಾರಸ್ ಪಡೆದುಕೊಂಡರು. ವಿದ್ಯಾರ್ಥಿಗಳ ಸಾಧನೆಗೆ ಆಡಳಿತ ಮಂಡಳಿ, ಪ್ರಾಂಶುಪಾಲರು, ಶೈಕ್ಷಣಿಕ ಸಂಯೋಜಕರು, ಸಿಬ್ಬಂದಿ ಅಭಿನಂದಿಸಿದ್ದಾರೆ.

## ಮಾನವೀಯ ಮೌಲ್ಯ ಬಿತ್ತುವ ಸಾಹಿತ್ಯ ಕೃಷಿ ಮಾಡಬೇಕು

### ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಸಲಹೆ




'ಹೊನ್ನೇರು' ಪರಿಷ್ಕೃತ ಆವೃತ್ತಿ ಹಾಗೂ 'ಕರುನಾಡ ಕೌತುಕ ಕಾರಂತಜ್ಜ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಮೈಸೂರು, ಅ.27(ಎಂಕೆ)– ಲೇಖಕ ಬಸಪ್ಪ ಸಿ.ಸಾಲುಂಡಿ ಸಂಪಾದಿತ 'ಹೊನ್ನೇರು' ಪರಿಷ್ಕೃತ ಆವೃತ್ತಿ ಹಾಗೂ 'ಕರುನಾಡ ಕೌತುಕ ಕಾರಂತಜ್ಜ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಮೈಸೂರಿನ ಸರಸ್ವತಿಪುರಂನಲ್ಲಿರುವ ರೋಟರಿ ಪಶ್ಚಿಮ ಶಾಲೆ ಸಭಾಂಗಣದಲ್ಲಿ ಸನ್ನಿತಿ ಪ್ರಕಾಶನದ ವತಿಯಿಂದ ಆಯೋಜಿಸಿದ್ದ ಪುಸ್ತಕ ಬಿಡುಗಡೆ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಸಾಹಿತಿ ಟಿ.ಸತೀಶ್ ಜವರೇಗೌಡ ಎರಡು ಕೃತಿಗಳನ್ನು ಬಿಡುಗಡೆ ಮಾಡಿದರು.

ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಕರ್ನಾಟಕ ರಾಜ್ಯ ಕೆಎಎಸ್ ಅಧಿಕಾರಿಗಳ ಸಂಘದ ಅಧ್ಯಕ್ಷ ಬಿ.ಶಿವಸ್ವಾಮಿ ಮಾತನಾಡಿ, ಮಾನವೀಯ ಮೌಲ್ಯಗಳನ್ನು ಒಳಗೊಂಡ ಸಾಹಿತ್ಯವು ಜೀವಪರ ಹಾಗೂ ಜನಪರವಾಗಿರಲಿದೆ ಎಂದರು.

ಧರ್ಮಗಳಿಂದ ಸೃಷ್ಟಿಯಾಗಿರುವ ಭಯದ ವಾತಾವರಣ ತಿಳಿಯಾಗಬೇಕಾದರೆ ಅಕ್ಷರಗಳ ಮೂಲಕ ಅರಿವು ಮೂಡಿಸಬೇಕಾಗಿದೆ. ಸಾಮರಸ್ಯ, ಸಮಾನತೆಯ ಸಮಾಜ ನಿರ್ಮಾಣ ಮಾಡಬೇಕಿದೆ. ಬದುಕನ್ನು ಶ್ರೀಮಂತಿಕೆ, ಅಂತಸ್ತಿನಿಂದ ಅಳೆಯುವುದಲ್ಲ. ಮಾನವೀಯ ಮೌಲ್ಯಗಳಿಂದ ಅಳೆಯಬೇಕು. ಹಾಗಾಗಿ ಮಾನವೀಯ ಮೌಲ್ಯಗಳನ್ನು ಬಿತ್ತುವ ಸಾಹಿತ್ಯ ಕೃಷಿ ಮಾಡಬೇಕು ಎಂದು ಹೇಳಿದರು.

ಸಾಹಿತ್ಯ ರಚನೆ ಕೂಡ ಒಂದು ಕಲೆ. ಅದು ಎಲ್ಲರಿಗೂ ಸಿದ್ಧಿಸುವುದಿಲ್ಲ. ಯಾರಿಗೆ ಅಧ್ಯಯನದಲ್ಲಿ ಆಸಕ್ತಿ ಇದೆಯೋ ಅವರಿಗೆ ಸಿದ್ಧಿಸುತ್ತದೆ. ಭಾರತೀಯ ಭಾಷೆಗಳಲ್ಲಿ ಕನ್ನಡಕ್ಕೆ ಹೆಚ್ಚಿನ ಶಕ್ತಿ, ತಾಕತ್ತು ಇದೆ. ಆದ್ದರಿಂದಲೇ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳು ಲಭಿಸಿವೆ. ಇತ್ತೀಚೆಗೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಬೂಕರ್ ಪ್ರಶಸ್ತಿ ದೊರೆತಿದೆ. ಇನ್ನೂ ಹೆಚ್ಚಾಗಿ ಕನ್ನಡ ಸಾಹಿತ್ಯ ಬೆಳೆಯಬೇಕು ಎಂದು ಆಶಿಸಿದರು.

**ಕವಿಗೋಷ್ಠಿ:** ಇತ್ತೀಚೆಗೆ ನಿಧನರಾದ ಖ್ಯಾತ ಕಾದಂಬರಿಕಾರ ಎಸ್.ಎಲ್.ಭೈರಪ್ಪ ಹಾಗೂ ಕಥೆಗಾರ ಡಾ.ಮೊಗಳ್ಳಿ ಗಣೇಶ್ ಅವರಿಗೆ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು. ನಂತರ ಸಾಹಿತಿ ಸುಚಿತ್ರಾ ಹೆಗಡೆ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಿತು. ವಿವಿಧೆಡೆಯಿಂದ ಬಂದಿದ್ದ 26 ಕವಿಗಳು ಕವನ ವಾಚಿಸಿದರು.

**ಪ್ರಶಸ್ತಿ ಪ್ರದಾನ:** ಡಾ.ಸರ್ಜಾಶಂಕರ್ ಹರಳಿಮಠ(ಕನಕ ಸಾಹಿತ್ಯ ಪ್ರಶಸ್ತಿ), ಜೀವನ್ಮುಖಿ ಸುರೇಶ್(ಡಾ.ಶಿವರಾಮ ಕಾರಂತ ಮಾಧ್ಯಮ ಪ್ರಶಸ್ತಿ), ಡಾ.ಎಚ್.ಕೆ. ಪ್ರಸಾದ್(ಶಿಕ್ಷಣ), ಡಾ.ಎನ್.ವಿ.ಮನೋಜ್ ಕುಮಾರ್ (ಸಂಶೋಧನೆ), ಡಾ.ಅಂಬಳೆ ಮಹದೇವಸ್ವಾಮಿ (ಸಾಹಿತ್ಯ), ಸಾಲುಂಡಿ ದೊರೆಸ್ವಾಮಿ (ಸಂಘಟನೆ), ಅಮ್ಮ ರಾಮಚಂದ್ರ (ಜಾನಪದ), ಮೈಸೂರು ಎಂ.ಮಹಾಲಿಂಗ (ಸುಗಮ ಸಂಗೀತ), ಕೆ.ಎಂ.ಮಹೇಂದ್ರ, ಎಂ.ಶಿವಬೀರಪ್ಪ, ಬಡಿಗೇರ್ ಮೌನೇಶ್, ಪದ್ಮನಾಭ, ಮದನ್ ಕುಮಾರ್ (ಸಮಗ್ರ) ಹಾಗೂ ಎಂ.ಎಸ್. ಅಪೂರ್ವ (ಭರತನಾಟ್ಯ) ಅವರಿಗೆ ಸನ್ನಿತಿ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮೈಮುಲ್ ಅಧ್ಯಕ್ಷ ಈರೇಗೌಡ, ನಿವೃತ್ತ ಪ್ರಾಧ್ಯಾಪಕ ಮೈಸೂರು ಕೃಷ್ಣಮೂರ್ತಿ, ರಾಜ್ಯ ಮುಕ್ತ ವಿವಿ ನಿರ್ವಹಣಾಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಸಿ. ಮಹದೇವಮೂರ್ತಿ, ಸಾಲಿಗ್ರಾಮ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಕಂಚಿನಕೆರೆ ಗೋವಿಂದೇಗೌಡ, ಡಾ.ಹೆಚ್.ನವೀನ್‌ಕುಮಾರ್ ನಂಜನಗೂಡು ಸರ್ಕಾರಿ ಪ್ರಥಮದರ್ಜೆ ಕಾಲೇಜು ಸಹಪ್ರಾಧ್ಯಾಪಕ ಡಾ.ಎನ್.ನಾಗೇಂದ್ರ, ಸನ್ನಿತಿ ಪ್ರಕಾಶನದ ಸಂಸ್ಥಾಪಕ ಅಧ್ಯಕ್ಷ ಬಸಪ್ಪ ಸಿ.ಸಾಲುಂಡಿ, ಮೈಸೂರು ಮಹಾಲಿಂಗ, ಗಾಯಕ ಅಮ್ಮ ರಾಮಚಂದ್ರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ದೇಶ - ವಿದೇಶ

## ಕರ್ನೂಲ್ ದುರಂತ: ಕುಟುಂಬಸ್ಥರಿಗೆ ಮೃತದೇಹಗಳು ಹಸ್ತಾಂತರ



**ಕರ್ನೂಲ್:** ಆಂಧ್ರ ಪ್ರದೇಶದ ಕರ್ನೂಲ್‌ನಲ್ಲಿ ಸಂಭವಿಸಿದ ಬಸ್ ಬೆಂಕಿ ಅಪಘಾತದಲ್ಲಿ ಸುಟ್ಟು ಕರಕಲಾದ ದೇಹಗಳ ಡಿಎನ್‌ಎ ಪರೀಕ್ಷೆಯು ಪೂರ್ಣಗೊಂಡಿದೆ. ಸಂತ್ರಸ್ತರ ಕುಟುಂಬಗಳಿಗೆ ಮೃತದೇಹಗಳನ್ನು ಹಸ್ತಾಂತರಿಸಲಾಗಿದೆ.

ಸುಟ್ಟು ಕರಕಲಾದ ದೇಹಗಳ ಡಿಎನ್‌ಎ ಮಾದರಿಗಳನ್ನು ಸಂಗ್ರಹಿಸಿ, ವಿಜಯವಾಡದಲ್ಲಿರುವ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನಿಸುವವರೆಗೂ ಸಂರಕ್ಷಣೆಗಾಗಿ ಕೋಲ್ಡ್ ಸ್ಟೋರೇಜ್‌ನಲ್ಲಿ ಇಡಲಾಗಿತ್ತು. ಡಿಎನ್‌ಎ ಪರೀಕ್ಷೆ ಪೂರ್ಣಗೊಂಡ ನಂತರ ಎಲ್ಲಾ 19 ಮೃತದೇಹಗಳನ್ನು ಹಸ್ತಾಂತರಿಸಲಾಗಿದೆ. ಬಿಹಾರ ಮತ್ತು ತಮಿಳುನಾಡಿನ ಸಂತ್ರಸ್ತರ ಕುಟುಂಬದ ಸದಸ್ಯರು ಮೃತದೇಹಗಳನ್ನು ಆಂಧ್ರಪ್ರದೇಶದಲ್ಲಿ ಅಂತ್ಯಕ್ರಿಯೆ ಮಾಡಲು ನಿರ್ಧರಿಸಿದ್ದಾರೆ. ಇದಕ್ಕಾಗಿ ರಾಜ್ಯ ಸರ್ಕಾರ ಅಗತ್ಯ ವ್ಯವಸ್ಥೆಗಳನ್ನು ಮಾಡಿದೆ ಎಂದು ಕರ್ನೂಲ್ ಜಿಲ್ಲಾ ಕಂದಾಯ ವಿಭಾಗೀಯ ಅಧಿಕಾರಿ ಸಂದೀಪ್‌ಕುಮಾರ್ ತಿಳಿಸಿದ್ದಾರೆ.

## ಪಾಕ್ ಜೊತೆಗಿನ ಸಂಬಂಧ ಭಾರತದ ಸ್ನೇಹಕ್ಕೆ ಧಕ್ಕೆ ತರುವುದಿಲ್ಲ



**ವಾಷಿಂಗ್ಟನ್:** ಪಾಕಿಸ್ತಾನದ ಜೊತೆಗಿನ ಸಂಬಂಧ ಬಲಪಡಿಸಲು ಅಮೆರಿಕ ಪ್ರಯತ್ನಿಸುತ್ತಿದೆ. ಆದ್ರೆ ಇದು ಭಾರತದೊಂದಿಗಿನ ಸ್ನೇಹಕ್ಕೆ, ಐತಿಹಾಸಿಕ ಸಂಬಂಧಗಳಿಗೆ ಧಕ್ಕೆ ಉಂಟು ಮಾಡುವುದಿಲ್ಲ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಹೇಳಿದ್ದಾರೆ.

ಭಾರತ ಮತ್ತು ಪಾಕ್ ನಡುವಿನ ಸಂಘರ್ಷದ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಪಾಕಿಸ್ತಾನದ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್ ಭೇಟಿ ನಂತರ ಈ ಬೆಳವಣಿಗೆ ನಡೆದಿದೆ. ಉಭಯ ದೇಶಗಳ ನಡುವೆ ಕದನ ವಿರಾಮಕ್ಕೆ ಮಧ್ಯಸ್ಥಿಕೆ ವಹಿಸಿದ್ದಾಗಿ ಟ್ರಂಪ್ ಹೇಳಿಕೊಂಡಿದ್ದನ್ನು ಭಾರತ ತಿರಸ್ಕರಿಸಿದ್ದರೆ, ಪಾಕಿಸ್ತಾನವು ಸಂಘರ್ಷ ಕೊನೆಗೊಳಿಸಿದ್ದಕ್ಕಾಗಿ ಅಮೆರಿಕ ಅಧ್ಯಕ್ಷರಿಗೆ ಮಣೆ ಹಾಕಿದೆ. ಆಸಿಯಾನ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಮಲೇಷ್ಯಾದ ಕ್ವಾಲಾಲಂಪುರಕ್ಕೆ ತೆರಳುವ ಮುನ್ನ ಮಾತನಾಡಿದ ರುಬಿಯೋ, ಪಾಕಿಸ್ತಾನ ಜೊತೆಗಿನ ಸಂಬಂಧ ಬಲಪಡಿಸುವಿಕೆಯೂ ಭಾರತದ ಜೊತೆಗಿನ ಐತಿಹಾಸಿಕ ಸಂಬಂಧಕ್ಕೆ ಅಡ್ಡಿಯಾಗುವುದಿಲ್ಲ. ಆದ್ರೆ ಅಮೆರಿಕಕ್ಕೆ ಎಲ್ಲ ದೇಶದೊಂದಿಗೆ ದ್ವಿಪಕ್ಷೀಯ ಸಂಬಂಧ ಹೊಂದುವುದು ಅನಿವಾರ್ಯ. ಭಾರತ ಇದನ್ನ ಅರ್ಥ ಮಾಡಿಕೊಳ್ಳಬೇಕು ಹೇಳಿದ್ದಾರೆ.

## ಆಂಧ್ರ, ಒಡಿಶಾಕ್ಕೆ ಅಪ್ಪಳಿಸಲಿದೆ 'ಮೊಂಥಾ' ಸೈಕ್ಲೋನ್



**ನವದೆಹಲಿ:** ಬಂಗಾಳಕೊಲ್ಲಿಯ ಆಗ್ನೇಯ ಭಾಗದಲ್ಲಿ ವಾಯುಭಾರ ಕುಸಿತ ಉಂಟಾಗಿದ್ದು, ಆಂಧ್ರಪ್ರದೇಶ ಹಾಗೂ ಒಡಿಶಾಕ್ಕೆ ಮೊಂಥಾ ಚಂಡಮಾರುತ ಅಪ್ಪಳಿಸಲಿದೆ. ಪರಿಣಾಮ ಕರ್ನಾಟಕ, ತಮಿಳುನಾಡಿನಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ.

ಮಂಗಳವಾರ (ಅ.28) ಆಂಧ್ರಪ್ರದೇಶ ಹಾಗೂ ಒಡಿಶಾ ಕರಾವಳಿ ತೀರ ಪ್ರದೇಶಕ್ಕೆ ಮೊಂಥಾ ಚಂಡಮಾರುತ 110 ಕಿ.ಮೀ ವೇಗದಲ್ಲಿ ಅಪ್ಪಳಿಸಲಿದ್ದು, ಇಡೀ ರಾಜ್ಯದಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ. ರಾಜ್ಯದ 26 ಜಿಲ್ಲೆಗಳ ಪೈಕಿ 23 ಜಿಲ್ಲೆಗಳಿಗೆ ರೆಡ್ ಮತ್ತು ಆರೆಂಜ್ ಅಲರ್ಟ್ ನೀಡಲಾಗಿದೆ. ಧಾರಾಕಾರ ಮಳೆ, ಅತೀ ವೇಗದ ಗಾಳಿ ಮತ್ತು ಸಂಭವನೀಯ ಪ್ರವಾಹದ ಸಾಧ್ಯತೆ ಇದೆ. ಕಾಕಿನಾಡ ಬಳಿಯ ಮಚಲಿಪಟ್ನಂ ಮತ್ತು ಕಳಿಂಗಪಟ್ನಂ ನಡುವೆ ಭೂಕುಸಿತ ಉಂಟಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಕಾಕಿನಾಡ, ಕೋನ ಸೀಮಾ, ಎಲುರು, ಪಶ್ಚಿಮ ಗೋದಾವರಿ, ಕೃಷ್ಣ, ಗುಂಟೂರು, ಬಾಪಟ್ಲಾ, ಪ್ರಕಾಶಂ ಮತ್ತು ಎಸ್‌ಪಿಎಸ್‌ಆರ್ ನೆಲ್ಲೂರು ಸೇರಿದಂತೆ ಹಲವು ಜಿಲ್ಲೆಗಳಿಗೆ ಎಚ್ಚರಿಕೆ ನೀಡಲಾಗಿದೆ.

## ಅಮೆರಿಕದಿಂದ ಗಡಿಪಾರು: ಕೈಕೋಳದೊಂದಿಗೆ ಬಂದ 35 ಮಂದಿ



**ಕೈಥಲ್:** ಅಮೆರಿಕದಿಂದ ಗಡಿಪಾರಾಗಿ ಭಾರತಕ್ಕೆ ಮರಳಿರುವ ತಂಡದಲ್ಲಿ ಹರಿಯಾಣದ ಕೈಥಲ್, ಕರ್ನಾಲ್ ಮತ್ತು ಕುರುಕ್ಷೇತ್ರ ಜಿಲ್ಲೆಗಳಿಗೆ ಸೇರಿದ 35 ಜನರಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ರಮವಾಗಿ ಅಮೆರಿಕ ಪ್ರವೇಶಿಸಿದ ಭಾರತೀಯರನ್ನು ಹೊಂದಿದ್ದ ವಿಮಾನವು ದೆಹಲಿ ವಿಮಾನ ನಿಲ್ದಾಣಕ್ಕೆ ಬಂದಿಳಿದಿದೆ. ಅಮೆರಿಕದಿಂದ ಗಡಿಪಾರಾಗಿ ಬಂದವರಲ್ಲಿ ಕರ್ನಾಲ್‌ನ 16, ಕೈಥಲ್‌ನ 14 ಮತ್ತು ಕುರುಕ್ಷೇತ್ರ ಜಿಲ್ಲೆಯ 5 ಮಂದಿ ಸೇರಿದ್ದಾರೆ. ಅವರನ್ನು ಆಯಾ ಜಿಲ್ಲೆಗಳಲ್ಲಿನ ಅವರ ಕುಟುಂಬದ ಸದಸ್ಯರಿಗೆ ಹಸ್ತಾಂತರಿಸಲಾಯಿತು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ವಿಮಾನದಲ್ಲಿದ್ದ ಬಹುತೇಕರಿಗೆ ಕೈಕೋಳ ಹಾಕಲಾಗಿತ್ತು ಎಂದು ಅಮೆರಿಕದಿಂದ ಗಡಿಪಾರಾಗಿರುವ ಕೈಥಲ್ ಮೂಲದ ನರೇಶ್‌ಕುಮಾರ್ ಪ್ರತಿಕ್ರಿಯಿಸಿದ್ದಾರೆ. ಇವರೆಲ್ಲ ಅಕ್ರಮ ಮಾರ್ಗದ ಮೂಲಕ ಅಮೆರಿಕ ಪ್ರವೇಶಿಸಿದ್ದರು. ಇದಕ್ಕಾಗಿ ಏಜೆಂಟರಿಗೆ ಲಕ್ಷಾಂತರ ರೂಪಾಯಿ ಪಾವತಿಸಿದ್ದಾರೆ ಎಂಬುದು ಗೊತ್ತಾಗಿದೆ. ಆದರೆ ಈ ಬಗ್ಗೆ ಇಲ್ಲಿಯವರೆಗೆ ಯಾರೂ ಅಧಿಕೃತವಾಗಿ ದೂರು ದಾಖಲಿಸಿಲ್ಲ ಎಂದು ಡಿಎಸ್‌ಪಿ ಲಲಿತ್‌ಕುಮಾರ್ ತಿಳಿಸಿದ್ದಾರೆ.

## ಪ್ರವಾಸಿಗರ ಬಸ್ ಪಲ್ಟಿ: ಓರ್ವ ಸಾವು, 18 ಮಂದಿಗೆ ಗಾಯ



**ಕೊಟ್ಟಾಯಂ:** ಇಲ್ಲಿನ ಕುರವಿಲಂಗಡದ ಕುರ್ಯನಾಡ್‌ನಲ್ಲಿ 49 ಪ್ರಯಾಣಿಕರಿದ್ದ ಪ್ರವಾಸಿ ಬಸ್ ರಸ್ತೆ ಅಪಘಾತಕ್ಕೀಡಾಗಿ ಓಬ್ಬರು ಸಾವನ್ನಪ್ಪಿದ್ದು, 18 ಮಂದಿ ಗಾಯಗೊಂಡಿದ್ದಾರೆ. ಇರಿಟ್ಟಿಯ ಪೆರವೂರ್ ಮೂಲದ ಸಂಧ್ಯಾ ಮೃತಪಟ್ಟಿದ್ದಾರೆ. ಬಸ್‌ನಲ್ಲಿದ್ದ ಎಲ್ಲಾ ಪ್ರಯಾಣಿಕರು ಕಣ್ಣೂರಿನವರು ಎಂದು ತಿಳಿದುಬಂದಿದೆ. ತಿರುವನಂತಪುರಂನಿಂದ ಕಣ್ಣೂರಿಗೆ ಹೋಗುತ್ತಿದ್ದ ಬಸ್, ಚಿನ್ನಲ್ಲೆಲ್ ಸೇತುವೆ ಬಳಿಯ ಎಂಸಿ ರಸ್ತೆಯಲ್ಲಿ ಬೆಳಗಿನ ಜಾವ 1.30ರ ಸುಮಾರಿಗೆ ಅಪಘಾತಕ್ಕೀಡಾಗಿದೆ. ಚಾಲಕ ನಿದ್ರಾವಸ್ಥೆಯಲ್ಲಿದ್ದಾಗ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ನಂತರ ಸಂಚಾರ ಅಡಚಣೆ ಸರಿಪಡಿಸಲು ಕ್ರೇನ್ ಬಳಸಿ ಬಸ್ ಅನ್ನು ಮೇಲೆತ್ತಲಾಯಿತು. ಗಾಯಾಳುಗಳನ್ನು ಮೋನಿಪ್ಪಳ್ಳಿಯ ಖಾಸಗಿ ಆಸ್ಪತ್ರೆ ಮತ್ತು ಕೊಟ್ಟಾಯಂನ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ. ಕುರವಿಲಂಗಡ ಪೊಲೀಸರು ಮತ್ತು ಕಾಡುತುರುತಿಯ ಅಗ್ನಿಶಾಮಕ ಮತ್ತು ರಕ್ಷಣಾ ಸಿಬ್ಬಂದಿ ಜಂಟಿಯಾಗಿ ರಕ್ಷಣಾ ಕಾರ್ಯಾಚರಣೆ ನಡೆಸಿದರು.

## ಕಾಡಾನೆ ದಾಳಿಗೆ ಹಸು ಸಾವು; ಕಾಫಿ ಬೆಳೆಗಾರ ಪಾರು

ನಾಪೋಕ್ಲು, ಅ.27–ಕಾಡಾನೆ ದಾಳಿಯಿಂದ ಕಾಫಿ ಬೆಳೆಗಾರರೊಬ್ಬರು ಅಪಾಯದಿಂದ ಪಾರಾಗಿದ್ದರೆ, ಹಸು ಸಾವನ್ನಪ್ಪಿದ ಘಟನೆ ಸಮೀಪದ ಪೇರೂರು ಗ್ರಾಮದಲ್ಲಿ ಜರುಗಿದೆ.



ಕಾಡಾನೆ ದಾಳಿಯಿಂದ ಪಾರಾದ ಹ್ಯಾರಿ ಪೊನ್ನಪ್ಪ.

ಬಲ್ಲಮಾವಟ್ಟಿ ಗ್ರಾಮ ಪಂಚಾಯಿತಿಯ ಪೇರೂರು ಗ್ರಾಮದ ನಿವಾಸಿ ಕಾಫಿ ಬೆಳೆಗಾರ ಅಪ್ಪಚ್ಚಿರ ಹ್ಯಾರಿ ಪೊನ್ನಪ್ಪ ಕಾಡಾನೆ ದಾಳಿಗೆ ಒಳಗಾಗಿ ತೀವ್ರ ಗಾಯಗೊಂಡವರಾಗಿದ್ದಾರೆ. ಇವರು ತಮ್ಮ ತೋಟದಿಂದ ಕೆಲಸ ಮುಗಿಸಿ ಸಂಜೆ ಮನೆಗೆ ಹಿಂತಿರುಗುತ್ತಿದ್ದಾಗ ಪೇರೂರುನಲ್ಲಿರುವ ಮಚ್ಚೂರ ಮಂದ್ ಸಮೀಪ ಈ ದುರ್ಘಟನೆ ಜರುಗಿದೆ.

ಕಾಡಾನೆ ಅಟ್ಟಾಡಿಸಿದ್ದ ಸಂದರ್ಭ ತಂತಿ ಬೇಲಿ ತಾಗಿ ಬಿದ್ದಿದ್ದಾರೆ. ಕಾಡಾನೆ ತನ್ನ ದಂತದಿಂದ ಹ್ಯಾರಿ ಪೊನ್ನಪ್ಪ ಅವರ ಎದೆಯ ಭಾಗಕ್ಕೆ ತಿವಿದಿದೆ. ಸಮೀಪದಲ್ಲಿದ್ದವರು ಭಯದಿಂದ ಚೀರಾಡಿದ ಕಾರಣ ಆನೆ ಓಡಿದೆ. ಇದೇ ಸಂದರ್ಭದಲ್ಲಿ ಮಚ್ಚೂರ ಹರೀಶ್ ಬಿದ್ದಪ್ಪ ಎಂಬವರು ಗದ್ದೆಯಲ್ಲಿ ಮೇಯಲು ಬಿಟ್ಟಿದ್ದ ಹಸುವನ್ನು ಕಾಡಾನೆ ತಿವಿದು ತೀವ್ರ ಗಾಯಗೊಳಿಸಿದ್ದು ಭಾನುವಾರ ಹಸು ಮರಣ ಹೊಂದಿದೆ.

ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹ್ಯಾರಿ ಪೊನ್ನಪ್ಪ ಅವರಿಗೆ ಪ್ರಥಮ ಚಿಕಿತ್ಸೆ ನೀಡಿ ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ಬಳಿಕ ತುರ್ತು ಚಿಕಿತ್ಸೆಗಾಗಿ ಮೈಸೂರು ಅಪೋಲೊ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪಶು ವೈದ್ಯಾಧಿಕಾರಿ ಡಾ.ಚೇತನ್ ಸಿಬ್ಬಂದಿ ಹಸುವಿನ ಪೋಸ್ಟ್ ಮಾರ್ಟಂ ಮಾಡಿ ಪರಿಶೀಲಿಸಿದರು.

ಈ ಸಂದರ್ಭ ಉಪವಲಯ ಅರಣ್ಯಾಧಿಕಾರಿ ಕಾಳೇಗೌಡ ಸಿಬ್ಬಂದಿಗಳು ಉಪಸ್ಥಿತರಿದ್ದರು. ನಾಪೋಕ್ಲು ಪೊಲೀಸರು ಘಟನಾ ಸ್ಥಳಕ್ಕೆ ತೆರಳಿ ಪರಿಶೀಲಿಸಿ ಕೇಸು ದಾಖಲಿಸಿಕೊಂಡು ಕಾನೂನು ಕ್ರಮ ಕೈಗೊಂಡಿದ್ದಾರೆ.

# ಅಮರ್ ಜವಾನ್ ಯುದ್ಧ ಸ್ಮಾರಕ, ಧ್ವಜಸ್ತಂಭ ಯದುವೀರ್ ಲೋಕಾರ್ಪಣೆ



ಅಮರ್ ಜವಾನ್ ಯುದ್ಧ ಸ್ಮಾರಕ ಮತ್ತು ಧ್ವಜಸ್ತಂಭಕ್ಕೆ ಸಂಸದ ಯದುವೀರ್ ನಮನ ಸಲ್ಲಿಸಿದರು.



ಹುತಾತ್ಮ ಯೋಧರಿಗೆ ಗಣ್ಯರಿಂದ ಗೌರವ ನಮನ ಸಲ್ಲಿಸಲಾಯಿತು.

ಮಡಿಕೇರಿ,ಅ.27–ಮಾಜಿ ಸೈನಿಕರು ತಮ್ಮದೇ ಖರ್ಚಿನಲ್ಲಿ ನಿರ್ಮಿಸಿರುವ ಅಮರ್ ಜವಾನ್ ಯುದ್ಧ ಸ್ಮಾರಕ ಮತ್ತು ಧ್ವಜಸ್ತಂಭವನ್ನು ಸಂಸದ ಯದುವೀರ್ ಲೋಕಾರ್ಪಣೆಗೊಳಿಸಿದರು.

ಹುದಿಕೇರಿ ಕೊಡವ ಸಮಾಜ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೊಡಗು ಜಿಲ್ಲೆ ರಾಷ್ಟ್ರೀಯತೆ ಮತ್ತು ಭಾವೈಕ್ಯತೆಯ ಭದ್ರಕೋಟೆಯಾಗಿದೆ. ಭಾರತೀಯ ಪರಂಪರೆಯನ್ನು ರಕ್ಷಿಸುತ್ತ ಎಲ್ಲರಿಗೂ ಮಾದರಿ ಜಿಲ್ಲೆಯಾಗಿದೆ ಎಂದು ಹೇಳಿದರು.

ಗಡಿ ಭಾಗದಲ್ಲಿ ಸೇನೆ ರಕ್ಷಣಾ ಕಾರ್ಯದಲ್ಲಿರುವುದರಿಂದ ದೇಶದಲ್ಲಿ ಜನರು ಸುಭಿಕ್ಷವಾಗಿದ್ದಾರೆ. ಸೇವೆ ಸಲ್ಲಿಸುತ್ತಿರುವ ಯೋಧರು ಮತ್ತು ಹುತಾತ್ಮರಾದವರ ದಿನನಿತ್ಯದ ಸ್ಮರಣೆಗಾಗಿ ಈ ಸ್ಮಾರಕವನ್ನು ನಿರ್ಮಿಸಿರುವುದು ಶ್ಲಾಘನೀಯ ಎಂದರು.

ಹುದಿಕೇರಿ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಬಲ್ಯಮೀದೇರಿರ ಎ.ಪ್ರಕಾಶ್ ಮಾತನಾಡಿ, ಮಡಿಕೇರಿ, ವಿರಾಜಪೇಟೆಯಲ್ಲಿ ಸೇನೆಯಲ್ಲಿ ಪ್ರಾಣತೆತ್ತ ವೀರಯೋಧರಿಗೆ ನಮನ ಸಲ್ಲಿಸಲು ವೀರ ಸ್ತಂಭಗಳಿವೆ. ಹುದಿಕೇರಿಯಲ್ಲಿ ರಾಷ್ಟ್ರೀಯ ಹಬ್ಬಗಳಂದು ಮಾಜಿ ಸೈನಿಕರಿಗೆ ನಮನ ಸಲ್ಲಿಸಲು ಸ್ಥಳ ಇಲ್ಲದಿರುವುದನ್ನು ಅರಿತು ಸ್ಮಾರಕ ನಿರ್ಮಾಣ ಮಾಡಲಾಗಿದೆ ಎಂದರು.

ಸಂಘದ ಜಿಲ್ಲಾ ಗೌರವ ಅಧ್ಯಕ್ಷ ಕೊಟ್ಟುಕತ್ತಿರ ಪಿ.ಸೋಮಣ್ಣ ಮಾತನಾಡಿ, ಜಿಲ್ಲೆಯಲ್ಲಿ ಹಲವಾರು ಸೈನಿಕ ಸಂಘಗಳಿವೆ. ಆದರೆ ಕೇವಲ 4 ತಿಂಗಳಲ್ಲಿ ಹುದಿಕೇರಿ ಮಾಜಿ ಸೈನಿಕರ ಸಂಘ ಮಾಡಿರುವ ಸಾಧನೆ ಶ್ಲಾಘನೀಯ ಎಂದು ಹೇಳಿದರು. ಕೊಡಗಿನಲ್ಲಿ 4537 ಮಾಜಿ ಸೈನಿಕರು ಹಾಗೂ 3426 ವಿಧವಾ ವೇತನ ಪಡೆಯುವವರು, 317 ವೀರ ನಾರಿಯರು, 117 ಸ್ವಾತಂತ್ರ ಹೋರಾಟಗಾರರಿದ್ದಾರೆ ಎಂದು ಮಾಹಿತಿ ನೀಡಿದರು. ಇಡೀ ರಾಷ್ಟ್ರದ ಜನತೆ ನಿಶ್ಚಿಂತೆಯಿಂದ ಇದ್ದಾರೆ ಎಂದರೆ, ಗಡಿಯಲ್ಲಿ ಸೇವೆ ಮಾಡುತ್ತಿರುವ ನಮ್ಮ ಸೈನ್ಯದಿಂದ ಮಾತ್ರ ಸಾಧ್ಯವೆಂದರು.

ಕಗ್ಗಟ್ಟುನಾಡ್ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಐನಂಡ ಕೆ.ಮಂದಣ್ಣ ಮಾತನಾಡಿದರು. ಈ ಸಂದರ್ಭ ಹುತಾತ್ಮ ಸೈನಿಕ ಬಯೋವಂಡ ಬಿ.ಸುಬಯ್ಯ, ಮಂಡೇರ ಪಿ.ಬೋಪಯ್ಯ, ಕೊಳೇರ ಎ.ಸವಿನ, ಮಂಡಚಂಡ ಕೆ.ಅಯ್ಯಪ್ಪ, ಕೇಚಮಾಡ ಸಿ.ತಿಲಕ, ಮೇಜರ್ ಪೆಮ್ಮಂಡ ಎಂ.ಮಧು ಅವರನ್ನು ಸ್ಮರಿಸಿ ಅವರ ಕುಟುಂಬಸ್ಥರನ್ನು ಹುದಿಕೇರಿ ಮಾಜಿ ಸೈನಿಕ ಸಂಘದ ವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು.

ಹುದಿಕೇರಿ ಹಾಗೂ ಟಿ.ಶೆಟ್ಟಿಗೇರಿ ಗ್ರಾಮದ ಮಾಜಿ ಸೈನಿಕ ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗೂ ಶ್ರೀಮಂಗಲ ಪೊಲೀಸ್ ಠಾಣಾಧಿಕಾರಿ ರವೀಂದ್ರ ಹಾಗೂ ಸಿಬ್ಬಂದಿಗಳಿಂದ ಹಾಗೂ ಗೋಣಿಕೊಪ್ಪ ಪ್ರೌಢಶಾಲಾ ಎನ್.ಸಿ.ಸಿ. ವಿದ್ಯಾರ್ಥಿಗಳಿಂದ ಹುತಾತ್ಮ ಯೋಧರಿಗೆ ಗೌರವ ನಮನ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗೋಣಿಕೊಪ್ಪ ಪ್ರೌಢಶಾಲಾ ಎನ್‌ಸಿಸಿ ವಿದ್ಯಾರ್ಥಿಗಳಿಗೆ ಹುದಿಕೇರಿ ಮಾಜಿ ಸೈನಿಕ ಸಂಘದ ವತಿಯಿಂದ ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಲಾಯಿತು.

ಈ ಸಂದರ್ಭ ಹುದಿಕೇರಿ ಮಾಜಿ ಸೈನಿಕ ಸಂಘದ ಉಪಾಧ್ಯಕ್ಷ ಚೆಕ್ಕೇರ ಎಂ.ರಮೇಶ್, ಕಾರ್ಯದರ್ಶಿ ಬೊಜ್ಜಂಗಡ ಎಂ.ತಿಮ್ಮಯ್ಯ, ಕಾರ್ಯದರ್ಶಿ ಕಿರಿಯಮಾಡ ಎ.ಮಿಲನ್ ಗಣಪತಿ, ಸಂಘಟನಾ ಕಾರ್ಯದರ್ಶಿ ಬೊಳ್ಳಜೀರ ಪಿ.ಕಿಶೋರ್, ಜಂಟಿ ಕಾರ್ಯದರ್ಶಿ ಬೊಳ್ಳಿಮಾಡ ಪಿ.ಬಿನು ಕುಮಾರ್, ಜಂಟಿ ಖಜಾಂಚಿ ಬೊಜ್ಜಂಗಡ ಎನ್.ಸುನಿಲ್ ಕುಮಾರ್, ನಿರ್ದೇಶಕ ಮಲ್ಲೆಂಗಡ ಜಯ ಉತ್ತಯ್ಯ, ಹಿರಿಯ ಸಲಹೆಗಾರರಾದ ಬಯವಂಡ ಯು. ಕಾಳಪ್ಪ, ಮಡಿಕೇರಿ ಪ್ಯಾರಾ ಮಿಲಿಟರಿ ಫೋರ್ಸ್ ಮುಖ್ಯಸ್ಥ ನೂರೇರ ಭೀಮಯ್ಯ, ಸೈನಿಕ ಸಂಘದ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಸಿಎನ್‌ಸಿಯಿಂದ ಹುತಾತ್ಮ ಹಿರಿಯ ಕೊಡವರಿಗೆ ಮೀದಿ ಸಮರ್ಪಣೆ



ಸಿಎನ್‌ಸಿ ಸದಸ್ಯರು ಅಗಲಿದ ಹಿರಿಯರಿಗೆ ಗೌರವ ಅರ್ಪಿಸಿದರು.

ಮಡಿಕೇರಿ,ಅ.27–ಕಾವೇರಿ ತುಲಾ ಸಂಕ್ರಮಣದ ಪತ್ತಲೋಧಿ ದಿನದ ಅಂಗವಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಮಡಿಕೇರಿ ಕೋಟೆ, ನಾಲ್ನಾಡ್ ಅರಮನೆ ಆವರಣ ಮತ್ತು ಮುಳ್ಳುಸೋಗೆಯ ಕಾವೇರಿ ನದಿಯ ದಡದಲ್ಲಿ ಹುತಾತ್ಮ ಹಿರಿಯ ಕೊಡವರಿಗೆ ಮೀದಿ ಸಮರ್ಪಿಸಿತು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಪುಷ್ಪ ನಮನದ ಮೂಲಕ ಅಗಲಿದ ಹಿರಿಯರನ್ನು ಸ್ಮರಿಸಿದರು. ಕೊಡವ ಜನಾಂಗೀಯ ಬುಡಕಟ್ಟು ಜನಾಂಗದ ಹತ್ಯೆಗಳು 2 ಶತಮಾನಗಳಿಗೂ ಹೆಚ್ಚು ಕಾಲ ನಿರಂತರವಾಗಿ ನಡೆದಿದೆ. ಷಡ್ಯಂತ್ರದಿಂದ ಪ್ರಾಣ ಕಳೆದುಕೊಂಡ ಅಮಾಯಕ ಹಿರಿಯರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ ಎಂದರು.

ಚಂಬಂಡ ಜನತ್, ಅರೆಯಡ ಗಿರೀಶ್, ನಂದೇಟಿರ ರವಿ ಸುಬ್ಬಯ್ಯ, ತೆನ್ನಿರ ಮೈನಾ, ನಂದಿನೆರವಂಡ ಬೋಪಣ್ಣ, ಪುಟ್ಟಿಚಂಡ ಡಾನ್ ದೇವಯ್ಯ, ಅಪ್ಪಾರಂಡ ವಿಜು, ಅಪ್ಪಾರಂಡ ಪ್ರಸಾದ್, ಕೂಪದಿರ ಮೊಣ್ಣಪ್ಪ, ಮೇಕೇರಿರ ಬಬ್ಬು ಅವರುಗಳು ಹಾಜರಿದ್ದು ಅಗಲಿದ ಹಿರಿಯರಿಗೆ ಗೌರವ ಅರ್ಪಿಸಿದರು.

## ತಿದ್ದುಪಡಿ ಹಾಗೂ ಸ್ಪಷ್ಟನೆ

ಭಾನುವಾರ(ಅ.26) ದ 'ಮೈಸೂರು ಮಿತ್ರ' ಸಂಚಿಕೆಯ ಕೊಡಗು ವಿಭಾಗದ 8ನೇ ಪುಟದಲ್ಲಿ ಜೀಪ್– ಬೈಕ್ ಡಿಕ್ಕಿ ಸವಾರ ಸಾವು ಸುದ್ದಿಯಲ್ಲಿ ಅಪಘಾತದಲ್ಲಿ ಸಾವಿಗೀಡಾದ ಸುಂದರ ನಗರದ ನಾಗರಾಜರ ಬದಲು ಕೊಡಗು ಜಿಲ್ಲಾ ಏಲಕ್ಕಿ ಮಾರಾಟ ಸಹಕಾರ ಸಂಘದ ಅಧ್ಯಕ್ಷ ಸೂದನ ಎಸ್.ಈರಪ್ಪ ಅವರ ಭಾವಚಿತ್ರ ಪ್ರಕಟವಾಗಿದೆ ಕಣ್ತಪ್ಪಿನಿಂದಾದ ಈ ಪ್ರಮಾದಕ್ಕೆ ವಿಷಾದಿಸುತ್ತೇವೆ.

## ನಿಧನ

### ಎಂ.ಕೃಷ್ಣಭಟ್



ಕುಶಾಲನಗರ, ಅ.27– ತಾಲೂಕಿನ ಕಣಿವೆ ಸಮೀಪದ ಸೀಗೆಹೊಸೂರು ಬಳಿಯ ಮಲ್ಲೇನಹಳ್ಳಿಯಲ್ಲಿ ನೆಲೆಸಿದ್ದ ಹೋಟೆಲ್ ಉದ್ಯಮಿಯಾಗಿದ್ದು ಕೃಷಿಕರಾಗಿದ್ದ ಎಂ.ಕೃಷ್ಣಭಟ್( 91) ಅವರು ಭಾನುವಾರ ರಾತ್ರಿ ನಿಧನ ಹೊಂದಿದರು. ಮೃತರು ಈ ಹಿಂದೆ ಹೆಬ್ಬಾಲೆ ಗ್ರಾಮದಲ್ಲಿ ಹೋಟೆಲ್ ಉದ್ಯಮ ನಡೆಸುತ್ತಿದ್ದರು. ಮೃತರು ಓರ್ವ ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತಿಮ ಸಂಸ್ಕಾರವು ಸೋಮವಾರ ಮಲ್ಲೇನಹಳ್ಳಿಯಲ್ಲಿ ಅವರ ಜಮೀನಿನಲ್ಲಿ ನಡೆಯಿತು.

### ತಾರಾ ಸೋಮಯ್ಯ



ನಾಪೋಕ್ಲು, ಅ.27–ಮಡಿಕೇರಿ ಮುತ್ತಪ್ಪ ದೇವಾಲಯದ ಸಮೀಪ ನಿವಾಸಿ ದಿವಂಗತ ಬಿದ್ದಂಡ ಸೋಮಯ್ಯ(ತಿಲಕ್) ಅವರ ಧರ್ಮಪತ್ನಿ ತಾರಾ ಸೋಮಯ್ಯ (82) ಭಾನುವಾರ ನಿಧನರಾದರು.

ಮೃತರ ಅಂತ್ಯಕ್ರಿಯೆ ಸೋಮವಾರ ಮಡಿಕೇರಿ ಕೊಡವ ಸಮಾಜದ ರುದ್ರ ಭೂಮಿಯಲ್ಲಿ ಜರುಗಿತ್ತು. ಮೃತರುಇಬ್ಬರು ಪುತ್ರಿಯರು ಹಾಗೂ ಬಂಧು ಮಿತ್ರರನ್ನು ಅಗಲಿದ್ದಾರೆ.

### ಪಾರ್ವತಿ (ರತಿ)



**ನಾಪೋಕ್ಲು:** ಇಲ್ಲಿಗೆ ಸಮೀಪದ ಬಲ್ಲಮಾವಟ್ಟಿ ಗ್ರಾಮದ ನಿವಾಸಿ ಹೊಸೋಕ್ಲು ದಿ. ಪೂಣಚ್ಚ ಅವರ ಧರ್ಮಪತ್ನಿ ಪಾರ್ವತಿ (57) ಭಾನುವಾರ ದೈವಾಧೀನರಾದರು. ಮೃತರ ಅಂತ್ಯಕ್ರಿಯೆ ಸೋಮವಾರ ಹೊಸೋಕ್ಲು ಕುಟುಂಬಸ್ಥರ ರುದ್ರಭೂಮಿಯಲ್ಲಿ ಜರುಗಿತು. ಮೃತರು ಇಬ್ಬರು ಪುತ್ರರು ಹಾಗೂ ಬಂಧು ಮಿತ್ರರನ್ನು ಅಗಲಿದ್ದಾರೆ.

## ಇಂದು ಸಿಂಚನರಿಂದ 'ಗೋಲ್ಡನ್ ಬುಕ್ ಆಫ್ ರೆಕಾರ್ಡ್'ಗಾಗಿ ಯೋಗಪ್ರದರ್ಶನ



ಶ್ರೀ ಆದಿ ಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮಡಿಕೇರಿ,ಅ.27–ತಾಲೂಕಿನ ಮದೆನಾಡಿನ ಬಿಜಿಎಸ್ ವಿದ್ಯಾಸಂಸ್ಥೆಯ ವಿದ್ಯಾರ್ಥಿನಿ, ಯೋಗಪಟು ಕು.ಸಿಂಚನ ಅವರಿಂದ ಅ.28ರಂದು ವಿದ್ಯಾ ಸಂಸ್ಥೆಯಲ್ಲಿ 'ಗೋಲ್ಡನ್ ಬುಕ್ ಆಫ್ ರೆಕಾರ್ಡ್'ಗಾಗಿ 3 ಯೋಗಾಸನಗಳ ಪ್ರದರ್ಶನ ಕಾರ್ಯಕ್ರಮ ನಡೆಯಲಿದೆ ಎಂದು ಶ್ರೀ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ತಿಳಿಸಿದ್ದಾರೆ.

ಈಗಾಗಲೆ ಕೊಡಗಿನಲ್ಲಿ ವಿಶ್ವ ದಾಖಲೆಯ 2 ಯೋಗ ಪ್ರದರ್ಶನವನ್ನು ಸಿಂಚನ ನೀಡಿದ್ದು, ಇದೀಗ 3ನೇ ಬಾರಿ ವಿಶ್ವ ದಾಖಲೆಯ ಯೋಗ ಪ್ರದರ್ಶನವನ್ನು ನೀಡಲಿದ್ದಾರೆ ಎಂದು ಮೈಸೂರು ಮತ್ತು ಕೊಡಗು ಶಾಖೆಯ ಕಾರ್ಯದರ್ಶಿ ಸ್ವಾಮೀಜಿ ಹೇಳಿದರು.

ಯೋಗಪಟು ಸಿಂಚನಳ ತಾಯಿ ರೇಣುಕಾ ಮಾತನಾಡಿ, ಈ ಬಾರಿ ಸಿಂಚನ ಖಂಡ ಪೀಡಾಸನ ಭಂಗಿಯಲ್ಲಿ 1 ನಿಮಿಷ ಸಮಸ್ಥಿತಿಯಲ್ಲಿ ಇರುವ ಮೂಲಕ ವಿಶ್ವ ದಾಖಲೆಯ ಪ್ರಯತ್ನ ನಡೆಸಲಿದ್ದು, ಧನುರಾಸನದಲ್ಲಿ 1 ನಿಮಿಷಕ್ಕೆ 15 ಬಾರಿ ಸುತ್ತು ಹೊಡೆಯುವ ಹಾಗೂ ಡಿಂಬಾಸನದಲ್ಲಿ 1 ನಿಮಿಷಕ್ಕೆ 10 ಬಾರಿ ಸುತ್ತು ಹೊಡೆಯುವ ಯೋಗಾಸನ ಪ್ರದರ್ಶನ ಮಾಡುವ ಮೂಲಕ ವಿಶ್ವ ದಾಖಲೆ ಮಾಡಲು ಉದ್ದೇಶಿಸಿರುವುದಾಗಿ ಮಾಹಿತಿ ನೀಡಿದರು.

ಸಿಂಚನಳ ಯೋಗ ಪ್ರದರ್ಶನ ಏಷ್ಯಾ ಹೆಡ್ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನ ಮುಖ್ಯ ತೀರ್ಪುಗಾರರಾದ ಡಾ. ಮನೀಶ್ ವೈಷ್ಣೋಯಿ ಉಪಸ್ಥಿತಿಯಲ್ಲಿ ನಡೆಯಲಿದೆ ಸಿಂಚನ ಈ ಹಿಂದೆ 'ಡಿಂಬಾಸನ'ದಲ್ಲಿ 30 ನಿಮಿಷ 5 ಸೆಕೆಂಡ್‌ಗಳ ಕಾಲ ಸಮಸ್ಥಿತಿಯಲ್ಲಿ ಇರುವ ಮೂಲಕ ವಿಶ್ವ ದಾಖಲೆ ಮಾಡಿದ್ದಾಳೆ. ಅದರ ಪ್ರಮಾಣ ಪತ್ರವನ್ನು ಈ ಸಮಾರಂಭದಲ್ಲಿ ನೀಡಲಿದ್ದಾರೆ. ಇಲ್ಲಿಯವರೆಗೆ ಈಕೆ 9 ವಿಶ್ವ ದಾಖಲೆಯ ಯೋಗ ಪ್ರದರ್ಶನ ನೀಡಿದ್ದು, ಇದರಲ್ಲಿ 7 ವಿಶ್ವ ದಾಖಲೆಗೆ ಸೇರ್ಪಡೆಯಾಗಿದೆ ಎಂದು ಹೆಮ್ಮೆಯಿಂದ ನುಡಿದರು.

ಯೋಗ ಶಿಕ್ಷಕ ಕೆ.ಕೆ.ಮಹೇಶ್ ಕುಮಾರ್ ಮಾತನಾಡಿ, ಬಿಜಿಎಸ್ ವಿದ್ಯಾ ಸಂಸ್ಥೆಯ ವಿದ್ಯಾರ್ಥಿನಿ ಸಿಂಚನ ಕೊಡಗಿನ ಅಪರೂಪದ ಯೋಗ ಪ್ರತಿಭೆ. ಈಕೆ ಇದೀಗ ಮತ್ತೊಂದು ಯೋಗಾಸನದ ಮೂಲಕ ವಿಶ್ವದಾಖಲೆ ಮಾಡಲು ಮುಂದಾಗಿರುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಯೋಗಪಟು ಸಿಂಚನ, ತಂದೆ ಕೀರ್ತಿಕುಮಾರ್, ಬಿಜಿಎಸ್ ಶಾಲೆ ಆಡಳಿತಾಧಿಕಾರಿ ಸುಧಾಕರ್ ಇದ್ದರು.

## ಪತ್ತಾಲೋಧಿ ಉತ್ಸವ ಸಂಪನ್ನ

**ನಾಪೋಕ್ಲು:** ಕಾವೇರಿ ತೀರ್ಥೋದ್ಭವ ಕಳೆದು ಪವಿತ್ರ ತುಲಾ (ತೋಲ್ಯಾರ್) ಮಾಸದ ಹತ್ತನೇ ದಿನದ ಉತ್ಸವ ಪತ್ತಾಲೋಧಿ ಆರಾಧನೋತ್ಸವ ಕಕ್ಕಬೆಯ ಪಾಡಿ ಶ್ರೀ ಇಗ್ಗುತಪ್ಪ ದೇವಾಲಯದಲ್ಲಿ ಶ್ರದ್ಧಾ ಭಕ್ತಿಯಿಂದ ಸಂಪನ್ನಗೊಂಡಿತ್ತು.

## ನಾಳೆ ನಗರಸಭೆ ಕೌನ್ಸಿಲ್ ಸಾಮಾನ್ಯ ಸಭೆ

ಮಡಿಕೇರಿ, ಅ.27–ನಗರಸಭೆ ಕೌನ್ಸಿಲ್‌ನ ಸಾಮಾನ್ಯ ಸಭೆಯು ನಗರಸಭೆ ಅಧ್ಯಕ್ಷೆ ಪಿ.ಕಲಾವತಿ ಅಧ್ಯಕ್ಷತೆಯಲ್ಲಿ ಅ.29ರ ಬೆಳಗ್ಗೆ 11 ಗಂಟೆಗೆ ನಗರಸಭೆ ಕೌನ್ಸಿಲ್ ಸಭಾಂಗಣದಲ್ಲಿ ನಡೆಯಲಿದೆ ಎಂದು ಪೌರಾಯುಕ್ತ ಎಚ್.ಆರ್.ರಮೇಶ್ ತಿಳಿಸಿದ್ದಾರೆ.

# ಕರ್ತವ್ಯಲೋಪವೆಸಗುವ ಅಧಿಕಾರಿಗಳ ವಿರುದ್ಧ ಕ್ರಮ : ಸಚಿವ ಖಂಡ್ರೆ ಭರವಸೆ



ಬಂಡೀಪುರದ ಮೇಲುಕಮನಹಳ್ಳಿಯ ಅರಣ್ಯ ಇಲಾಖೆಯ ಕೌಶಲ್ಯ ತರಬೇತಿ ಕೇಂದ್ರದಲ್ಲಿ ರೈತ ಮುಖಂಡ ಹೊನ್ನೂರು ಪ್ರಕಾಶ್ ಮಾತನಾಡಿದರು.

ಗುಂಡ್ಲುಪೇಟೆ, ಅ–27 (ಸೋಮ್.ಜಿ) ಕರ್ತವ್ಯ ಲೋಪ ಮಾಡುವ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳುವುದಾಗಿ ಅರಣ್ಯ ಸಚಿವ ಈಶ್ವರ್‌ಖಂಡ್ರೆ ಭರವಸೆ ನೀಡಿದ್ದಾರೆ.

ತಾಲೂಕಿನ ರೈತ ಸಂಘದವರೊಂದಿಗೆ ಬಂಡೀಪುರದ ಮೇಲುಕಮನಹಳ್ಳಿಯ ಅರಣ್ಯ ಇಲಾಖೆಯ ಕೌಶಲ್ಯ ತರಬೇತಿ ಕೇಂದ್ರದಲ್ಲಿ ನಡೆದ ಸಭೆಯಲ್ಲಿ ರೈತ ಮುಖಂಡ ಹೊನ್ನೂರು ಪ್ರಕಾಶ್ ಮಾತನಾಡಿ, ಬೆಳೆ ಕಾಯುವ ರೈತರ ಬೆಳೆ ಸೇರಿದಂತೆ ಪ್ರಾಣ ಹಾನಿ ಮಾಡ್ತಾ ಇರೋ ಕಾಡು ಪ್ರಾಣಿಗಳಿಗೆ ಕಡಿವಾಣ ಹಾಕಲು ಅರಣ್ಯ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಮಾಡಿದ ಆರೋಪಕ್ಕೆ ಸಚಿವರು ಕರ್ತವ್ಯವೆಸಗುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದೆಂದು ಹೇಳಿದರು.

ಅರಣ್ಯ ಇಲಾಖೆ ಮತ್ತು ರೈತರ ನಡುವೆ ಹೊಂದಾಣಿಕೆ ಇಲ್ಲ ಅರಣ್ಯ ಇಲಾಖೆ ಅಧಿಕಾರಿಗಳು ಯಾವುದೇ ದೂರವಾಣಿ ಕರೆ ಸ್ವೀಕರಿಸಲ್ಲ, ರೈತರ ಸಮಸ್ಯೆಗೆ ಸ್ಪಂದಿಸಲ್ಲ ಹೀಗಾಗಿ ಅರಣ್ಯ ಇಲಾಖೆ ಮತ್ತು ರೈತರ ನಡುವೆ ಸಂಘರ್ಷ ಏರ್ಪಟ್ಟಿದೆ ಎಂದರು, ಮಳೆಗಾಳಿ ಚಳಿಯನ್ನಲೆಕ್ಕಿಸದೆ ರೈತರು ಬೆಳೆ ರಕ್ಷಿಸಿದರೆ ಕ್ಷಣಾರ್ಧದಲ್ಲಿ ಕಾಡಾನೆಗಳಿಂದ ರೈತರ ಬೆಳೆ ನಾಶವಾಗುತ್ತಿದೆ ಎಂದು ಆಪಾದಿಸಿದರು.

ರೈತರ ಮೇಲೆ ಕಾಡು ಪ್ರಾಣಿಗಳು ದಾಳಿ ನಡೆಸಿ ಮಾನವ ಸಾವಿಗೀಡಾದರೆ 1 ಕೋಟಿ ರೂಪಾಯಿ ಪರಿಹಾರ ನೀಡಬೇಕು. ಕಾಡು ಪ್ರಾಣಿಗಳು ಅಸಹಜವಾಗಿ ಸಾವಿಗೀಡಾದರೆ ಅರಣ್ಯ ಇಲಾಖೆ ಅಧಿಕಾರಿಗಳು ರಾಜೀನಾಮೆ ನೀಡಬೇಕು. ಜಾನುವಾರುಗಳು ಸತ್ತರೆ 1 ಲಕ್ಷ ಕುರಿ ಮೇಕೆಗೆ 25 ಸಾವಿರ ಪರಿಹಾರ ನೀಡಬೇಕು. ರೈತರ ಬೆಳೆ ಹಾನಿಯಾದರೆ ಸೂಕ್ತ ಪರಿಹಾರ ನೀಡಬೇಕು, ಮಲೆ ಮಹದೇಶ್ವರ ವನ್ಯ ಧಾಮವನ್ನು ಹುಲಿ ಸಂರಕ್ಷಿತ ಪ್ರದೇಶವಾಗಿ ಮಾಡಬಾರದು, ಕಾಡಿನೊಳಗೆ ಜಾನುವಾರು ಮೇಯಿಸದಂತೆ ವಿಧಿಸಿರುವ ನಿರ್ಬಂಧ ಹಿಂಪಡೆಯಬೇಕು, ಕಾಡಂಚಿನ ಪ್ರಾಣಿಗಳಿಗೆ ಸಾಮೂಹಿಕ ದನದ ಕೊಟ್ಟಿಗೆ ನಿರ್ಮಿಸಿಕೊಡಬೇಕು ಎಂದು ಹೊನ್ನೂರು ಒತ್ತಾಯಿಸಿದರು.

ಅರಣ್ಯ ಸಚಿವ ರೈತರ ಹಕ್ಕೊತ್ತಾಯವನ್ನು ಆಲಿಸಿದ ಸಚಿವ ಈಶ್ವರ್ ಖಂಡ್ರೆ ಜಿಲ್ಲೆಯಲ್ಲಿ ಅತಿ ಹೆಚ್ಚು ಅರಣ್ಯ ಪ್ರದೇಶವಿದ್ದು ಇಲ್ಲಿ ಪ್ರಾಣಿ, ಸಸ್ಯ, ಪಕ್ಷಿ ಪ್ರಭೇದಗಳು ಹೆಚ್ಚಾಗಿ ಜೀವಿಸುತ್ತಿವೆ, ಅರಣ್ಯ ಸಂರಕ್ಷಣೆ ಪ್ರತಿಯೊಬ್ಬರ ಕೆಲಸ, ಮಾನವ ಪ್ರಾಣಿ ಸಂಘರ್ಷ ಅನೇಕ ವರ್ಷಗಳಿಂದ ನಡೆಯುತ್ತಿವೆ, ಪ್ರತಿಯೊಬ್ಬ ಮನುಷ್ಯನ ಪ್ರಾಣ ಅತ್ಯಮೂಲ್ಯ ಹಾಗೆ ಕಾಡು ಪ್ರಾಣಿಗಳ ಸಂರಕ್ಷಣೆಯೂ ಮುಖ್ಯ.

ಅರಣ್ಯ ಸಂರಕ್ಷಣೆ ಕಾಯ್ದೆ ಬಂದ ನಂತರದ ದಿನದಲ್ಲಿ ಕಾಡು ಪ್ರಾಣಿಗಳ ಸಂತತಿ ಮತ್ತು ಸಂಖ್ಯೆ ಹೆಚ್ಚಳವಾಗಿದೆ, ನಿಮ್ಮ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡಲಾಗುವುದು ನಾವು ನಿಮ್ಮಕೆಲಸ ಮಾಡಲು ಇದ್ದು ನಿಮ್ಮ ಸಹಕಾರವೂ ಅತ್ಯಗತ್ಯ ಅರಣ್ಯ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸುತ್ತೇನೆ. ರಾಜ್ಯದಲ್ಲಿ ಮಾನವ ಹಾಗೂ ವನ್ಯಜೀವಿ ಸಂಘರ್ಷ ತಪ್ಪಿಸಲು ರಾಜ್ಯ ಮಟ್ಟದ ನಿರ್ವಹಣಾ ಸಮಿತಿ ರಚನೆ ಕಾಡಿನಿಂದ ಹೊರಬರುವ ಕಾಡು ಪ್ರಾಣಿಗಳ ಮೇಲೆ ನಿಗಾ ಇಡುವ ಕಮಾಂಡ್ ಸೆಂಟರ್ ತೆರೆಯಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ, ಕಾಡಿನಲ್ಲಿ ಸಂಪೂರ್ಣ ಪ್ಲಾಸ್ಟಿಕ್ ನಿಷೇಧ ಮಾಡುವಂತೆ ಸೂಚಿಸಿದರು.

ಮಾನವ ವನ್ಯಜೀವಿ ಸಂಘರ್ಷಕ್ಕೆ ಶಾಶ್ವತ ಪರಿಹಾರದ ಭರವಸೆ ನೀಡಿದ ಸಚಿವ ಈಶ್ವರಖಂಡ್ರೆ, ಮಹದೇಶ್ವರಬೆಟ್ಟದಲ್ಲಿ ಹುಲಿ ಹತ್ಯೆ ಪ್ರಕರಣ ಆರೋಪಿಗಳನ್ನು ಬಂಧಿಸಿದ್ದು ಇಂತಹ ಪ್ರಕರಣಗಳು ಮರುಕಳಿಸದಂತೆ ತಂಡ ರಚಿಸಲಾಗಿದೆ ಎಂದರು.

ಸಭೆಯಲ್ಲಿ ಶಾಸಕ ಗಣೇಶ ಪ್ರಸಾದ್, ಅನಿಲ್ ಚಿಕ್ಕಮಾದು, ಡಿಸಿ ಶಿಲ್ಪಾ ನಾಗ್, ಎಸ್‌ಪಿ ಕವಿತಾ, ಅರಣ್ಯ ಇಲಾಖೆ ಅಧಿಕಾರಿಗಳು ಭಾಗಿಯಾಗಿದ್ದರು.

# ರಸ್ತೆ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲು ಅಧಿಕಾರಿಗಳಿಗೆ ಆದೇಶ




ದಿಶಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಸಂಸದ ಸುನೀಲ್ ಬೋಸ್ ಮಾತನಾಡಿದರು.

ಚಾಮರಾಜನಗರ, ಅ.27– ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಜಿಲ್ಲೆಯಲ್ಲಿ ನಿರ್ಮಾಣವಾಗಿರುವ ರಸ್ತೆಗಳಲ್ಲಿ ಅವೈಜ್ಞಾನಿಕ ರಸ್ತೆವಿಭಜಕ(ಡಿವೈಡರ್) ಗಳಲ್ಲಿನ ಲೋಪಗಳನ್ನು ಸರಿಪಡಿಸಿ ರಸ್ತೆ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುವಂತೆ ಸಂಸದ ಸುನೀಲ್ ಬೋಸ್, ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ (ದಿಶಾ) ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯ ಅಭಿವೃದ್ಧಿ ಹಿತದೃಷ್ಟಿಯಿಂದ ಉತ್ತಮ ರಸ್ತೆಗಳನ್ನು ನಿರ್ಮಿಸಲಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಆಗ್ಗಿಂದಾಗ್ಗೆ ಖುದ್ದು ಭೇಟಿ ನೀಡಿ ಅಲ್ಲಿನ ಅವ್ಯವಸ್ಥೆಗಳನ್ನು ಪರಿಶೀಲಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ಮುಂದಾಗುವಂತೆ ಕಟ್ಟು ನಿಟ್ಟಾಗಿ ಸೂಚಿಸಿದರು.

ಸಂತೇಮರಹಳ್ಳಿಯಿಂದ ಸತ್ತೇಗಾಲದವರೆಗೆ ನಿರ್ಮಿಸಿರುವ ರಸ್ತೆಯಲ್ಲಿ ಕೆಲವೆಡೆ ರಸ್ತೆ ವಿಭಜಕಗಳು, ರಸ್ತೆ ಡುಬ್ಬಗಳು, ಸೇತುವೆ ಕಾಮಗಾರಿಗಳು ಅವೈಜ್ಞಾನಿಕವಾಗಿವೆ. ಇದರಿಂದ ಇತ್ತೀಚೆಗೆ ಅಪಘಾತಗಳು ಹೆಚ್ಚಾಗಿ ಅಮಾಯಕ ಜನರು ಪ್ರಾಣ ಕಳೆದುಕೊಳ್ಳುತ್ತಿರುವುದು ಕಂಡುಬಂದಿದೆ. ಸಂತೇಮರಹಳ್ಳಿ, ಸತ್ತೇಗಾಲ, ನರೀಪುರ ಹಾಗೂ ದೊಡ್ಡರಾಯಪೇಟೆ, ಸೋಮವಾರಪೇಟೆ ವೃತ್ತದಲ್ಲಿ ಜಂಕ್ಷನ್ ನಿರ್ಮಿಸಲು ಅಧಿಕಾರಿಗಳಿಗೆ ಕಳೆದ ಸಭೆಯಲ್ಲಿ ತಿಳಿಸಿದ್ದರೂ ಇನ್ನೂ ಸಹ ರಸ್ತೆ ಸುರಕ್ಷತಾ ಕ್ರಮಗಳನ್ನು ಕೈಗೊಂಡಿಲ್ಲ, ಮಾಹಿತಿ ಫಲಕಗಳನ್ನು ಸಮರ್ಪಕವಾಗಿ ಅಳವಡಿಸಿಲ್ಲ, ಇಂತಹ ವಿಳಂಬ ಧೋರಣೆಯನ್ನು ಸಹಿಸುವುದಿಲ್ಲ ಎಂದು ತಾಕೀತು ಮಾಡಿದರು.

ನಗರದ ಜೋಡಿರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಆಸ್ತಿಯ ಮಾಲೀಕರಿಗೆ ನಿಗದಿತ ಪರಿಹಾರ ಪಾವತಿಸಿ ರಸ್ತೆ ವಿಸ್ತರಣೆಗೆ ಕ್ರಮ ವಹಿಸಬೇಕು. ಕೋರ್ಟ್ ರಸ್ತೆ ಕಾಮಗಾರಿಯು ವಿಳಂಬವಾಗಿದೆ. ಕಾಮಗಾರಿ ವಿಳಂಬವಾದಷ್ಟೂ ಮುಂದುವರೆದ ಕಾಮಗಾರಿಗೆ ಹೆಚ್ಚುವರಿ ಅನುದಾನ ಬೇಕಾಗುವುದರಿಂದ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಹಾಗೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಯಾವುದೇ ಸಬೂಬು ಹೇಳದೇ ರಸ್ತೆ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು. ಕೆಲಸ ಮಾಡದ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸುವಂತೆ ನಿರ್ದೇಶನ ನೀಡಿದರು.

ಜಿಲ್ಲೆಯ ಹನೂರು ಭಾಗ ಹಾಗೂ ಕಾಡಂಚಿನ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದೆ. ಕುರಟ್ಟಿ ಹೊಸೂರು, ಪಳನಿಮೇಡು, ಕೌದಳ್ಳಿ ಭಾಗದಲ್ಲಿ ಅಂತರ್ಜಲ ಕುಸಿದಿದ್ದು, ಅಲ್ಲಿನ ಜನರ ಸಮಸ್ಯೆ ಪರಿಹರಿಸಲು ಅಧಿಕಾರಿಗಳು ಮುಂದಾಗಬೇಕು. ಅಮೃತ ನಗರೋತ್ಥಾನ ಯೋಜನೆಯಡಿ ಮಾಲಂಗಿಯಿಂದ ನಗರಕ್ಕೆ ನೀರು ತರುವ ಟೆಂಡರ್ ಅನುಮೋದನೆಯಾಗಿದ್ದು, ಕಾಮಗಾರಿ ತ್ವರಿತವಾಗಿ ಆಗಬೇಕು. ಜಿಲ್ಲೆಯ ಯಾವುದೇ ಭಾಗದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ತಾಲೂಕು ಪಂಚಾಯಿತಿ ಅಧಿಕಾರಿಗಳು ಮುನ್ನೆಚ್ಚರಿಕೆ ವಹಿಸಬೇಕು. ಜಲಜೀವನ್ ಮಿಷನ್ ಯೋಜನೆ ಕಾಮಗಾರಿಗೆ ಅರಣ್ಯ ಅಧಿಕಾರಿಗಳು ಅಡ್ಡಿಪಡಿಸದೇ ಸಹಕಾರ ನೀಡಬೇಕು ಎಂದರು.

ಕೃಷಿ, ತೋಟಗಾರಿಕೆ, ಆಹಾರ, ಸಮಾಜ ಕಲ್ಯಾಣ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ನರೇಗಾ, ಶಿಕ್ಷಣ, ಸ್ವಚ್ಛ ಭಾರತ್ ಮಿಷನ್, ಗ್ರಾಮೀಣಾಭಿವೃದ್ಧಿ, ಗಣಿ ಮತ್ತು ಭೂವಿಜ್ಞಾನ, ಚೆಸ್ಕಾಂ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲಿಸಿದ ಸಂಸದರು ಜಿಲ್ಲೆಯ ಅಭಿವೃದ್ದಿಗಾಗಿ ಜಿಲ್ಲಾಮಟ್ಟದ ಎಲ್ಲಾ ಅಧಿಕಾರಿಗಳು ಒಂದು ತಂಡವಾಗಿ ಕೆಲಸ ಮಾಡಬೇಕು. ಜಿಲ್ಲೆಯ ಪ್ರಗತಿಗೆ ಹೆಚ್ಚಿನ ಪರಿಶ್ರಮ ಹಾಕಬೇಕು ಎಂದು ಸಲಹೆ ಮಾಡಿದರು.

ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಪಂ ಸಿಇಓ ಮೋನಾ ರೋತ್, ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಅಕ್ಷಯ್ ಪ್ರಕಾಶ್ ಸಭೆಯಲ್ಲಿ ಉಪಸ್ಥಿತರಿದ್ದರು.

## ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಸಂತೆಮರಹಳ್ಳಿಯ ಕೃತಿಕಾ



**ಚಾಮರಾಜನಗರ:** ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನಡೆದ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ರಾಜ್ಯಮಟ್ಟದ 14 ರಿಂದ 17 ವರ್ಷದ ಬಾಲಕ–ಬಾಲಕಿಯರ ಫೆನ್ಸಿಂಗ್ ಸ್ಪರ್ಧೆಯಲ್ಲಿ ಸಂತೆಮರಹಳ್ಳಿಯ ಕೃತಿಕಾ EPPE ವಿಭಾಗದಲ್ಲಿ ಚಿನ್ನದ ಪದಕವನ್ನು ಗಳಿಸಿದ್ದಾರೆ.

ಪ್ರಸ್ತುತ ಕೃತಿಕಾ ಲೋಟಸ್ ಆಂಗ್ಲ ಮಾಧ್ಯಮ ಶಾಲೆಯ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ತರಬೇತುದಾರ ಪವನ್ ಮಾರ್ಗದರ್ಶನದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದರು. ಅವರ ಸಾಧನೆಯ ಹಿನ್ನೆಲೆಯಲ್ಲಿ, ಮಹಾರಾಷ್ಟ್ರದಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಫೆನ್ಸಿಂಗ್ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಕೃತಿಕಾ ಅವರ ಈ ಅದ್ಭುತ ಸಾಧನೆಯ ಹಿನ್ನೆಲೆಯಲ್ಲಿ ಶಾಲಾ ಆಡಳಿತ ಮಂಡಳಿ, ಶಿಕ್ಷಕರು ಹಾಗೂ ಸಂತೆಮರಹಳ್ಳಿಯ ಗ್ರಾಮಸ್ಥರು ಅಭಿನಂದನೆಗಳನ್ನು ತಿಳಿಸಿದ್ದಾರೆ.

## ಜಿಲ್ಲಾ ಉಸ್ತುವಾರಿ ಸಚಿವರ ಕಾರು ಅಡ್ಡಗಟ್ಟಿ ಮಹಿಳೆಯರ ಪ್ರತಿಭಟನೆ



ಜಿಲ್ಲಾ ಉಸ್ತುವಾರಿ ಸಚಿವರ ಕಾರನ್ನು ಜ್ಯೋತಿಗೌಡಪುರ ಗ್ರಾಮದ ಮಹಿಳೆಯರು ಅಡ್ಡಗಟ್ಟಿ ಪ್ರತಿಭಟನೆ ನಡೆಸಿದರು.

ಚಾಮರಾಜನಗರ,ಅ.27– ತಾಲೂಕಿನ ಜ್ಯೋತಿಗೌಡಪುರ ಗ್ರಾಮಕ್ಕೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವರ ಕಾರನ್ನು ಗ್ರಾಮದ ಮಹಿಳೆಯರು ಅಡ್ಡಗಟ್ಟಿ ಪ್ರತಿಭಟನೆ ನಡೆಸಿದರು.

ಕಾರು ಅಡ್ಡಗಟ್ಟಿದ ಪ್ರತಿಭಟನಾ ಮಹಿಳೆಯರು, ಘಟನೆ ನಡೆದು ಮೂರ್ನಾಲ್ಕು ದಿನಗಳು ಕಳೆದರೂ ಇನ್ನೂ ಕೃತ್ಯವೆಸಗಿದ ಕಿಡಿಗೇಡಿಗಳನ್ನು ಬಂಧಿಸಿಲ್ಲ. ಕೂಡಲೇ ಆರೋಪಿಗಳನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು.

ಪ್ರಕರಣ ಸಂಬಂಧ ಪೊಲೀಸರು ಅಮಾಯಕರನ್ನು ವಿಚಾರಣೆ ಮಾಡುತ್ತಿದ್ದಾರೆ ಇದರಿಂದ ಗ್ರಾಮದ ಯುವಕರು ಭಯಭೀತರಾಗಿದ್ದಾರೆ. ಹೀಗಾಗಿ, ಪೊಲೀಸರಿಗೆ ಸಚಿವರು ಸೂಕ್ತ ನಿರ್ದೇಶನ ನೀಡಬೇಕು. ನಿಜವಾದ ಆರೋಪಿಗಳನ್ನು ಬಂಧಿಸುವಂತೆ ಸೂಚನೆ ನೀಡಬೇಕು ಎಂದು ತಿಳಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಅವರು ಪ್ರತಿಭಟನಾ ನಿರತ ಮಹಿಳೆಯರ ಮನವೊಲಿಸುವಲ್ಲಿ ಯಶಸ್ವಿಯಾದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಮಾತನಾಡಿ, ಪ್ರಕರಣ ಸಂಬಂಧ ಎಲ್ಲಾ ಆಯಾಮಗಳಿಂದಲೂ ತನಿಖೆ ಮಾಡಲಾಗುತ್ತಿದ್ದು, ಶೀಘ್ರವೇ ಆರೋಪಿಗಳನ್ನು ಬಂಧಿಸಿ, ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಬಳಿಕ ಸಚಿವರ ಕಾರು ತೆರಳಲು ಅನುವು ಮಾಡಿಕೊಡಲಾಯಿತು. ಪ್ರತಿಭಟನೆಯಲ್ಲಿ ಜ್ಯೋತಿಗೌಡನಪುರ ಗ್ರಾಮದ ಮಹಿಳೆಯರು ಹಾಗೂ ಇತರರು ಇದ್ದರು.

## ಅಜ್ಜೀಪುರ ಅಂಬೇಡ್ಕರ್ ಭವನಕ್ಕೆ 50 ಲಕ್ಷ ರೂ: ಬೋಸ್



ಚಾಮರಾಜನಗರ,ಅ.27– ಅಜ್ಜೀಪುರದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಲು 50 ಲಕ್ಷ ರೂ. ಅನುದಾನ ನೀಡುವುದಾಗಿ ಸಂಸದ ಸುನೀಲ್ ಬೋಸ್ ಭರವಸೆ ನೀಡಿದ್ದಾರೆ.

ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಭವನಕ್ಕೆ ತಮ್ಮ ಸಂಸದರ ನಿಧಿಯಿಂದ 50 ಲಕ್ಷ ರೂ.ಗಳನ್ನು ನೀಡುವುದಾಗಿ ಪ್ರಕಟಿಸಿದ್ದನ್ನು ಕಂಡು ಗ್ರಾಮದ ಪರಿಶಿಷ್ಟ ಸಮುದಾಯದ ಸದಸ್ಯರು ಸಂಸದರನ್ನು ಅಭಿನಂದಿಸಿದರು.

ಹನೂರು ವಿಧಾನಸಭಾ ಕ್ಷೇತ್ರದ ಅಜ್ಜೀಪುರಕ್ಕೆ ಭೇಟಿ ನೀಡಿದ್ದ ಅವರು ಅಲ್ಲಿ ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಪ್ರತಿಮೆ ಕಾಮಗಾರಿ ವೀಕ್ಷಿಸಿ ನಂತರ ಜಿ.ಪಂ. ಅಧಿಕಾರಿ ಪ್ರದೀಪ್ ಕುಮಾರ್, ರಮ್ಯರವರ ನಿವಾಸಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಭರವಸೆ ನೀಡಿದರು. ಡಿಸಿಸಿ ಕಾರ್ಯದರ್ಶಿ ಕುಮಾರ್, ಕಾಂಗ್ರೆಸ್ ಮುಖಂಡರಾದ, ರಾಜಮ್ಮ, ಪಾರ್ವತಮ್ಮ, ಸುಮ, ಚಂದನ್ ಹನೂರಿನ ಪ್ರವೀಣ್, ಮತ್ತು ಅಜ್ಜೀಪುರದ ಗ್ರಾಮಸ್ಥರು ಹಾಜರಿದ್ದರು.

## ವಿಶ್ವದಲ್ಲಿ ಪೋಲಿಯೊ ನಿಯಂತ್ರಣಕ್ಕೆ ರೋಟರಿ ಕೊಡುಗೆ ಅಪಾರ

**ಯಳಂದೂರು:** ರೋಟರಿ ಕ್ಲಬ್ ವಿಶ್ವ ಮಟ್ಟದಲ್ಲಿ ಪೋಲೀಯೊವನ್ನು ಬುಡ ಸಮೇತ ನಿರ್ಮೂಲನೆಗೊಳಿಸಲು ಪಣ ತೊಟ್ಟಿದ್ದು ಇದಕ್ಕಾಗಿ ನಿರಂತರವಾಗಿ ಪ್ರಾಮಾಣಿಕವಾಗಿ ದುಡಿಯುತ್ತಿದೆ ಎಂದು ರೋಟರಿ ಕ್ಲಬ್ ಆಫ್ ಗ್ರೀನ್‌ವೇ ತಾಲೂಕು ಅಧ್ಯಕ್ಷ ವೈ.ಜಿ. ನಿರಂಜನ್ ತಿಳಿಸಿದ್ದಾರೆ.

ವಿಶ್ವ ಆರೋಗ್ಯ ದಿನಾಚರಣೆ ನಿಮಿತ್ತ ನಡೆದ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ಮಾತನಾಡಿ, ಪೋಲೀಯೊ ಒಂದು ಮಾರಣಾಂತಿಕ ಕಾಯಿಲೆಯಾಗಿದೆ. ಈ ಅಭಿಯಾನಕ್ಕೂ ಮುಂಚೆ ವಿಶ್ವಾದ್ಯಂತ ಕೋಟ್ಯಾಂತರ ಮಕ್ಕಳು ಈ ರೋಗದಿಂದ ಬಳಲುತ್ತಿದ್ದರು. ರೋಟರಿ ಕ್ಲಬ್‌ಸಂಸ್ಥೆ ಇದನ್ನು ವಿಶ್ವದಿಂದ ದೂರವಿಡಲು ಪಣ ತೊಟ್ಟಿ ಕೆಲಸ ಮಾಡುತ್ತಿದೆ ಎಂದರು.

ಕ್ಲಬ್‌ನಕಾರ್ಯದರ್ಶಿ ಪುಟ್ಟರಾಜು, ಖಜಾಂಚಿ ಗೌಡಹಳ್ಳಿ ರವಿ, ವೈಕೆ.ಮೋಳೆ ನಾಗರಾಜು, ನಟರಾಜು, ಬಿ.ಟಿ.ಶ್ರೀನಿವಾಸ್ ಇತರಿದ್ದರು.

# ಕಾಡಂಚಿನ ಗ್ರಾಮಗಳಲ್ಲಿ ಮಾನವ–ವನ್ಯಜೀವಿ ಸಂಘರ್ಷಕ್ಕೆ ಅಂತ್ಯ ಹಾಡಿ

**●ಅರಣ್ಯ ಸಚಿವರಲ್ಲಿ ರೈತ ಮುಖಂಡರ ಮನವಿ ●ಹುಲಿ ದಾಳಿಗೆ ಬಲಿಯಾದ ರಾಜಶೇಖರ ಕುಟುಂಬಕ್ಕೆ ಹೆಚ್ಚುವರಿ ಪರಿಹಾರ, ಉದ್ಯೋಗ ಕಲ್ಪಿಸಲು ಆಗ್ರಹ**



ರೈತ ಮುಖಂಡರು ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಅವರಿಗೆ ಮುತ್ತಿಗೆ ಹಾಕಿ ಕಾಡಂಚಿನ ಜನರ ಸಮಸ್ಯೆಗಳ ಬಗ್ಗೆ ವಿವರಿಸಿದರು.



ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರೊಂದಿಗೆ ರೈತ ಮುಖಂಡರು ಕಾಡಂಚಿನ ಜನರ ಸಮಸ್ಯೆ, ವನ್ಯಜೀವಿಗಳ ಉಪಟಳದ ಬಗ್ಗೆ ಮಾಹಿತಿ ನೀಡಿದರು.

ಮೈಸೂರು, ಅ.27(ಎಂಟಿವೈ)– ಹೆಚ್.ಡಿ.ಕೋಟೆ, ಸರಗೂರು ಸೇರಿದಂತೆ ಕಾಡಂಚಿನ ಗ್ರಾಮಗಳಲ್ಲಿ ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಶಾಶ್ವತ ಕ್ರಮ ಕೈಗೊಳ್ಳುವುದೂ ಸೇರಿದಂತೆ ಕಾಡಂಚಿನ ರೈತರ ಹಿತ ಕಾಯುವಂತೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರಿಗೆ ರೈತ ಮುಖಂಡರು ಮನವಿ ಸಲ್ಲಿಸಿದರು.

ಹುಲಿ ದಾಳಿಗೆ ಮೃತಪಟ್ಟ ಸರಗೂರು ತಾಲೂಕಿನ ಮುಳ್ಳೂರು ಸಮೀಪದ ಬೆಣ್ಣೆಗೆರೆ ಗ್ರಾಮದ ರಾಜಶೇಖರ(54) ಅವರ ಅಂತಿಮ ದರ್ಶನ ಪಡೆಯಲು ಇಂದು ಮೈಸೂರಿನ ಸರ್ಕಾರಿ ಮೆಡಿಕಲ್ ಕಾಲೇಜಿನ ಶವಾಗಾರಕ್ಕೆ ಬಂದ ಅರಣ್ಯ ಸಚಿವ ಈಶ್ವರ್‌ಖಂಡ್ರೆ ಅವರಿಗೆ ರೈತ ಮುಖಂಡರು ಮುತ್ತಿಗೆ ಹಾಕಿದರು. ಈ ವೇಳೆ ಪೊಲೀಸರು ಮಧ್ಯಪ್ರವೇಶಿಸಿ, ಅವರನ್ನು ತಡೆಯುವ ಪ್ರಯತ್ನ ಮಾಡಿದರು. ರೈತ ಮುಖಂಡರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಇದನ್ನು ಗಮನಿಸಿದ ಸಚಿವ ಈಶ್ವರ್ ಖಂಡ್ರೆ, ರೈತ ಮುಖಂಡರ ಅಹವಾಲು ಆಲಿಸಲು ಮುಂದಾದರು.

**ಮರಣೋತ್ತರ ಪರೀಕ್ಷೆಗೆ ಮೈಸೂರಿಗೆ ತಂದಿದ್ದಕ್ಕೆ ಆಕ್ಷೇಪ:** ಹುಲಿ ದಾಳಿಗೆ ಬಲಿಯಾದ ರಾಜಶೇಖರ್ ಮೃತದೇಹವನ್ನು ಕಳೆದ ರಾತ್ರಿ ಮರಣೋತ್ತರ ಪರೀಕ್ಷೆಗೆ ಮೈಸೂರಿಗೆ ತರಲಾಗಿದೆ. ಸರಗೂರು ಅಥವಾ ಹೆಚ್.ಡಿ.ಕೋಟೆ ಆಸ್ಪತ್ರೆ ಬಿಟ್ಟು ಮೈಸೂರಿಗೆ ತಂದಿದ್ದಾರೆ. ಅರಣ್ಯ ಸಚಿವರು ಇಲ್ಲಿಗೆ ಬರುತ್ತಾರೆ ಎಂದೇ ಮೈಸೂರಿಗೆ ತರಲಾಗಿದೆ ಎಂದು ರೈತ ಮುಖಂಡರು ದೂರಿದರು.

ಹುಲಿ ದಾಳಿಯಿಂದ ಮೃತಪಟ್ಟ ರಾಜಶೇಖರ ಕುಟುಂಬದವರಿಗೆ ಸರ್ಕಾರ ಘೋಷಿಸಿರುವ 20 ಲಕ್ಷ ರೂ. ಜೊತೆಗೆ ಹೆಚ್ಚುವರಿಯಾಗಿ 10 ಲಕ್ಷ ನೀಡಬೇಕು. ಕುಟುಂಬದ ಓರ್ವ ಸದಸ್ಯರಿಗೆ ಅರಣ್ಯ ಇಲಾಖೆಯಲ್ಲಿ ಉದ್ಯೋಗ ನೀಡಬೇಕು. ಕಾಡಂಚಿನ ಗ್ರಾಮದಲ್ಲಿ ಪದೇ ಪದೆ ನಡೆಯುತ್ತಿರುವ ಮಾನವ–ಪ್ರಾಣಿ ಸಂಘರ್ಷ ತಡೆಗೆ ಕ್ರಮ ಕೈಗೊಳ್ಳದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಹುಲಿ ದಾಳಿಯಂತಹ ಘಟನೆ ಮರುಕಳಿಸದಂತೆ ಕಟ್ಟೆಚ್ಚರ ವಹಿಸಬೇಕು. ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಶಾಶ್ವತ ಪರಿಹಾರ ಕಂಡು ಹಿಡಿಯಬೇಕು ಎಂದು ಆಗ್ರಹಿಸಿದರು.

ಮೃತ ರಾಜಶೇಖರ್ ಅವರ ಪುತ್ರ ಶಿವಾನಂದ್ ಮಾತನಾಡಿ, ನಮ್ಮ ತಂದೆ ಅರಣ್ಯಕ್ಕೆ ಹೋಗಿ ಹುಲಿ ದಾಳಿಗೆ ಬಲಿಯಾಗಿಲ್ಲ. ನಿಮ್ಮ(ಅರಣ್ಯ) ಇಲಾಖೆಯ ಹುಲಿ ಅರಣ್ಯ ಪ್ರದೇಶದಿಂದ 25 ಕಿ.ಮೀ ದೂರ ಬಂದು ಜಮೀನಿನಲ್ಲಿದ್ದವರ ಮೇಲೆ ದಾಳಿ ನಡೆಸಿದೆ. ಹುಲಿ ಅರಣ್ಯದಿಂದ ಹೊರಗೆ ಬರುವುದರಲ್ಲಿ ಯಾರ ನಿರ್ಲಕ್ಷ್ಯವಿದೆಯೋ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

**ಕ್ರಮ ಕೈಗೊಳ್ಳಿ:** ರೈತ ಮುಖಂಡ ಮರಂಕಯ್ಯ ಮಾತನಾಡಿ, ಹುಲಿ ದಾಳಿಗೆ ಒಳಗಾಗಿ ಇಂದು ರೈತರೊಬ್ಬರು ಮೃತಪಟ್ಟಿದ್ದಾರೆ. ಈ ಘಟನೆಗೆ ಯಾರು ಕಾರಣ ಎಂದು ಪತ್ತೆ ಮಾಡಿ, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

**ಸಫಾರಿ ಬಂದ್ ಮಾಡಿ:** ರೈತ ಮುಖಂಡ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಅರಣ್ಯ ಪ್ರದೇಶದಲ್ಲಿ ಸಫಾರಿ ಯಾರಿಗೂ ಬೇಕಾಗಿಲ್ಲ. ರೈತರಿಗೆ ಸಫಾರಿ ಬೇಕಾಗಿಲ್ಲ. ಐಟಿ–ಬಿಟಿಯವರು ಮೋಜು ಮಸ್ತಿಗಾಗಿ ಸಫಾರಿಗೆ ಬರುತ್ತಾರೆ. ಅರಣ್ಯ ಪ್ರದೇಶದಲ್ಲಿ ಸಫಾರಿ ವಾಹನಗಳು ಓಡಾಡುವುದರಿಂದ ಪ್ರಾಣಿಗಳು ಹೊರಗೆ ಬರುತ್ತಿವೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಶಾಸಕ ಅನಿಲ್ ಚಿಕ್ಕಮಾದು, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಡಿಸಿಎಫ್ ಕೆ.ಪರಮೇಶ್, ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಮುಖಂಡರಾದ ಹೊಸೂರು ಕುಮಾರ್, ವರಕೋಡು ಕೃಷ್ಣೇಗೌಡ, ಮಂಜು ಕಿರಣ್, ಗ್ರಾಮಾಂತರ ಕಾಂಗ್ರೆಸ್ ಎಸ್ಸಿ ಘಟಕದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ (ವಾಣಿ) ಹಾಗೂ ಇನ್ನಿತರು ಉಪಸ್ಥಿತರಿದ್ದರು.

### ಎಫ್‌ಎಸ್‌ಎಲ್ ವರದಿಗಾಗಿ ಮೈಸೂರಿಗೆ ಮೃತದೇಹ

ಸರಗೂರು ಹಾಗೂ ಹೆಚ್.ಡಿ.ಕೋಟೆ ಆಸ್ಪತ್ರೆಯಲ್ಲಿ ಶವಾಗಾರದಲ್ಲಿ ಕೋಲ್ಡ್ ಸ್ಟೋರೇಜ್ ಇಲ್ಲದ ಕಾರಣ ಮೃತದೇಹವನ್ನು ಮೈಸೂರಿಗೆ ತರಲಾಗಿದೆ. ಮೃತಪಟ್ಟ 24 ಗಂಟೆಯೊಳಗೆ ಮರಣೋತ್ತರ ಪರೀಕ್ಷೆ ನಡೆಸದಿದ್ದರೆ ಸಾವಿನ ನಿಖರ ಕಾರಣ ತಿಳಿಯುವುದಿಲ್ಲ. ಆ ಕಾರಣದಿಂದಾಗಿ ಮೈಸೂರಿಗೆ ಮೃತದೇಹವನ್ನು ತಂದು ಶೀಥಲಾಗಾರದಲ್ಲಿರಿಸಲಾಗಿದೆ. ಇದರಿಂದ ಎಫ್‌ಎಸ್‌ಎಲ್ ವರದಿ ನಿಖರವಾಗಿ ಬರಲು ಸಾಧ್ಯವಾಗುತ್ತದೆ ಎಂದು ಪೊಲೀಸರು ಸಚಿವರಿಗೆ ಸಮಜಾಯಿಷಿ ನೀಡಿದರು.

### ಸಭೆ ಕರೆಯಲು ಒತ್ತಾಯ

ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಸರಗೂರು ಕಾಡಂಚಿನ ಭಾಗದಲ್ಲಿ ಸ್ಥಳೀಯರ ಸಭೆ ಕರೆಯಬೇಕು. ಈ ಸಭೆಯಲ್ಲಿ ಅರಣ್ಯ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ನಂಜನಗೂಡು, ಗುಂಡ್ಲುಪೇಟೆ, ಹೆಚ್.ಡಿ.ಕೋಟೆ ಶಾಸಕರು, ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು ಹಾಗೂ ರೈತ ಮುಖಂಡರನ್ನು ಆಹ್ವಾನಿಸಬೇಕು. ಅರಣ್ಯ ಪ್ರದೇಶದಲ್ಲಿ ಸಫಾರಿ ನಿಲ್ಲಿಸಬೇಕು. ಕಾಡಂಚಿನಲ್ಲಿ ನಡೆಯುತ್ತಿರುವ ರೆಸಾರ್ಟ್, ಗಣಿಗಾರಿಕೆ ನಿಲ್ಲಿಸಬೇಕು. ಹುಲಿ ದಾಳಿ ನಡೆದ ಸ್ಥಳಕ್ಕೆ ಪೊಲೀಸ್, ಅರಣ್ಯ ಸಿಬ್ಬಂದಿ ಯಾಕೆ ತಡವಾಗಿ ಬಂದಿರುವ ಹಾಗೂ ಮೃತದೇಹ ಯಾಕೆ ಮೈಸೂರಿಗೆ ತಂದರು ಎಂದು ಪ್ರಾಥಮಿಕ ತನಿಖೆ ನಡೆಸಬೇಕು.

- ಬಡಗಲಪುರ ನಾಗೇಂದ್ರ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರೈತಸಂಘ

### ತಪ್ಪಾಗಿದ್ದರೆ ಕ್ರಮ: ಸಚಿವ ಈಶ್ವರ್ ಖಂಡ್ರೆ

ರೈತರಿಂದ ಅಹವಾಲು ಸ್ವೀಕರಿಸಿದ ಬಳಿಕ ಅರಣ್ಯ ಸಚಿವ ಈಶ್ವರ್ ಖಂಡ್ರೆ ಮಾತನಾಡಿ, ಹುಲಿ ದಾಳಿಗೆ ಬಲಿಯಾದ ರಾಜಶೇಖರ ಕುಟುಂಬಕ್ಕೆ ಎಷ್ಟೆಲ್ಲಾ ನೆರವು ನೀಡಬಹುದು ಎಂದು ಪರಿಶೀಲಿಸಲಾಗುತ್ತದೆ. ಈಗಾಗಲೇ 20 ಲಕ್ಷ ರೂ. ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗಿದೆ. ಮೈಸೂರಿಗೆ ಯಾವ ಕಾರಣಕ್ಕೆ ಮೃತದೇಹ ತಂದಿದ್ದಾರೆಯೋ ಪರಿಶೀಲಿಸಲಾಗುತ್ತದೆ. ನಾನು ನೋಡಲೆಂಬ ಕಾರಣದಿಂದ ಮೈಸೂರಿಗೆ ಮೃತದೇಹ ತಂದಿದ್ದೇ ಆದರೆ, ಆ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ. ರೈತ ಮುಖಂಡರು ನೀಡಿರುವ ಮನವಿಯಲ್ಲಿನ ಬೇಡಿಕೆಗಳ ಈಡೇರಿಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ, ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

### ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಂದ ಸಾಂತ್ವನ

ಮಧ್ಯಾಹ್ನ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಶವಾಗಾರಕ್ಕೆ ತೆರಳಿ ಹುಲಿ ದಾಳಿಗೆ ಒಳಗಾಗಿ ಮೃತಪಟ್ಟ ರಾಜಶೇಖರ ಅವರ ಮೃತದೇಹದ ಅಂತಿಮ ದರ್ಶನ ಪಡೆದರು. ಈ ವೇಳೆ ರೈತ ಮುಖಂಡರು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಅವರಿಗೂ ಮನವಿ ಸಲ್ಲಿಸಿದರು. ಬಳಿಕ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಮೈಸೂರಿಗೆ ಯಾವ ಕಾರಣಕ್ಕೆ ಮೃತದೇಹ ತಂದಿದ್ದಾರೆ. ಕಾಡಂಚಿನ ಗ್ರಾಮಗಳಲ್ಲಿ ವನ್ಯಜೀವಿಗಳ ಹಾವಳಿ, ಘಟನಾ ಸ್ಥಳಕ್ಕೆ ಅಧಿಕಾರಿಗಳು ತಡವಾಗಿ ಬಂದಿರುವುದಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ತನಿಖೆ ನಡೆಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು. ಅಲ್ಲದೆ, ಕಾಡಂಚಿನ ಗ್ರಾಮಗಳ ಜನರು ಹಾಗೂ ರೈತ ಮುಖಂಡರೊಂದಿಗೆ ಶೀಘ್ರವೇ ಸಭೆ ಆಯೋಜಿಸಿ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

## ಇಂದು ಇಂಜಿನಿಯರ್ಸ್ ಸಂಸ್ಥೆಯಲ್ಲಿ ಮಧುಮೇಹ ಕುರಿತು ಉಪನ್ಯಾಸ

ಮೈಸೂರು,ಅ.27(ಪಿಎಂ)– ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಮೈಸೂರು ಘಟಕದ ವತಿಯಿಂದ 'ಮಧುಮೇಹ ಹಿಮ್ಮುಖವಾಗುವುದರ ವಾಸ್ತವತೆ ಹಾಗೂ ಮಧುಮೇಹ ನಿವಾರಣೆ' ಕುರಿತು ಅ.28ರಂದು ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರಿನ ಜೆಎಲ್‌ಬಿ ರಸ್ತೆಯ ಇಂಜಿನಿಯರ್ಸ್ ಸಂಸ್ಥೆಯ ಎಸ್.ಪಿ.ಭಟ್ ಹಾಲ್‌ನಲ್ಲಿ ಅಂದು ಸಂಜೆ 6ಕ್ಕೆ ನಡೆಯುವ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀಹರಿ ಡಯಾಬಿಟೀಸ್ ಫೌಂಡೇಷನ್‌ನ ಮಧುಮೇಹ ತಜ್ಞರು ಹಾಗೂ ಹಿರಿಯ ವೈದ್ಯ ಡಾ.ವಿ. ಲಕ್ಷ್ಮಿನಾರಾಯಣ್ ವಿಷಯ ಕುರಿತು ಮಾತನಾಡಲಿದ್ದಾರೆ. ಇವರು ಡಯಾಬಿಟಿಸ್ ಕೇರ್‌ನಲ್ಲಿ ಆಸ್ಟ್ರೇಲಿಯಾ ನ್ಯೂಕ್ಯಾಸಲ್ ಯೂನಿವರ್ಸಿಟಿಯಿಂದ ಗ್ರಾಜುಯೇಟ್ ಡಿಪ್ಲೊಮೇಟ್ ಪದವಿ ಪಡೆದಿದ್ದಾರೆ. ಇಂಜಿಯರ್ಸ್ ಸಂಸ್ಥೆ ಮೈಸೂರು ಘಟಕದ ಅಧ್ಯಕ್ಷ ಡಾ.ಆರ್.ದೀಪು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

### ಹುಟ್ಟುಹಬ್ಬ ಶುಭಾಶಯ



ಮೈಸೂರಿನ ಚಾಮುಂಡಿ ಬೆಟ್ಟದ ಪ್ರಧಾನ ಅರ್ಚಕ ಡಾ.ಎನ್ ಶಶಿಶೇಖರ್ ದೀಕ್ಷಿತ್ ಅವರಿಗೆ ಚಾಮುಂಡಿಬೆಟ್ಟ ಗ್ರಾಮಸ್ಥರು ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಶ್ರೀಧರ್ ದೀಕ್ಷಿತ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಭರತ್, ಅಭಿ, ಮಂಜು ನಾಯಕ, ಮಹದೇವ ಬಿಎಸ್‌ಎನ್‌ಎಲ್ ಮತ್ತಿತರರಿದ್ದರು.

## ಕಾರ್ತಿಕ ಮಾಸದ ಪೂಜಾ ಮಹೋತ್ಸವ; ಶ್ರೀ ಮಲೆ ಮಹದೇಶ್ವರಸ್ವಾಮಿ ಮೆರವಣಿಗೆ



ಮೈಸೂರಿನ ಜನತಾನಗರ–ತೊಣಚಿಕೊಪ್ಪಲಿನಲ್ಲಿ ಸೋಮವಾರ ಮಲೆ ಮಹದೇಶ್ವರ ಸ್ವಾಮಿ ಮೆರವಣಿಗೆ ಜರುಗಿತು.

ಮೈಸೂರು, ಅ.27– ಮೈಸೂರಿನ ಜನತಾನಗರ–ತೊಣಚಿಕೊಪ್ಪಲಿನಲ್ಲಿ ಕಾರ್ತಿಕ ಸೋಮವಾರದಂದು ಶ್ರೀ ಮಲೆ ಮಹದೇಶ್ವರಸ್ವಾಮಿ ಮೆರವಣಿಗೆ ಜರುಗಿತು.

ಶ್ರೀ ಮಲೆ ಮಹದೇಶ್ವರ ಭಕ್ತ ಮಂಡಳಿ ವತಿಯಿಂದ ಆಯೋಜಿಸಲಾಗಿರುವ 23ನೇ ವರ್ಷದ ಶ್ರೀ ಮಲೆ ಮಹದೇಶ್ವರ ಸ್ವಾಮಿಯ ಕಾರ್ತಿಕ ಮಾಸದ ಪೂಜಾ ಮಹೋತ್ಸವದ ಎರಡನೇ ದಿನವಾದ ಇಂದು, ಗಣಪತಿ ಹೋಮ, ಮಹಾರುದ್ರಾಭಿಷೇಕ, ಅಷ್ಟೋತ್ತರ ಸಹಿತ ಮಹಾಮಂಗಳಾರತಿ ನಂತರ ಮೆರವಣಿಗೆ ನೆರವೇರಿಸಲಾಯಿತು.

ದೇವಾಲಯದ ಬಸವ, ಡೊಳ್ಳು ಕುಣಿತ, ಗೊರವರ ಕುಣಿತ, ವೀರಗಾಸೆ, ಬೀಸು ಕಂಸಾಳೆ, ಪೂಜಾ ಕುಣಿತ ಸೇರಿದಂತೆ ವಿವಿಧ ಕಲಾತಂಡಗಳೊಂದಿಗೆ ಶ್ರೀ ಮಲೆ ಮಹದೇಶ್ವರ ಮೆರವಣಿಗೆ ಜನತಾನಗರ ಹಾಗೂ ತೊಣಚಿಕೊಪ್ಪಲಿನ ಪ್ರಮುಖ ಬೀದಿಗಳಲ್ಲಿ ಸಾಗಿತು. ಎಲ್ಲಾ ಮನೆಗಳ ಮುಂದೆ ರಂಗೋಲಿ ಹಾಕಿ, ದೀಪ ಬೆಳಗಿಸಿ ದೇವರಿಗೆ ಪೂಜೆ ಸಲ್ಲಿಸಿದರು.

ನಿನ್ನೆ ದೊಡ್ಡರಸಿನಕೆರೆ ಸಣ್ಣಕ್ಕಿ ರಾಯೇಶ್ವರ ಸ್ವಾಮಿಯ ಬಸವನನ್ನು ಬರಮಾಡಿಕೊಂಡು ಹಾಲರವಿ ಉತ್ಸವ ನಡೆಸಲಾಯಿತು. ನಾಳೆ(ಮಂಗಳವಾರ) ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ ನಂತರ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಸಂಜೆ 6ಕ್ಕೆ ಕಂಸಾಳೆ ನಾಗರಾಜು ಹಾಗೂ ತಂಡದವರು ಶ್ರೀ ಮಲೆ ಮಹದೇಶ್ವರ ಸ್ವಾಮಿ ಭಕ್ತಿ ಗೀತೆ ಹಾಗೂ ಹರಿಕಥೆ ಪ್ರಸ್ತುತಪಡಿಸಲಿದ್ದಾರೆ. ಅ.29ರಂದು ಸಂಜೆ 6ಕ್ಕೆ ಜೂನಿಯರ್ ರಾಜ್‌ಕುಮಾರ್ ಖ್ಯಾತಿಯ ಡೈಲಾಗ್ ಬೀರಪ್ಪ, ಸೋಮಶೇಖರ್ ತಂಡದಿಂದ ಭಕ್ತಿ ಗೀತೆ ಗಾಯನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಇಂದು ದೇವರ ಮೆರವಣಿಗೆಯಲ್ಲಿ ಟ್ರಸ್ಟಿಗಳಾದ ರಾಮಯ್ಯ, ಗುಡ್ಡಪ್ಪ (ರಾಮಣ್ಣ) ಹಾಗೂ ಚಿಕ್ಕಚಿಕ್ಕಣ್ಣ, ಗುಡ್ಡಪ್ಪನವರಾದ ಮಹೇಶ್, ಅಭಿ, ಮಹೇಂದ್ರ, ಪುಟ್ಟಣ್ಣ, ಮಹದೇವಣ್ಣ, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ನಂದನ್ ಗೌಡ, ನಾಗರಾಜು ನಾಗಣ್ಣ ಮತ್ತಿತರರ ಮುಖಂಡರು ಭಾಗವಹಿಸಿದ್ದರು.

## ಕುವೆಂಪುಗೆ 'ಭಾರತರತ್ನ'ಕ್ಕಾಗಿ ಪ್ರಧಾನಿ ಮೋದಿ ಭೇಟಿಗೆ ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ನಿರ್ಧಾರ



ರಾಷ್ಟ್ರಕವಿ ಕುವೆಂಪು ಅವರ ಬಗ್ಗೆ ನವದೆಹಲಿಯಲ್ಲಿ ಕಾರ್ಯಕ್ರಮ ನಡೆಸುವ ಸಂಬಂಧ ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ ಸಭೆ ನಡೆಸಿ, ಚರ್ಚಿಸಲಾಯಿತು.

ಮೈಸೂರು, ಅ.27– ರಾಷ್ಟ್ರಕವಿ ದಿವಂಗತ ಕುವೆಂಪು ಅವರಿಗೆ 'ಭಾರತ ರತ್ನ' ಪ್ರಶಸ್ತಿ ನೀಡುವಂತೆ ಪ್ರಧಾನಿ ಮೋದಿ ಅವರನ್ನು ಭೇಟಿಯಾಗಿ ಒತ್ತಾಯಿಸಲು ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ ನಡೆದ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ಡಿ.12ರಂದು ನವದೆಹಲಿಯಲ್ಲಿ ಕುವೆಂಪು ಕುರಿತ ಅರ್ಥಪೂರ್ಣ ಕಾರ್ಯಕ್ರಮ ಆಯೋಜಿಸಲಿರುವ ಹಿನ್ನೆಲೆಯಲ್ಲಿ ಇಂದು ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಕೈಗೊಂಡ ಈ ನಿರ್ಣಯವನ್ನು ಎಲ್ಲರೂ ಬೆಂಬಲಿಸಿದರು.

ರಾಷ್ಟ್ರಕವಿ ಕುವೆಂಪುರವರ ಸಾಹಿತ್ಯ ಸಾಧನೆ ಹಾಗೂ ಜೀವನಾದರ್ಶ ಕುರಿತಾದ ವಿಚಾರ ಸಂಕಿರಣ, ಕುವೆಂಪುರವರ ಕುರಿತ ಪುಸ್ತಕ ಲೋಕಾರ್ಪಣೆ ಹಾಗೂ ಅವರನ್ನು ಕುರಿತ ಸಾಕ್ಷ್ಯಚಿತ್ರ ಪ್ರದರ್ಶನ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಲಾಯಿತು.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಡಾ.ಶ್ರೀ ನಿಶ್ಚಲಾನಂದ ಸ್ವಾಮೀಜಿ ಸಾನ್ನಿಧ್ಯ, ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಸಮ್ಮುಖ ಹಾಗೂ ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಹೆಚ್.ಕೆ.ರಾಮು ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಸಾಹಿತಿ ಪ್ರೊ.ಸಿ.ನಾಗಣ್ಣ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಪ್ರಸಾರಾಂಗದ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು, ಮಾಜಿ ನಿರ್ದೇಶಕರಾದ ಕೆ.ಟಿ.ವೀರಪ್ಪ, ರಾಮೇಗೌಡ, ವಿಸ್ಮಯ ಪ್ರಕಾಶನದ ಹಾಲತಿ ಸೋಮಶೇಖರ್, ಗಂಗಾಧರಗೌಡ, ಸತೀಶ್ ಜವರೇಗೌಡ, ಯಮುನಾ, ಸುಶೀಲಾ ನಂಜಪ್ಪ, ಪಿ.ಎಸ್.ರಾಜಶೇಖರ್ ಮೂರ್ತಿ, ಮಿರ್ಲೆ ಅಣ್ಣೇಗೌಡ, ಕೆ.ಎಸ್.ಕೃಷ್ಣ, ಜೆ.ಜವರೇಗೌಡ, ಹೆಚ್.ಬಿ.ಸಂಪತ್ತು, ಮಹೇಶ್ ಆರ್., ಬಾಲಕೃಷ್ಣೇಗೌಡ, ಯಾದವ ಹರೀಶ, ಡಾ.ವಸಂತ ಕುಮಾರ ತಿಮಕ್ಲಾಪುರ, ಸ್ವಾಮಿ, ಲಕ್ಷ್ಮೀಕಾಂತ್, ಟಿ.ರಾಜು, ಕೆ.ಕೆ.ಸೋಮಶೇಖರ, ಕೆ.ಎಂ.ಚಂದ್ರೇಗೌಡ, ಶರಣ ದೇವರಾಜು, ಸ್ವಾಮಿ ದೂರ, ಶಿವಲಿಂಗೇಗೌಡ, ಎಂ.ಆರ್.ಚೌಧರಿ, ಪಿ.ಶಿವರಾಮು, ಅರುಣ್ ನಾಯಕ್ ಮತ್ತಿತರರು ಭಾಗವಹಿಸಿ, ಕಾರ್ಯಕ್ರಮ ಸಂಬಂಧ ಸಲಹೆ ಸೂಚನೆ ನೀಡಿದರು.


## ಮುಂದಿನ ಸಿಜೆಐ ನ್ಯಾ. ಸೂರ್ಯಕಾಂತ್ ಸಾಧ್ಯತೆ; ಕೇಂದ್ರಕ್ಕೆ ಶಿಫಾರಸು ಮಾಡಿದ ನ್ಯಾಯಮೂರ್ತಿ ಬಿ.ಆರ್ ಗವಾಯಿ



**ನವದೆಹಲಿ:** ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಸುಪ್ರೀಂಕೋರ್ಟ್‌ನ ಅತ್ಯಂತ ಹಿರಿಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ಹೆಸರನ್ನು ತಮ್ಮ ಉತ್ತರಾಧಿಕಾರಿಯಾಗಿ ಪ್ರಸ್ತಾಪಿಸಿದ್ದು, ಕೇಂದ್ರ ಕಾನೂನು ಸಚಿವಾಲಯಕ್ಕೆ ಈ ಶಿಫಾರಸು ಮಾಡಿದ್ದಾರೆ.

ಸಿಜೆಐ ಬಿ.ಆರ್. ಗವಾಯಿ ಅವರು ನವೆಂಬರ್ 23 ರಂದು ನಿವೃತ್ತರಾಗಲಿದ್ದಾರೆ.

### ಬಂಗಾರಪ್ಪ ಹುಟ್ಟುಹಬ್ಬ; ಹಣ್ಣು–ಹಂಪಲು ವಿತರಣೆ



ಹಿಂದುಳಿದ ವರ್ಗಗಳ ನಾಯಕರಾಗಿದ್ದ ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಬಂಗಾರಪ್ಪನವರ 93ನೇ ಹುಟ್ಟುಹಬ್ಬದ ಅಂಗವಾಗಿ ಮೈಸೂರಿನ ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗದ ವತಿಯಿಂದ ಚೆಲುವಾಂಬ ಆಸ್ಪತ್ರೆಯಲ್ಲಿ ಹಣ್ಣು–ಹಂಪಲು ವಿತರಿಸಲಾಯಿತು. ಈ ವೇಳೆ ವಿಭಾಗದ ಅಧ್ಯಕ್ಷ ಎನ್.ಆರ್.ನಾಗೇಶ್, ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು, ರಾಜ್ಯ ಸಮಿತಿ ಉಪಾಧ್ಯಕ್ಷ ವಿನೋದ್ ರಾಜ್, ಕಾರ್ಯದರ್ಶಿ ರವಿಕುಮಾರ್, ಪ್ರಧಾನ ಕಾರ್ಯದರ್ಶಿ, ಜೆ.ಎಸ್.ನಿಶ್ಚಿತ್. ನಗರ ಓಬಿಸಿ ಘಟಕದ ಲಕ್ಷ್ಮೀನಾರಾಯಣ್, ಹರೀಶ್ ರೆಡ್ಡಿ, ರಾಜ ರೆಡ್ಡಿ, ವಿನೋದ್, ನಾಗರಾಜ್ ಯಾದವ್, ರವಿ ಕುಂಬಾರ್ ಮತ್ತಿತರರಿದ್ದರು.

## ಹುಬ್ಬಳ್ಳಿಯ ಉದ್ಯಮಿ, ಗುತ್ತಿಗೆದಾರ ಆನಂದ ಹೂವಿನಹಡಗಲಿ ಲಾಡ್ಜ್‌ನಲ್ಲಿ ಆತ್ಮಹತ್ಯೆ



**ವಿಜಯನಗರ:** ಹುಬ್ಬಳ್ಳಿ ಮೂಲದ ಗುತ್ತಿಗೆದಾರ ಹಾಗೂ ಹೋಟೆಲ್ ಉದ್ಯಮಿ ಆನಂದ ಉಮೇಶ್ ಹೆಗಡೆ ಅವರು ಹೂವಿನ ಹಡಗಲಿಯ ಲಾಡ್ಜ್‌ವೊಂದರಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಭಾನುವಾರ ಬೆಳಗ್ಗೆ ಹುಬ್ಬಳ್ಳಿಯಿಂದ ಹೂವಿನಹಡಗಲಿ ಪಟ್ಟಣಕ್ಕೆ ಆಗಮಿಸಿದ್ದ ಆನಂದ ಅವರು ದಾಕ್ಷಾಯಣಿ ಲಾಡ್ಜ್‌ನಲ್ಲಿ ಕೊಠಡಿ ಪಡೆದು ತಂಗಿದ್ದರು. ತಾವು ತಂಗಿದ್ದ ಕೋಣೆಯಲ್ಲೇ ಭಾನುವಾರ ರಾತ್ರಿ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಹುಬ್ಬಳ್ಳಿಯ ಭವಾನಿ ನಗರ ನಿವಾಸಿಯಾದ ಆನಂದ ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದು, ಕುಟುಂಬದವರು ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದೇವೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಾವಿಗೆ ಕಾರಣ ಇನ್ನೂ ತಿಳಿದು ಬಂದಿಲ್ಲ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮೈಸೂರು ಡಿಸಿ ಕಚೇರಿ ಮುಂದಿನ ಡಿ.ದೇವರಾಜ ಅರಸ್ ಪ್ರತಿಮೆ ಅನಾವರಣಕ್ಕೆ ನ.1ರ ಗಡುವು

**ಅಂದು ಪ್ರತಿಮೆ ಅನಾವರಣ ಮಾಡದಿದ್ದರೆ ನಾವೇ ಮಾಡುತ್ತೇವೆ; ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಬಿಜೆಪಿ ಮುಖಂಡ ರಘು ಕೌಟಿಲ್ಯ ಎಚ್ಚರಿಕೆ**



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸೋಮವಾರ ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅವರು ಪ್ರತಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಅ.27(ಬಿಎಲ್ ಯು)– ಮೈಸೂರಿನ ಹೊಸ ಜಿಲ್ಲಾಧಿಕಾರಿ ಕಚೇರಿ ಮುಂದೆ ತಂದಿರಿಸಿರುವ ದಿವಂಗತ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಅವರ ಪ್ರತಿಮೆಯನ್ನು ಕನ್ನಡ ರಾಜ್ಯೋತ್ಸವದ ದಿನವಾದ ನವೆಂಬರ್ 1 ರಂದು ಸರ್ಕಾರ ಅನಾವರಣಗೊಳಿಸದಿದ್ದರೆ, ಅಂದು ನಾವೇ ಅನಾವರಣ ಮಾಡುತ್ತೇವೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಗಡುವು ನೀಡಿ ಎಚ್ಚರಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವರಾಜ ಅರಸ್ ಅವರ ಪ್ರತಿಮೆ ಪ್ರತಿಷ್ಠಾಪನೆಗೆ ಸಿದ್ಧವಾಗಿದೆ, ಹೀಗಿರುವಾಗ ಅನಾವರಣ ಮಾಡಲು ಇವರೇಕೆ ತಾತ್ಸಾರ ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು.

ನಾನು ದೇವರಾಜ ಅರಸ್ ಅವರ ಮಾದರಿ ಎಂದು ಹೇಳಿಕೊಳ್ಳುವ ಸಿದ್ದರಾಮಯ್ಯ ಅವರು ಪ್ರತಿಮೆ ಅನಾವರಣ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಈಗ ನಾವು ಸರ್ಕಾರಕ್ಕೆ ಕೊನೆ ಗಡುವು ನೀಡುತ್ತಿದ್ದೇವೆ. ನವೆಂಬರ್ 1 ರಂದು ಪ್ರತಿಮೆ ಅನಾವರಣ ಮಾಡದಿದ್ದರೆ ಅಂದೇ ಪಕ್ಷಾತೀತವಾಗಿ ಶಾಸಕರು, ಸಂಸದರು ಹಾಗೂ ದೇವರಾಜ ಅರಸ್ ಅಭಿಮಾನಿಗಳೆಲ್ಲಾ ಸೇರಿ ಅನಾವರಣ ಮಾಡುತ್ತೇವೆ ಎಂದು ವಿಶ್ವನಾಥ್ ಎಚ್ಚರಿಸಿದರು.

ಮೈಸೂರು ರಾಜ್ಯ ಹೆಸರನ್ನು 'ಕರ್ನಾಟಕ' ಎಂಬುದಾಗಿ ದೇವರಾಜ ಅರಸ್ ಅವರು ಮರು ನಾಮಕರಣ ಮಾಡಿದರು. ಈ ಹಿನ್ನೆಲೆಯಲ್ಲಿ ಕನ್ನಡ ರಾಜ್ಯೋತ್ಸವ ದಿನದಂದು ಅವರ ಪ್ರತಿಮೆ ಅನಾವರಣಗೊಳಿಸಬೇಕು ಎಂದು ಆಗ್ರಹಿಸಿದರು.

ರಾಜರ ಕಾಲದಲ್ಲಿ ನಿರ್ಮಾಣವಾಗಿರುವ ಹಳೆ ಜಿಲ್ಲಾಧಿಕಾರಿಗಳ ಕಚೇರಿ ಇನ್ನು ಗಟ್ಟಿಮುಟ್ಟಾಗಿದೆ. ಆದರೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರು ತಮ್ಮ ಕ್ಷೇತ್ರ ತಿ.ನರಸೀಪುರಕ್ಕೆ ಅನುಕೂಲವಾಗುತ್ತದೆ ಎಂದು ಸಿದ್ಧಾರ್ಥನಗರದಲ್ಲಿ ಹೊಸ ಜಿಲ್ಲಾಧಿಕಾರಿ ಕಚೇರಿ ನಿರ್ಮಾಣ ಮಾಡಿದ್ದಾರೆ ಎಂದು ಆರೋಪಿಸಿದರು.

ಹಳೆ ಜಿಲ್ಲಾಧಿಕಾರಿ ಕಚೇರಿ ಈಗ ಪಾಳು ಬಿದ್ದಿದೆ. ಇಂತಹ ಹಲವು ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಣೆ ಮಾಡಲು ನಮ್ಮ ಸರ್ಕಾರದ ಅವಧಿಯಲ್ಲಿ ಹೆರಿಟೇಜ್ ಕಮಿಟಿ ರಚನೆ ಮಾಡಿದ್ದೆವು. ಆದರೆ ಈ ಕಮಿಟಿ ಕಾರ್ಯ ನಿರ್ವಹಣೆ ಮಾಡದೆ ನಿರುಪಯುಕ್ತವಾಗಿದೆ. ಈಗಲಾದರೂ ಹಳೆ ಜಿಲ್ಲಾಧಿಕಾರಿ ಕಚೇರಿ ಸಂರಕ್ಷಣೆ ಮಾಡಲು ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿದರು.

**ಡಿಕೆಶಿಗೆ ಅಧಿಕಾರ ಹಸ್ತಾಂತರ ಮಾಡಬೇಕು :** ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದೆಹಲಿಗೆ ಹೋಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ವಿಶ್ವನಾಥ್, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಡಿ.ಕೆ.ಶಿವಕುಮಾರ್ ಶ್ರಮಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರು ಡಿ.ಕೆ.ಶಿವಕುಮಾರ್‌ಗೆ ಅಧಿಕಾರ ಹಸ್ತಾಂತರ ಮಾಡಬೇಕು ಎಂದು ವಿಶ್ವನಾಥ್ ಸಲಹೆ ನೀಡಿದರು.

### ಪ್ರತಾಪ್‌ಸಿಂಹ, ಪ್ರದೀಪ್‌ಈಶ್ವರ್‌ನ ಒದ್ದು ಒಳಗೆ ಹಾಕಬೇಕು

ಮಾಜಿ ಸಂಸದ ಪ್ರತಾಪ್ ಸಿಂಹ ಹಾಗೂ ಶಾಸಕ ಪ್ರದೀಪ್ ಈಶ್ವರ್ ಅವರ ಕಿತ್ತಾಟದ ಬಗ್ಗೆ ಪ್ರತಿಕ್ರಿಯೆ ನೀಡಿದ ವಿಶ್ವನಾಥ್ ಅವರು, ಇವರ ರಾಜಕೀಯ ಕಿತ್ತಾಟಕ್ಕೆ ಜನ್ಮ ಕೊಟ್ಟ ತಾಯಿಯನ್ನು ಎಳೆದು ತಂದಿದ್ದಾರೆ. ಇವರಿಬ್ಬರನ್ನು ಒದ್ದು ಒಳಗೆ ಹಾಕಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜಕಾರಣದಲ್ಲಿ ಟೀಕೆ, ಆರೋಪಗಳಿಗೆ ಮಿತಿ ಇರುತ್ತದೆ. ಇದನ್ನು ದಾಟಿ ಇವರಿಬ್ಬರು ವೈಯಕ್ತಿಕ ವಿಚಾರಗಳ ಬಗ್ಗೆ ಒಬ್ಬರಿಗೊಬ್ಬರು ಕೆಸರೆರಚಾಟದಲ್ಲಿ ತೊಡಗಿದ್ದಾರೆ ಎಂದು ಕಿಡಿಕಾರಿದರು. ಒಬ್ಬ ಜನ ಪ್ರತಿನಿಧಿಯಾಗಿ ಜವಾಬ್ದಾರಿಯುತ ಸ್ಥಾನದಲ್ಲಿರುವ ಇವರು ಜನ್ಮ ಕೊಟ್ಟ ತಾಯಿಯನ್ನು ರಾಜಕಾರಣಕ್ಕೆ ಎಳೆದು ತಂದಿದ್ದಾರೆ ಎಂದು ಬೇಸರಿಸಿದರು.

### ದೇವರಾಜ ಅರಸ್ ಕಂಡರೆ ಸಿದ್ದರಾಮಯ್ಯ ಅವರಿಗೇಕೆ ಅಸೂಯೆ!

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಉದ್ಘಾಟನೆಗೆ ಸಿದ್ಧವಾಗಿರುವ ದೇವರಾಜ ಅರಸು ಅವರ ಪ್ರತಿಮೆಯನ್ನು ಅನಾವರಣ ಮಾಡದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರ್ಲಕ್ಷ್ಯ ತೋರಿದ್ದಾರೆ ಎಂದು ಬಿಜೆಪಿ ಹಿಂದುಳಿದ ವರ್ಗಗಳ ಘಟಕದ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಕಿಡಿಕಾರಿದರು.

ಯಡಿಯೂರಪ್ಪ ಅವರು ಸಿಎಂ ಆಗಿದ್ದಾಗ ದೇವರಾಜ ಅರಸ್ ಪ್ರತಿಮೆ ಸ್ಥಾಪನೆಗೆ 92 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದರು. ನಾನು, ರಾಜ್ಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷನಾಗಿದ್ದಾಗ ಪ್ರತಿಮೆ ನಿರ್ಮಾಣಕ್ಕೆ ಚಾಲನೆ ನೀಡಿದ್ದೆ ಎಂದರು. ಆದರೆ ಉದ್ಘಾಟನೆಗೆ ಸಿದ್ಧವಾಗಿರುವ ಪ್ರತಿಮೆ ಅನಾವರಣ ಮಾಡದೆ ನಿರ್ಲಕ್ಷ್ಯ ತೋರಿದ್ದಾರೆ. ದೇವರಾಜ ಅರಸ್ ಅವರನ್ನು ಕಂಡರೆ ಸಿದ್ದರಾಮಯ್ಯ ಅವರಿಗೇಕೆ ಇಷ್ಟೊಂದು ಅಸೂಯೆ ಹಾಗೂ ಅಲಕ್ಷ್ಯ ಎಂದು ರಘು ಕೌಟಿಲ್ಯ ಪ್ರಶ್ನಿಸಿದರು.

ಮೈಸೂರು ಮಿತ್ರ



# ಸಾಗುವಳಿ ಚೀಟಿ ಸೇರಿ ಹಲವು ಬೇಡಿಕೆ ಮುಂದಿಟ್ಟು ರೈತರಿಂದ ಬಾರುಕೋಲು ಚಳುವಳಿ

ನಂಜನಗೂಡು, ಅ.27– ಕೂಡಲೇ ಅನಧಿಕೃತ ಸಾಗುವಳಿ ಚೀಟಿಯನ್ನು ರದ್ದು ಪಡಿಸಿ, ನೈಜ ಭೂ ಉಳುಮೆದಾರ ರೈತರಿಗೆ ಸಾಗುವಳಿ ಚೀಟಿ ನೀಡಬೇಕು ಎಂದು ಒತ್ತಾಯಿಸಿ ರೈತ ಸಂಘದ ಕಾರ್ಯಕರ್ತರು ಸೋಮವಾರ ತಹಸಿಲ್ದಾರ್ ಕಚೇರಿ ಮುಂಭಾಗ ಬಾರುಕೋಲು ಚಳುವಳಿ ನಡೆಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಬಳಿ ಎತ್ತಿನ ಗಾಡಿ, ಟ್ರ್ಯಾಕ್ಟರ್‌ಗಳೊಂದಿಗೆ ಆಗಮಿಸಿದ ನೂರಾರು ಮಂದಿ ರೈತರು ಜಿಲ್ಲಾ ಉಸ್ತುವಾರಿ ಸಚಿವ, ಸ್ಥಳೀಯ ಶಾಸಕರು ಹಾಗೂ ತಾಲೂಕು ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಘೋಷಣೆಗಳನ್ನು ಕೂಗಿದರು. ಬಳಿಕ ಪಾದಯಾತ್ರೆ ಮೂಲಕ ತೆರಳಿ ತಾಲೂಕು ಕಚೇರಿಯ ಮುಂಬಾಗ ಧರಣಿ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಟಿ.ಆರ್.ವಿದ್ಯಾ ಸಾಗರ್ ಮಾತನಾಡಿ, ಮುಖ್ಯಮಂತ್ರಿ ಸಿದ್ಧರಾಮಯ್ಯ ಪ್ರತಿನಿಧಿಸುವ ವರುಣಾ ಕ್ಷೇತ್ರದ ಮೂರು ಹೋಬಳಿಗಳನ್ನು ಒಳಗೊಂಡಿರುವ ನಂಜನಗೂಡು ತಾಲೂಕಿನಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿದೆ. ಬಡವರು ಹಾಗೂ ರೈತರ ಕೆಲಸ ಕಾರ್ಯಗಳನ್ನು ಮಾಡಿಕೊಡಲು ಸತಾಯಿಸುವ ಅಧಿಕಾರಿಗಳು ಮಧ್ಯವರ್ತಿಗಳ ಮೂಲಕ ಯಾವುದೇ ಕೆಲಸಗಳನ್ನು ಸರಾಗವಾಗಿ ಮಾಡುತ್ತಿದ್ದಾರೆ, ಗೂಗಲ್ ಪೇ ಮತ್ತು ಫೋನ್ ಪೇ ಮೂಲಕ ಲಂಚದ ಹಣ ಪಡೆದು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಈ ಬಗ್ಗೆ ಹಲವು ಬಾರಿ ಎಚ್ಚರಿಸಿದರೂ ಅಧಿಕಾರಿಗಳ ಕಾರ್ಯವೈಖರಿ ಬದಲಾಗದಿರುವ ಹಿನ್ನಲೆಯಲ್ಲಿ ರೈತರ ಪ್ರತಿಭಟನೆ ಹಮ್ಮಿಕೊಂಡಿದ್ದು ಈಗಲೂ ಎಚ್ಚೆತ್ತುಕೊಳ್ಳದಿದ್ದಲ್ಲಿ ಮುಂಬರುವ ದಿನಗಳಲ್ಲಿ ಅಧಿಕಾರಿಗಳಿಗೆ ಘೇರಾವ್ ಮಾಡಿ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.



ನಂಜನಗೂಡು ತಾಲೂಕು ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ರೈತ ಸಂಘದ ಕಾರ್ಯಕರ್ತರು ಸೋಮವಾರ ಬಾರುಕೋಲು ಚಳುವಳಿ ನಡೆಸಿದರು.

ರೈತ ಸಂಘದ ರಾಜ್ಯ ಉಪಾಧ್ಯಕ್ಷ ಹಿಮ್ಮಾವು ರಘು, ತಾಲೂಕು ಅಧ್ಯಕ್ಷ ಸತೀಶ್ ರಾವ್ ಮಾತನಾಡಿ, ತಾಲೂಕಿನಲ್ಲಿ ಹಲವು ದಶಕಗಳಿಂದ ಕೃಷಿ ಸಾಗುವಳಿ ನಡೆಸುತ್ತಿರುವ ರೈತರು ನಮೂನೆ 53 ಮತ್ತು 57 ರಲ್ಲಿ ಅರ್ಜಿ ಸಲ್ಲಿಸಿದ್ದು, ಅವರಿಗೆ ಕೂಡಲೇ ಸಾಗುವಳಿ ಚೀಟಿ ನೀಡಬೇಕು ಹಾಗೂ ಹುಲಿ ದಾಳಿಯಿಂದ ಸಾವಿಗೀಡಾಗಿರುವ ರೈತರಿಗೆ 1 ಕೋಟಿ ಪರಿಹಾರ, ಬೆಳೆ ಹಾನಿಗೆ ವೈಜ್ಞಾನಿಕ ಪರಿಹಾರ ಘೋಷಣೆ ಮಾಡಿ 15 ದಿನದಲ್ಲಿ ರೈತರ ಖಾತೆಗೆ ಹಣ ಜಮೆ ಮಾಡಬೇಕು. ಎಲ್ಲಾ ಕೈಗಾರಿಕಾ ಪ್ರದೇಶದಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡಬೇಕು ಎಂಬುದು ಸೇರಿದಂತೆ ಸುಮಾರು 34 ಕ್ಕಿಂತಲೂ ಹೆಚ್ಚು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಆಗಮಿಸದ ಹೊರತಾಗಿ ಪ್ರತಿಭಟನೆ ಹಿಂತೆಗೆದುಕೊಳ್ಳುವುದಿಲ್ಲ ಎಂದು ಪಟ್ಟು ಹಿಡಿದಿದ್ದ ರೈತರು ತಾಲೂಕು ಕಚೇರಿ ಮುಂಭಾಗದಲ್ಲೇ ವಾಸ್ತವ್ಯ ಹೂಡಿದ್ದು, ಅನಿರ್ದಿಷ್ಟಾವಧಿ ಪ್ರತಿಭಟನೆ ಮುಂದುವರೆಸುವುದಾಗಿ ಘೋಷಿಸಿದರು. ಸ್ಥಳದಲ್ಲಿ ನಂಜನಗೂಡು ಪಟ್ಟಣ ಠಾಣೆ ಪೊಲೀಸರು ಹಾಜರಿದ್ದು ಬಂದೋಬಸ್ತ್ ಉಸ್ತುವಾರಿ ವಹಿಸಿದ್ದರು. ಇದೇ ಸಂದರ್ಭ ರೈತರು ಸ್ಥಳದಲ್ಲೇ ಅಡುಗೆ ತಯಾರಿಸಿ, ಊಟ ಮಾಡಿದ್ದಲ್ಲದೆ ಗ್ರಾಮೀಣ ರೈತರ ಸಮಸ್ಯೆಗಳನ್ನು ಧರಣಿ ನಿರತರ ಮುಂದೆ ಮಂಡಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್‌ರಾವ್, ಜಿಲ್ಲಾ ಕಾರ್ಯದರ್ಶಿ ಇಮ್ಮಾವು ರಘು, ಜಿಲ್ಲಾ ಉಪಾಧ್ಯಕ್ಷ ಪ್ರಭುಸ್ವಾಮಿ, ಶಂಕರನಾಯಕ, ದೊಡ್ಡಯ್ಯ, ಶ್ವೇತ, ಸವಿತಾ, ಮನೋಹರ, ಮಾದ ಶೆಟ್ಟಿ, ಸಿದ್ದಪ್ಪಾಜಿ, ನಂಜುಂಡ, ಮೋಹನ, ಫಯಾಜ್, ಮಹದೇವ ಸ್ವಾಮಿ, ಮಹದೇವನಾಯಕ, ನಂಜುಂಡಸ್ವಾಮಿ, ಕೆಂಪಣ್ಣ, ಸಿದ್ದೇಶ್, ಮಹದೇವು, ಮೂರ್ತಿ, ಕತ್ವಾಡಿಪುರ ಶಿವಣ್ಣ, ಮೋಹನ್, ರಂಗಸ್ವಾಮಿ ನಾಯಕ, ಸೇರಿದಂತೆ ಮೈಸೂರು ಚಾಮರಾಜನಗರ ಜಿಲ್ಲೆಯ ಹಲವು ಮಂದಿ ರೈತರು ಭಾಗವಹಿಸಿದ್ದರು.

---

### ಮುಖ್ಯಮಂತ್ರಿಗಳು ದಿನಾಂಕ ನೀಡಿದ ನಂತರ

# ತಿ.ನರಸೀಪುರದಲ್ಲಿ ಕನಕ ಜಯಂತಿ ಆಚರಣೆ

## ಪೂರ್ವಭಾವಿ ಸಭೆಯಲ್ಲಿ ನಿರ್ಣಯ

ತಿ.ನರಸೀಪುರ, ಅ.27– ಶ್ರೀ ಭಕ್ತ ಕನಕದಾಸರ ಜಯಂತಿ ಆಚರಣೆಯನ್ನು ಅದ್ದೂರಿಯಾಗಿ ಅಥವಾ ಸಾಂಪ್ರದಾಯಿಕವಾಗಿ ಆಚರಿಸುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದಿನಾಂಕ ಪಡೆದ ಬಳಿಕ ನಿರ್ಧರಿಸಲು ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ಪೂರ್ವ ಭಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆ ಯಲ್ಲಿ ತಾಲೂಕು ಕೇಂದ್ರವಾದ ಪಟ್ಟಣ ದಲ್ಲಿ ನಿಗದಿತ ದಿನದಂದೇ ಕನಕದಾಸರ ಜಯಂತಿ ಆಚರಿಸಬೇಕಾ ಅಥವಾ ಅದ್ದೂರಿ ಆಯೋಜನೆಗೆ ಮತ್ತೊಂದು ದಿನವನ್ನು ಆಯ್ಕೆ ಮಾಡಬೇಕೆಂಬ ಬಗ್ಗೆ ಸ್ಪಷ್ಟತೆ ಸಿಗಲಿಲ್ಲ. ಮುಖ್ಯಮಂತ್ರಿಗಳು ನರಸೀಪುರಕ್ಕೆ ಆಗಮಿಸುವ ದಿನವನ್ನು ಖಚಿತಪಡಿಸಿಕೊಂಡು ಜಯಂತಿ ಆಯೋಜನೆಗೆ ನಿರ್ಧರಿಸಲು ತೀರ್ಮಾನಿಸಲಾಯಿತು.



ಪೂರ್ವಭಾವಿ ಸಭೆಯಲ್ಲಿ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಮಾತನಾಡಿದರು.

ಸಭೆಯ ಆರಂಭದಲ್ಲಿ ತಾ.ಪಂ ಮಾಜಿ ಸದಸ್ಯ ಎಂ.ರಮೇಶ್ ಮಾತನಾಡಿ, ನ.8 ರಂದು ಮುಖ್ಯಮಂತ್ರಿಗಳನ್ನು ಆಹ್ವಾನಿಸಿ ಶ್ರೀ ಕನಕದಾಸರ ಜಯಂತಿ ಆಚರಣೆ ಮಾಡಬೇಕು. ಈ ಬಗ್ಗೆ ತಾಲೂಕು ಆಡಳಿತ ಮತ್ತು ಕುರುಬರ ಸಂಘದ ಸ್ಪಷ್ಟ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಸರ್ಕಾರದ ಉನ್ನತ ವೈದ್ಯಕೀಯ ಸಂಸ್ಥೆ ಜಯದೇವ ಹೃದ್ರೋಗ ಆಸ್ಪತ್ರೆಗೆ ತಾಲೂಕಿನವರೇ ಆದ ಡಾ.ದಿನೇಶ್ ಅವರು ಮುಖ್ಯಸ್ಥರಾಗಿರುವುದು ಹೆಮ್ಮೆಯ ವಿಚಾರ. ಅವರನ್ನು ತಾಲೂಕು ಆಡಳಿತದಿಂದ ಸನ್ಮಾನಿಸಬೇಕಾಗಿತ್ತು. ಹಾಗಾಗಿ ಕನಕದಾಸರ ಜಯಂತಿಯಂದು ಅವರನ್ನು ಸನ್ಮಾನಿಸಿ ಗೌರವಿಸುವ ಕೆಲಸವನ್ನು ಮಾಡಬೇಕೆಂದು ಮನವಿ ಮಾಡಿದರು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಎಂ.ಎಸ್.ಮಹದೇವಸ್ವಾಮಿ(ಮಹೇಶ್) ಮಾತನಾಡಿ, ಕುರುಬರ ಸಂಘದ ಈಗಿನ ಆಡಳಿತ ಮಂಡಳಿ ಅವಧಿ ಪೂರ್ಣಗೊಳ್ಳುವ ಹಿನ್ನೆಲೆಯಲ್ಲಿ ಶ್ರೀ ಭಕ್ತ ಕನಕದಾಸರ ಜಯಂತಿಯನ್ನು ಅದ್ದೂರಿಯಾಗಿ ನಡೆಸಲು ಸಿಎಂ ಹಾಗೂ ಹಲವು ಗಣ್ಯರನ್ನು ಆಹ್ವಾನಿಸುವ ಬಗ್ಗೆ ಈಗಾಗಲೇ ಆಂತರಿಕ ಸಭೆಯಲ್ಲಿ ನಿರ್ಧರಿಸಿದ್ದೇವೆ. ಸಿದ್ದರಾಮಯ್ಯ ಅವರು ಆಗಮಿಸುವ ದಿನದ ಬಗ್ಗೆ ಸೋಮವಾರ ಸಂಜೆ ಡಾ.ಯತೀಂದ್ರ ಅವರು ಮಾಹಿತಿ ನೀಡಲಿದ್ದಾರೆ. ಬಳಿಕವಷ್ಟೇ ಜಯಂತಿ ಆಚರಣೆಯ ಬಗ್ಗೆ ಸ್ಪಷ್ಟತೆ ಸಿಗಲಿದೆ ಎಂದು ಮಾಹಿತಿ ನೀಡಿದರು.

ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಮಾತನಾಡಿ, ಕನಕದಾಸರ ಜಯಂತಿಗೆ ಮುಖ್ಯಮಂತ್ರಿಗಳು ಬರುವುದಾದರೆ ಜಿಲ್ಲಾಧಿಕಾರಿಗಳು ಪೂರ್ವಭಾವಿ ಸಭೆ ನಡೆಸಿ, ತಾಲೂಕು ಆಡಳಿತಕ್ಕೆ ಸೂಚನೆ ನೀಡುತ್ತಾರೆ. ಹಾಗಾಗಿ ನಾವು ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳಲು ಬರುವುದಿಲ್ಲ. ಸಿಎಂ ಬರುವ ಬಗ್ಗೆ ಮಾಹಿತಿ ನೀಡಿದ ಬಳಿಕವಷ್ಟೇ ಕನಕದಾಸರ ಜಯಂತಿ ಆಚರಣೆಗೆ ನಿರ್ಧರಿಸಲು ಸಾಧ್ಯವೆಂದು ತಿಳಿಸಿದರು.

ತಾಲೂಕು ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು, ತಾ.ಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಮಾಜಿ ಸದಸ್ಯ ರಾಮಲಿಂಗಯ್ಯ, ದಸಂಸ ರಾಜ್ಯ ವಿಭಾಗೀಯ ಸಂಚಾಲಕ ಆಲಗೂಡು ಎಸ್.ಚಂದ್ರಶೇಖರ್, ತಾಲೂಕು ಆರೋಗ್ಯ ಅಧಿಕಾರಿ ಡಾ.ರವಿಕುಮಾರ್, ತೋಟಗಾರಿಕೆ ಸಹಾಯಕ ನಿರ್ದೇಶಕಿ ಶಾಂತ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಎಂ.ರಾಜಣ್ಣ, ಪರಿಶಿಷ್ಟ ವರ್ಗಗಳ ಅಧಿಕಾರಿ ಕೋಮಲ, ಸೆಸ್ಕ್ ಎಇಇ ಕೆ.ವಿ.ವೀರೇಶ್, ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ಕಾರ್ಯದರ್ಶಿ ಬಿ.ಮನ್ಸೂರ್ ಆಲಿ, ಅಕ್ಬರ್ ಪಾಷ, ಕುರುಬರ ಸಂಘದ ನಿರ್ದೇಶಕ ಎಚ್.ಸಿ.ಅರುಣ್ ಕುಮಾರ, ಮುಖಂಡರಾದ ಎ.ಶಿವಕುಮಾರ್ (ಬಡ್ಡು), ಶ್ರೀಕಂಠ, ಮೂಗೂರು ಹರೀಶ, ಕೆಂಪಯ್ಯನಹುಂಡಿ ರಾಜು, ಮನೋಜ್ ಕುಮಾರ್, ಕನ್ನಾಯಕನಹಳ್ಳಿ, ಮರಿಸ್ವಾಮಿ, ಕೋಣಗಹಳ್ಳಿ ನಾಗರಾಜು ಹಾಗೂ ಇತರರು ಇದ್ದರು.

---

## ಸುತ್ತೂರಿನಲ್ಲಿ ಅದ್ದೂರಿ ವಾಲ್ಮೀಕಿ ಜಯಂತಿ ಆಚರಣೆ



ಸುತ್ತೂರಿನಲ್ಲಿ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಉದ್ಘಾಟಿಸಿದರು.

ಸುತ್ತೂರು, ಅ.27– ನಂಜನಗೂಡು ತಾಲೂಕು ಸುತ್ತೂರು ಗ್ರಾಮದಲ್ಲಿ ನಾಯಕ ಜನಾಂಗದ ವತಿಯಿಂದ ಶ್ರೀ ವಾಲ್ಮೀಕಿ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲಾಯಿತು.

ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಈ ಸಂದರ್ಭದಲ್ಲಿ ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ. ಎಸ್.ಸಿ.ಬಸವರಾಜು, ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು, ದೇವರಾಜು ಟಿ ಕಾಟೂರು, ತಾಲೂಕು ನಾಯಕ ಸಂಘದ ಅಧ್ಯಕ್ಷ ನಾಗರಾಜು, ಗ್ರಾಮ ಪಂಚಾಯತಿ ಅಧ್ಯಕ್ಷ ರಂಗಸ್ವಾಮಿ, ಉಪಾಧ್ಯಕ್ಷೆ ಪ್ರತಿಮಾ, ಕಟ್ಟೆಯ ಯಜಮಾನ್ ಗೋವಿಂದ ನಾಯಕರು, ದೊಡ್ಡ ಯಜಮಾನ್ ಸಿದ್ದನಾಯ್ಕರು, ಯಜಮಾನ ರಂಗ ಸ್ವಾಮಿ, ವಾಲ್ಮೀಕಿ ಸಂಘದ ರವಿಕುಮಾರ್, ರೂಪೇಶ್, ಜಿಪಂ ಮಾಜಿ ಸದಸ್ಯ ಸದಾನಂದ, ಬಿಜೆಪಿ ಜಿಲ್ಲಾಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣ, ಹೊನ್ನ ನಾಯಕ ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

---

# ಸಂಘ–ಸಂಸ್ಥೆಗಳು ಸೇವಾ ಮನೋಭಾವದಿಂದ ಕೆಲಸ ಮಾಡಿದರೆ ಸಮಾನತೆ ಸಾಧ್ಯ

### ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ಕೆ.ಜೆ.ಶ್ರೀಧರ ನಾಯಕ ಅಭಿಮತ

ಕೆ.ಆರ್.ನಗರ, ಅ.27–ಸಂಘ–ಸಂಸ್ಥೆಗಳು ಸೇವಾ ಮನೋಭಾವ ದೊಂದಿಗೆ ಬಡ ವರ್ಗದವರನ್ನು ಹುಡುಕಿ ಕೈಲಾದಷ್ಟು ಸೇವೆ ಮಾಡಿದಲ್ಲಿ ಒಂದಷ್ಟು ಸಮಾನತೆ ಕಾಣಲು ಸಾಧ್ಯ ಎಂದು ಬೆಂಗಳೂರು ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ಕೆ.ಜೆ.ಶ್ರೀಧರ ನಾಯಕ ಹೇಳಿದರು.

ಪಟ್ಟಣದ ಪರ್ವ ಫಂಕ್ಷನ್ ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ನೂತನವಾಗಿ ಸಂಘಟಿಸಲಾಗಿರುವ ಎಟಿಎಂ ಗೆಳೆಯರ ಬಳಗ ಚಾರಿಟಬಲ್ ಟ್ರಸ್ಟ್ ಅನ್ನು ಉದ್ಘಾಟಿಸಿ ಮಾತನಾಡಿದರು.

ಇಂದಿನ ದಿನಗಳಲ್ಲಿ ಪ್ರತಿದಿನ ಸಂಘ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಹುಟ್ಟಿದರೂ, ಬೆಳೆಯುವುದರಲ್ಲಿ ಯಡವಟ್ಟು ಮಾಡಿಕೊಂಡು ಅಷ್ಟೇ ವೇಗದಲ್ಲಿ ಮುಚ್ಚಿಕೊಳ್ಳುತ್ತಿವೆ. ಆದರೆ ಇಂದು ಪ್ರಾರಂಭವಾಗಿರುವ ಸಂಸ್ಥೆ ವಿನೂತನ ರೀತಿಯಲ್ಲಿ ಸೇವಾ ಮನೋಭಾವ ಇಟ್ಟುಕೊಂಡು ಅಸ್ತಿತ್ವಕ್ಕೆ ತರಲಾಗಿದ್ದು, ಆರಂಭದಲ್ಲಿಯೆ ವಿಶೇಷಚೇತನರು, ಬಡವರು, ಶಾಲಾ ಮಕ್ಕಳು ಹಾಗೂ ಸಮಾಜದಲ್ಲಿನ ನಿರ್ಗತಿಕರನ್ನು ಹುಡುಕಿ ಅವರಿಗೆ ನೆರವಾಗುತ್ತಿರುವುದು ಶ್ಲಾಘನೀಯ ಎಂದರು.



ಕೆ.ಆರ್.ನಗರದಲ್ಲಿ ಸೋಮವಾರ ಎಟಿಎಂ ಗೆಳೆಯರ ಬಳಗ ಚಾರಿಟಬಲ್ ಟ್ರಸ್ಟ್ ಅನ್ನು ಉದ್ಘಾಟಿಸಲಾಯಿತು.

1996ರಲ್ಲಿ ವ್ಯಾಸಂಗ ಮಾಡಿದ ಹಳೆಯ ವಿದ್ಯಾರ್ಥಿಗಳೆಲ್ಲ ಸೇರಿ ಪ್ರಾರಂಭಿಸಿರುವ ಗೆಳೆಯರ ಬಳಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಸೇವೆಯನ್ನು ಮನದಲ್ಲಿಟ್ಟುಕೊಂಡು ಮುಂದೆ ಬಂದಿರುವವರೇ ಹೆಚ್ಚಾಗಿದ್ದು, ಇಂತಹ ಸಂಸ್ಥೆ ಬೆಳೆದು ಹೆಮ್ಮರವಾಗಿ ಸಮಾಜಕ್ಕೆ ನೆರವಾಗಲಿ ಎಂದು ಹಾರೈಸಿದರು.

ಮೈಸೂರಿನ ಯುವರಾಜ ಕಾಲೇಜು ಪ್ರಾಧ್ಯಾಪಕಿ ಕೋಕಿಲಾ, ಹಂಪಾಪುರದ ಎಂ.ರಾವ್ ಮೆಮೋರಿಯಲ್ ಟ್ರಸ್ಟ್‌ನ ಸ್ವರೂಪರಾಣಿ, ಶಕ್ತಿಧಾಮದ ಉಷಾ, ಮತ್ತಿತರರು ಮಾತನಾಡಿದರು.

ಇದೇ ಸಂದರ್ಭದಲ್ಲಿ ಶಾಲಾ ಮಕ್ಕಳಿಗೆ ಲೇಖನ ಸಾಮಗ್ರಿ, ವಿಶೇಷ ಚೇತನರಿಗೆ ವಿವಿಧ ಸಲಕರಣೆ, ಬಡವರಿಗೆ ಧವಸ ಧಾನ್ಯ, ಹಲವರಿಗೆ ನಗದು ನೀಡಿ ನೆರವಾಗಿದ್ದಲ್ಲದೆ ಸಮಾಜದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಲಾಯಿತು.

ಗೌರವಾಧ್ಯಕ್ಷ ಎಚ್.ಮಂಜುನಾಥ್, ಅಧ್ಯಕ್ಷ ಕೆ.ಎಸ್.ರಾಘವೇಂದ್ರ, ಉಪಾಧ್ಯಕ್ಷ ಕೆ.ಆರ್. ಯೋಗೇಶ್, ಎಸ್.ಆರ್. ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಕೆ.ಎನ್.ಪ್ರಶಾಂತ್, ಕಾರ್ಯದರ್ಶಿ ಮಹಮ್ಮದ್ ಮುಜಾಮಿಲ್, ಸಹ ಕಾರ್ಯದರ್ಶಿ ಜಿ.ಎಸ್.ಪ್ರಸನ್ನ, ಸಂಘಟನಾ ಕಾರ್ಯದರ್ಶಿ ಎಡತೊರೆ ಲೋಕೇಶ್, ಖಜಾಂಚಿ ಸಿ.ಜೆ. ಸುಧೀಶ್ ಕುಮಾರ್, ಸಲಹೆಗಾರ ಪಿ.ಜಗದೀಶ್, ಕೃಷ್ಣ ಕಾನೂನು ಸಲಹೆಗಾರರಾದ ಶಂಕರ, ಸೋಮೇಶ್ ಇನ್ನಿತರರಿದ್ದರು.

---


# ಮನೆ ಹಕ್ಕುಪತ್ರಕ್ಕಾಗಿ ಫಲಾನುಭವಿಗಳ ಅಲೆದಾಟ

## ತಾಲೂಕು ಆಡಳಿತದ ವಿರುದ್ಧ ಆಕ್ರೋಶ

ಸರಗೂರು, ಅ.27– ಮನೆ ಹಕ್ಕುಪತ್ರ ವಿತರಣೆ ದಿನಾಂಕವನ್ನು ಪದೇ ಪದೆ ಮುಂದೂಡುತ್ತಿರುವುದನ್ನು ಖಂಡಿಸಿ ಸರಗೂರು ತಾಲೂಕಿನ ಹೊಸ ಬೀರ್ವಾಳು ಗ್ರಾಮಸ್ಥರು ತಾಲೂಕು ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಘಟನೆ ಶುಕ್ರವಾರ ನಡೆದಿದೆ.

ಇಂದು ಹಕ್ಕುಪತ್ರಗಳಿಗಾಗಿ ತಹಸೀಲ್ದಾರ್ ಮೋಹನಕುಮಾರಿ ಅವರನ್ನು ಗ್ರಾಮಸ್ಥರೊಡಗೂಡಿ ಭೇಟಿ ಮಾಡಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಸಾಮಾಜಿಕ ಹೋರಾಟಗಾರ ಗ್ರಾಮೀಣ ಮಹೇಶ್, ರಾಜ್ಯ ಸರ್ಕಾರ ಎರಡು ವರ್ಷ ಪೂರೈಸಿದ ಸಂದರ್ಭದಲ್ಲಿ ವಿಜಯಪುರದಲ್ಲಿ ನಡೆದ ಸಮಾವೇಶದಲ್ಲಿ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು 1,11,111 ಹಕ್ಕು ಪತ್ರಗಳನ್ನು ವಿತರಿಸುವುದಾಗಿ ಘೋಷಿಸಿದ್ದರು. ಅದರಲ್ಲಿ ಸರಗೂರು ತಾಲೂಕು ಹೊಸಬೀರ್ವಾಳು ಗ್ರಾಮದ 120 ಹಕ್ಕು ಪತ್ರಗಳು ಸಹ ಒಳಗೊಂಡಿವೆ ಎಂದರು.

ಸರ್ಕಾರಿ ಲೆಕ್ಕದಲ್ಲಿ ಈಗಾಗಲೇ ನಮಗೂ ಹಕ್ಕುಪತ್ರಗಳನ್ನು ವಿತರಿಸಲಾಗಿದೆ. ಆದರೆ ಹಕ್ಕು ಪತ್ರಗಳು ಹೊಸಬೀರ್ವಾಳು ಗ್ರಾಮದ ಜನರಿಗೆ ತಲುಪಿಲ್ಲ. ತಾಲೂಕು ಆಡಳಿತದ ಬಳಿ ಹಕ್ಕುಪತ್ರಗಳು ಸಿದ್ದವಾಗಿದ್ದರೂ ಅದನ್ನು ಫಲಾನುಭವಿಗಳಿಗೆ ವಿತರಿಸದೇ ಅಲೆದಾಡಿಸಲಾಗುತ್ತಿದೆ,



ಹಕ್ಕುಪತ್ರಕ್ಕಾಗಿ ಹಲವು ತಿಂಗಳಿಂದ ಅಲೆದಾಡುತ್ತಿರುವ ಫಲಾನುಭವಿಗಳು.

> “ಹೊಸ ಬೀರ್ವಾಳು ಗ್ರಾಮಸ್ಥರ ಹಕ್ಕುಪತ್ರ ವಿತರಣೆಯನ್ನು ತಾಲೂಕು ಆಡಳಿತ ವಿಳಂಬ ಮಾಡಿಲ್ಲ. ಕಾರಣಾಂತರದಿಂದ ಶಾಸಕರು ಬಾರದ ಕಾರಣ ಹಕ್ಕುಪತ್ರ ವಿತರಣೆ ಕಾರ್ಯವನ್ನು ಮುಂದೂಡಲಾಗಿದೆ. ಶಾಸಕರು ತಿಳಿಸಿರುವಂತೆ ನ.1 ರಂದು ಕನ್ನಡ ರಾಜ್ಯೋತ್ಸವದ ದಿನ ಹಕ್ಕು ಪತ್ರವನ್ನು ವಿತರಿಸಲಾಗುವುದು.
> – ಮೋಹನ ಕುಮಾರಿ, ಸರಗೂರು ತಾಲೂಕು ತಹಸೀಲ್ದಾರ್

ಕಳೆದ ಆ.15 ಸ್ವಾತಂತ್ರ ದಿನಾಚರಣೆ ಸಮಾರಂಭದಲ್ಲಿ ಹಕ್ಕುಪತ್ರ ವಿತರಿಸುತ್ತೇವೆ ಎಂದು ಗ್ರಾಮಸ್ಥರನ್ನು ತಾಲೂಕು ಆಡಳಿತ ಆಹ್ವಾನಿಸಿತ್ತು. ಆದರೆ ಅಂದು ಹಕ್ಕುಪತ್ರ ವಿತರಣೆ ಮಾಡಲಿಲ್ಲ. ನಂತರ ಸೆ. 13ರಂದು ಶಾಸಕರ ನೇತೃತ್ವದಲ್ಲಿ ಹಕ್ಕುಪತ್ರ ನೀಡುತ್ತೇವೆ ಕರೆದು, ಗ್ರಾಮಸ್ಥರನ್ನು ಬರಿಗೈಲಿ ವಾಪಸ್ ಕಳುಹಿಸಲಾಯಿತು. ಅ.27ರಂದು ಶಾಸಕರ ಜನಸ್ಪಂದನ ಕಾರ್ಯಕ್ರಮವಿದೆ ಎಲ್ಲರೂ ಬನ್ನಿ ಹಕ್ಕುಪತ್ರಗಳನ್ನು ವಿತರಿಸುತ್ತೇವೆ ಎಂದಿದ್ದರು. ಇಂದು ಸಹ ನಮಗೆ ನಿರಾಸೆಯಾಗಿದೆ. ಶಾಸಕರು ಜನ ಸ್ಪಂದನ ಕಾರ್ಯಕ್ರಮಕ್ಕೆ ಬಾರದ ಕಾರಣ ಇಂದು ಹಕ್ಕು ಪತ್ರಗಳನ್ನು ವಿತರಿಸಲಾಗುತ್ತಿಲ್ಲ ಎಂದು ತಹಸೀಲ್ದಾರ್ ತಿಳಿಸಿರುತ್ತಾರೆ. ನ.1 ರಂದು ನಡೆಯುವ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಹಕ್ಕು ಪತ್ರ ವಿತರಿಸುತ್ತೇವೆ ಎಂದು ತಹಸೀಲ್ದಾರ್ ಹೇಳುತ್ತಿದ್ದಾರೆ. ಮೂರು ನಾಲ್ಕು ಬಾರಿ ಹಕ್ಕು ಪತ್ರ ವಿತರಣಾ ದಿನ ನಿಗದಿ ಮಾಡಿ ಪದೇಪದೆ ಮುಂದೂಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇದೇ ಸಂದರ್ಭದಲ್ಲಿ ಹೊಸಬೀರ್ವಾಳು ಗ್ರಾಮದ ಚನ್ನನಾಯಕ, ಮಹಲಿಂಗಯ್ಯ, ಚಿಕ್ಕಶೆಟ್ಟಿ, ಮಹದೇವಶೆಟ್ಟಿ, ಗೋಪಾಲಚಾರಿ, ಸಿದ್ದನಾಯಕ, ಜಯಪ್ಪ, ಗೋವಿಂದಚಾರಿ, ಲಿಂಗಮ್ಮ, ಲಕ್ಷ್ಮಮ್ಮ ಇನ್ನಿತರರಿದ್ದರು

---

# ನಾಳೆ ಹುಣಸೂರಲ್ಲಿ ವಾಲ್ಮೀಕಿ ಜಯಂತಿ ಅದ್ದೂರಿ ಆಚರಣೆ

ಹುಣಸೂರು, ಅ. 27– ಹುಣಸೂರಿನಲ್ಲಿ ಅ.29ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ತಾಲೂಕು ನಾಯಕರ ಸಂಘ ಮತ್ತು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಅದ್ದೂರಿಯಾಗಿ ಆಚರಿಸಲಾಗುವುದು ಎಂದು ತಾಲೂಕು ನಾಯಕರ ಸಂಘದ ಅಧ್ಯಕ್ಷ ಅಣ್ಣಯ್ಯ ನಾಯಕ ತಿಳಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 9 ಗಂಟೆಗೆ ನಗರದ ಕಲ್ಕುಣಿಕೆ ರಂಗನಾಥ ಬಡಾವಣೆಯ ಶನೈಶ್ಚರ ಸ್ವಾಮಿ ದೇವಸ್ಥಾನದಿಂದ ವಾಲ್ಮೀಕಿ ಭಾವಚಿತ್ರ ಮತ್ತು ನಂದಿ ಕಂಭಕ್ಕೆ ಪೂಜೆ ಸಲ್ಲಿಸಿ. ವಿವಿಧ ಕಲಾ ತಂಡಗಳೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಟು, ಮಧ್ಯಾಹ್ನ 12 ಗಂಟೆಗೆ ಮುನೇಶ್ವರ ಕಾವಲ್ ಮೈದಾನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಮಹರ್ಷಿ ವಾಲ್ಮೀಕಿ ಮಹಾಸಂಸ್ಥಾನ ರಾಜನಹಳ್ಳಿಯ ಶ್ರೀ ಪ್ರಸನ್ನಾನಂದಾ ಸ್ವಾಮೀಜೀ, ಸೇರಿದಂತೆ ಹಲವು ಮಠಾಧೀಶರು ವಹಿಸಲಿದ್ದು, ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಉಪಸ್ಥಿತಿಯಲ್ಲಿ ತಾಲೂಕು ನಾಯಕ ಸಂಘದ ಅಧ್ಯಕ್ಷ ಕೆ.ಎಸ್.ಅಣ್ಣಯ್ಯನಾಯಕ ಅಧ್ಯಕ್ಷತೆ ವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟನೆ ಮಾಡುವರು. ಶಾಸಕ ಜಿ.ಡಿ.ಹರೀಶ್‌ಗೌಡ ಮೆರವಣಿಗೆ ಉದ್ಘಾಟನೆ ಮಾಡಲಿದ್ದು, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಪುಷ್ಪಾರ್ಚನೆ ಮಾಡಲಿದ್ದಾರೆ ಎಂದು ತಿಳಿಸಿದರು.

---

# ಬಸವನಹಳ್ಳಿಯಲ್ಲಿ ದೊಡ್ಡಮ್ಮ, ಚಿಕ್ಕಮ್ಮ ದೇವಸ್ಥಾನ ಉದ್ಘಾಟನೆ



ದೊಡ್ಡಮ್ಮ ಚಿಕ್ಕಮ್ಮ ನೂತನ ದೇವಾಲಯವನ್ನು ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು.

ಬೆಟ್ಟದಪುರ, ಅ.27–ಪಿರಿಯಾಪಟ್ಟಣ ತಾಲೂಕಿನ ಕೆ ಬಸವನಹಳ್ಳಿ ಗ್ರಾಮದಲ್ಲಿ ದೊಡ್ಡಮ್ಮ ಚಿಕ್ಕಮ್ಮ ನೂತನ ದೇವಾಲಯವನ್ನು ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು

ನಂತರ ಮಾತನಾಡಿದ ಅವರು ಗ್ರಾಮಗಳಲ್ಲಿ ದೇವಸ್ಥಾನ ಜನರ ನೆಮ್ಮದಿಯ ತಾಣವಾಗಿವೆ. ಆದುದರಿಂದ ಪ್ರತಿ ಗ್ರಾಮದಲ್ಲೂ ಉತ್ತಮವಾದ ಪರಿಸರದಲ್ಲಿ ದೇವಸ್ಥಾನವನ್ನು ನಿರ್ಮಿಸಿದರೆ ಅವರಿಗೆ ಶಾಂತಿ ಮತ್ತು ಭಕ್ತಿ ಸಂಸ್ಕಾರ ಬೆಳೆಯುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಸಚಿವರು ಹಲವಾರು ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು. ಮರದೂರು ಗ್ರಾಮದಲ್ಲಿ ಹಾಲು ಶಿಥಿಲೀಕರಣ ಘಟಕ, ಮೂಡಲಕುಪ್ಪೆ ಗ್ರಾಮದಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡ, ಗುದ್ದಲಿ ಪೂಜೆ, ಹಲಗನಹಳ್ಳಿ ಗ್ರಾಮದಲ್ಲಿ ನೂತನ ಗ್ರಾಮ ಸಭಾಭವನ ಉದ್ಘಾಟನೆ ಮಾಡಿದರು ಹಾಗೂ ಕಣಗಾಲು ಗ್ರಾಮದಲ್ಲಿ ವೃತ್ತ ಅಭಿವೃದ್ಧಿ ಲೋಕೋಪಯೋಗಿ ಇಲಾಖೆಯಿಂದ ಆಯೋಜಿಸಿದ ವೃತ್ತ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಕಣಗಾಲು ಗ್ರಾಮದಲ್ಲಿ ಆಯೋಜಿಸಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಮತ್ತು ಗ್ರಾಮಸ್ಥರಿಂದ ಅಹವಾಲು ಸ್ವೀಕರಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ವಕ್ತಾರ ಎಂ. ಲಕ್ಷ್ಮಣ್, ಪ್ರಕಾಶ್, ಲೋಕೇಶ್, ಗ್ರಾಪಂ ಉಪಾಧ್ಯಕ್ಷೆ ಮಣಿ ಮಹದೇವ್, ಸದಸ್ಯರಾದ ಡಿ.ಕೆ.ನಟೇಶ್, ಕುಮಾರ ಶೆಟ್ಟಿ, ಆನಂದ್, ತ್ಯಾಗರಾಜು, ಮುಖಂಡರಾದ ತಮ್ಮೇಗೌಡ, ಸೋಮಯ್ಯ, ಶೇಖರ್, ರಾಜಶೇಖರ್, ಪ್ರಭಾಕರ್, ಮಹದೇವ್, ಹರೀಶ್, ಸ್ವಾಮಿಗೌಡ, ಪುಟ್ಟರಾಜೇಗೌಡ, ಸೈಯದ್, ಮೂರ್ತಿ, ಹರೀಶ, ತಹಸೀಲ್ದಾರ್ ನಿಸರ್ಗ ಪ್ರಿಯಾ.ಜೆ, ಲೋಕೋಪಯೋಗಿ ಇಲಾಖೆ ಎಇಇ ಎಂ.ಆರ್‌ವೆಂಕಟೇಶ್, ಎಇ ದಿನೇಶ್, ಪಿಡಿಓ ಗಣೇಶ್ ಸೇರಿದಂತೆ ಗ್ರಾಮಸ್ಥರು, ಅಧಿಕಾರಿಗಳು ಹಾಗೂ ಗ್ರಾಮಸ್ಥರು ಹಾಜರಿದರು.

---

### ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಮೇಲೆ ಶೂ ಎಸೆಯಲು ಯತ್ನ ಪ್ರಕರಣ

# ಆದಿ ಕರ್ನಾಟಕ ಮಹಾಸಭಾದಿಂದ ಪ್ರತಿಭಟನೆ

ಹೆಚ್.ಡಿ.ಕೋಟೆ, ಅ.27– ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯ್ ಅವರ ಮೇಲೆ ವಕೀಲ ಕಿಶೋರ್ ರಾಕೇಶ್ ಶೂ ಎಸೆಯಲು ಪ್ರಯತ್ನಿಸಿದ ಘಟನೆ ಖಂಡಿಸಿ ತಾಲೂಕು ಆದಿಕರ್ನಾಟಕ ಮಹಾಸಭಾ ವತಿಯಿಂದ ಸೋಮವಾರ ಹೆಚ್.ಡಿ. ಕೋಟೆ ಮತ್ತು ಹ್ಯಾಂಡ್ ಪೋಸ್ಟ್ ಬಂದ್ ಕರೆಗೆ ಅಭೂತಪೂರ್ವ ಬೆಂಬಲ ವ್ಯಕ್ತವಾಯಿತು.

ಬೆಳಗ್ಗೆ 6 ಗಂಟೆಗೆ ಪಟ್ಟಣದ ವರ್ತಕರ ಸಂಘ, ಬೀದಿ ಬದಿ ವ್ಯಾಪಾರಸ್ಥರು ತಮ್ಮ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದರು. ಹೆಚ್.ಡಿ.ಕೋಟೆ ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದಿಂದ ಬೃಹತ್ ಮೆರವಣಿಗೆ ಮುಖ್ಯ ರಸ್ತೆಯಲ್ಲಿ ಸಾಗಿ ಬಾಪೂಜಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ತಾಲೂಕು ಆಡಳಿತ ಸೌಧದಲ್ಲಿ ಸೇರಿದ ವಿವಿಧ ಸಂಘಟನೆಯ ಮುಖಂಡರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.




ಹೆಚ್.ಡಿ.ಕೋಟೆ ತಾಲೂಕು ಆದಿಕರ್ನಾಟಕ ಮಹಾಸಭಾ ವತಿಯಿಂದ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯ್ ಅವರ ಮೇಲೆ ವಕೀಲ ಕಿಶೋರ್ ರಾಕೇಶ್ ಶೂ ಎಸೆಯಲು ಯತ್ನಿಸಿದ ಪ್ರಕರಣ ಖಂಡಿಸಿ ಪ್ರತಿಭಟನೆ ನಡೆಸಿದರು.

ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಒಬ್ಬ ಮನುವಾದಿ ಮತ್ತು ಕಿಡಿಗೇಡಿ ವಕೀಲ ಶೂ ಎಸೆಯಲು ಯತ್ನಿಸುವ ಮೂಲಕ ಈ ದೇಶದ ನ್ಯಾಯಾಂಗ ವ್ಯವಸ್ಥೆಯನ್ನು ಅವಮಾನಿಸಿದ್ದು, ಭಾರತದ ಪ್ರತಿಯೊಬ್ಬ ಪ್ರಜೆಯು ತಲೆತಗ್ಗಿಸುವಂತೆ ಮಾಡಿದೆ. ಗವಾಯಿ ಅವರಿಗೆ ಮಾಡಿದ ಅವಮಾನವಲ್ಲ ಬದಲಾಗಿ ಭಾರತದ ನ್ಯಾಯಾಂಗ ವ್ಯವಸ್ಥೆಗೆ ಮಾಡಿದ ಅವಮಾನವಾಗಿದ್ದು ಈ ಘಟನೆಯನ್ನು ಇಡೀ ದೇಶವೇ ಖಂಡಿಸಬೇಕಾಗಿತ್ತು ಆದರೆ ಗವಾಯಿ ಅವರು ಶೋಷಿತ ಸಮುದಾಯದ ವ್ಯಕ್ತಿಯಾಗಿರುವ ಕಾರಣ ಈ ಘಟನೆ ವ್ಯಾಪಕವಾಗಿ ಖಂಡನೆಯಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕು ಆದಿಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಹೈರಿಗೆ ಶಿವರಾಜು ಮಾತನಾಡಿ, ಪ್ರಕರಣ ನಡೆದು ಇಷ್ಟು ದಿನವಾದರೂ ಆರೋಪಿ ವಕೀಲನ್ನು ಕೇಂದ್ರ ಸರ್ಕಾರ ಬಂಧಿಸಿಲ್ಲ. ಇದು ಖಂಡನೀಯ ಹಾಗಾಗಿ ಈತನನ್ನು ಈ ದೇಶದಿಂದ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಬೆಟ್ಟಯ್ಯ ಕೋಟೆ ಮಾತನಾಡಿ, ಈ ದೇಶದ ನೆಮ್ಮದಿಯನ್ನು ಹಾಳು ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆ, ನ್ಯಾಯಂಗ ವ್ಯವಸ್ಥೆ, ಸಂವಿಧಾನಕ್ಕೆ ಅಪಮಾನ ಮಾಡಿದ್ದಾನೆ. ಆದರೂ ಆತನ ಮೇಲೆ ಯಾವುದೇ ಕ್ರಮ ಆಗಿಲ್ಲ ಎಂದು ಅಸಮಾದಾನ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಭೀಮನಹಳ್ಳಿ ಸೋಮೇಶ್, ಜ್ಞಾನ ಪ್ರಕಾಶ್ ಸ್ವಾಮೀಜಿ, ಮಾಜಿ ಮೇಯರ್ ಪುರುಷೋತ್ತಮ್, ಬೆಟ್ಟಯ್ಯಕೋಟೆ, ಇಟ್ನಾ ರಾಜಣ್ಣ, ದೊಡ್ಡನಾಯಕ, ಚಿಕ್ಕವೀರನಾಯಕ, ಏಜಾಜ್ ಪಾಷ, ಜಯಪ್ರಕಾಶ್, ಮಹದೇವನಾಯಕ, ಇಬ್ರಾಹಿಂ, ಜೀವಿಕ ಬಸವರಾಜು, ಎಂ.ಡಿ. ಮಂಚಯ್ಯ, ಗೋಪಾಲಸ್ವಾಮಿ, ಕೋಟೆ ಗೌಡ, ಪಳನಿಸ್ವಾಮಿ, ರವಿ, ನಂಜಪ್ಪ, ಗ್ರಾಮೀಣ ಮಹೇಶ್, ಪಾರ್ಥಸಾರಥಿ, ಹೆಗ್ಗನೂರು ನಿಂಗರಾಜು, ಸಿದ್ದರಾಜು, ಸಣ್ಣಕುಮಾರ್, ಪ್ರಕಾಶ್, ಪ್ರೇಮ್, ಪರಶಿವಮೂರ್ತಿ, ಮರಿದೇವಯ್ಯ, ಭಾಗ್ಯಲಕ್ಷ್ಮೀ, ಅನುಷಾ, ಸಣ್ಣ ಸ್ವಾಮಿ ಇದ್ದರು.

### ಕರ್ನೂಲ್ ಬಸ್ ಅಗ್ನಿ ದುರಂತದಿಂದ ಎಚ್ಚೆತ್ತುಕೊಂಡಂತಿರುವ ರಾಜ್ಯ ಸರ್ಕಾರ

# ರಾಜ್ಯ ರಸ್ತೆ ಸಾರಿಗೆಯ ಎಲ್ಲಾ ಬಸ್‌ಗಳ ಸೇಫ್ಟಿ ಆಡಿಟ್ ಆರಂಭ

**● ಸುರಕ್ಷತಾ ಪರಿಶೀಲನೆಗೆ ಡಿಪೋ ಮ್ಯಾನೇಜರ್ ನೇತೃತ್ವದ ತಂಡ ರಚನೆ ● ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ಹಾಸನದಲ್ಲಿ ಸುರಕ್ಷತಾ ಕ್ರಮ ● ಸೇಫ್ಟಿ ಆಡಿಟ್ ವರದಿ ಸಲ್ಲಿಸಲು ಸಾರಿಗೆ ಇಲಾಖೆ ಗಡುವು**

ಮೈಸೂರು, ಅ.27(ಬಿಎಲ್‌ಯು)– ಹೈದರಾಬಾದ್‌ನಿಂದ ಬೆಂಗಳೂರಿಗೆ ಬರುತ್ತಿದ್ದ ಖಾಸಗಿ ಸ್ಲೀಪರ್ ಬಸ್ ಆಂಧ್ರ ಪ್ರದೇಶದ ಕರ್ನೂಲ್ ಬಳಿ ಬೆಂಕಿಗಾಹುತಿಯಾಗಿ 19 ಜನರು ಸಾವನ್ನಪ್ಪಿದ ಪ್ರಕರಣವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಕೆಎಸ್‌ಆರ್‌ಟಿಸಿ ಸೇರಿದಂತೆ ರಾಜ್ಯ ರಸ್ತೆ ಸಾರಿಗೆಯ ಎಲ್ಲಾ ಬಸ್‌ಗಳ ಸೇಫ್ಟಿ ಆಡಿಟ್‌ಗೆ ಒಳಪಡಿಸಬೇಕೆಂದು ಸರ್ಕಾರ ತಾಕೀತು ಮಾಡಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಸೇಫ್ಟಿ ಆಡಿಟ್‌ಗೆ ಒಳಪಡಿಸುವ ಕಾರ್ಯ ಆರಂಭವಾಗಿದೆ.

ಕರ್ನೂಲ್ ಬಸ್ ದುರಂತದಂತಹ ಅವಘಡ ಇನ್ನು ಎಲ್ಲೂ ಸಂಭವಿಸದಂತೆ ರಾಜ್ಯ ಸಾರಿಗೆ ಇಲಾಖೆ ಹಲವು ಮುಂಜಾಗ್ರತಾ ಕ್ರಮ ಕೈಗೊಂಡಿದೆ. ಈ ಸಂಬಂಧ ರಾಜ್ಯ ರಸ್ತೆ ಸಾರಿಗೆ ಇಲಾಖೆಯ ಚೀಫ್ ಮೆಕ್ಯಾನಿಕಲ್ ಇಂಜಿನಿಯರ್ ಶ್ರೀನಿವಾಸ್, ಶನಿವಾರ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳ ವಿಭಾಗೀಯ ನಿಯಂತ್ರಣಾಧಿಕಾರಿಗಳ ಜೊತೆ ವಿಡಿಯೋ ಕಾನ್ಫರೆನ್ಸ್ ಮೂಲಕ ವರ್ಚ್ಯುವಲ್ ಸಭೆ ನಡೆಸಿದ್ದಾರೆ.

ರಸ್ತೆ ಸಾರಿಗೆಯ ಎಲ್ಲಾ ಬಸ್‌ಗಳನ್ನು ಸೇಫ್ಟಿ ಆಡಿಟ್‌ಗೆ ಒಳಪಡಿಸಬೇಕು. ಏನಾದರೂ ದೋಷಗಳಿದ್ದರೆ ಅದನ್ನು ಕೂಡಲೇ ಸರಿಪಡಿಸಬೇಕು ಎಂದು ತಾಕೀತು ಮಾಡಿರುವ ಶ್ರೀನಿವಾಸ್, ಸೇಫ್ಟಿ ಆಡಿಟ್‌ನಲ್ಲಿ ಬಸ್‌ಗಳ ದೋಷವನ್ನು ಯಾವ ರೀತಿ ಪತ್ತೆ ಮಾಡಬೇಕು, ಅದನ್ನು ಹೇಗೆ ಪರಿಹಾರ ಮಾಡಬೇಕು ಎಂದು ಟಿಪ್ಸ್ ನೀಡಿದ್ದಾರೆ.

ಮೈಸೂರು ಗ್ರಾಮಾಂತರದಲ್ಲಿ 6 ಡಿಪೋಗಳಿವೆ. ಇದರಲ್ಲಿ ಕೆಂಪು ಮತ್ತು ನೀಲಿ ಬಣ್ಣದ 753 ಬಸ್‌ಗಳಿದ್ದು, 83 ವೋಲ್ವೊ ಹಾಗೂ 14 ಎಲೆಕ್ಟ್ರಿಕ್ ಬಸ್‌ಗಳಿವೆ. ಸೇಫ್ಟಿ ಆಡಿಟ್ ತಂಡದಲ್ಲಿ ಡಿಪೋ ಮ್ಯಾನೇಜರ್, ಒಬ್ಬ ಸೂಪರ್ ವೈಸರ್ ಹಾಗೂ ಮೂವರು ಮೆಕ್ಯಾನಿಕ್ ಒಳಗೊಂಡ ತಂಡ ರಚನೆ ಮಾಡಿದ್ದು, 6 ಡಿಪೋಗಳಲ್ಲಿ ಒಂದೊಂದು ತಂಡ ಸೇಫ್ಟಿ ಆಡಿಟ್ ಕಾರ್ಯದಲ್ಲಿ ತೊಡಗಿದೆ.

ಮೈಸೂರು ನಗರದಲ್ಲಿ 4 ಡಿಪೋಗಳಿದ್ದು, ಇಲ್ಲಿ ಕೂಡ ಸೇಫ್ಟಿ ಆಡಿಟ್ ಕಾರ್ಯ ಪ್ರಗತಿಯಲ್ಲಿದೆ. ಮೈಸೂರು ನಗರದಲ್ಲಿ ಒಟ್ಟು 554 ಬಸ್‌ಗಳಿದ್ದು, ಇದರಲ್ಲಿ 2024–25 ರಲ್ಲಿ 60 ನೀಲಿ ಬಣ್ಣದ ಹೊಸ ಬಸ್ ಹಾಗೂ 15 ಕೆಂಪು ಬಣ್ಣದ ಅಶ್ವಮೇಧ ಹೊಸ ಬಸ್ ಕಾರ್ಯಾಚರಿಸುತ್ತಿವೆ. 2024–25 ರಲ್ಲಿ ಸಾರಿಗೆ ಇಲಾಖೆಯ ನಿಯಮದಂತೆ 15 ವರ್ಷ ಮೇಲ್ಪಟ್ಟ 147 ಬಸ್‌ಗಳನ್ನು ಗುಜರಿಗೆ ಹಾಕಲಾಗಿದೆ.

ಬಸ್‌ನಲ್ಲಿ ಎಮರ್ಜೆನ್ಸಿ ಡೋರ್ ಅಳವಡಿಸಿದ್ದರೂ, ಉಪಯೋಗಿಸದೆ ಜಾಮ್ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ ಅದಕ್ಕೆ ಗ್ರೀಸ್ ಹಾಕಿ ತಕ್ಷಣ ತೆರೆಯುವಂತೆ ಸಾಫ್ಟ್ ಮಾಡಲಾಗುತ್ತಿದೆ. ಅಪಘಾತದ ಸಂದರ್ಭದಲ್ಲಿ ಕಿಟಕಿ ಗಾಜು ಒಡೆದು ಹೊರಗೆ ಬರಲು ಕಡ್ಡಾಯವಾಗಿ ಕಬ್ಬಿಣದ ಸುತ್ತಿಗೆಯನ್ನು ಅಳವಡಿಸಲಾಗುತ್ತಿದೆ.

ಬಸ್‌ನಲ್ಲಿ ಬೆಂಕಿ ಅವಘಡ ಸಂಭವಿಸಿದರೆ ಕೂಡಲೇ ಎಚ್ಚರಿಸುವ ಸೆನ್ಸಾರ್ ಯಂತ್ರ, ಬೆಂಕಿ ನಂದಿಸುವ ಯಂತ್ರ ಅಳವಡಿಸಲಾಗುತ್ತಿದೆ. ಇಂಜಿನ್‌ನಲ್ಲಿ ಆಯಿಲ್ ಅಥವಾ ಡೀಸೆಲ್ ಸೋರುತ್ತಿದೆಯೇ ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ. ಅಲ್ಲದೆ ಬ್ಯಾಟರಿ ಕೇಬಲ್ ಚಾಲನೆಯಲ್ಲಿದೆಯೇ ಎಂದು ಪರಿಶೀಲನೆ ಮಾಡಿ ಅಗತ್ಯವಿದ್ದರೆ ಹೊಸ ಕೇಬಲ್‌ಗಳ ಅಳವಡಿಸಲಾಗುತ್ತಿದೆ. ಸೇಫ್ಟಿ ಆಡಿಟ್‌ನಲ್ಲಿ ಇಂತಹ ಹಲವು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.



#### ಮೂರ್ನಾಲ್ಕು ದಿನದಲ್ಲಿ ಸೇಫ್ಟಿ ಆಡಿಟ್ ಮುಗಿಸುತ್ತೇವೆ



ರಾಜ್ಯ ರಸ್ತೆ ಸಾರಿಗೆಯ ಕೇಂದ್ರ ಕಚೇರಿ ಸೂಚನೆ ನೀಡಿರುವಂತೆ ಇನ್ನು ಮೂರ್ನಾಲ್ಕು ದಿನದಲ್ಲಿ ಸೇಫ್ಟಿ ಆಡಿಟ್ ಮಾಡಿ ಮುಗಿಸುತ್ತೇವೆ. ತರುವಾಯ ಎಷ್ಟು ಬಸ್‌ಗಳನ್ನು ಪರಿಶೀಲನೆ ಮಾಡಿದ್ದೇವೆ, ಏನೇನು ದೋಷ ನಿವಾರಣೆ ಮಾಡಿದ್ದೇವೆ ಎಂಬ ಬಗ್ಗೆ ಸಮಗ್ರ ವರದಿಯನ್ನು ಕೇಂದ್ರ ಕಚೇರಿಗೆ ಸಲ್ಲಿಸುತ್ತೇವೆ.

15 ವರ್ಷ ಮೇಲ್ಪಟ್ಟ ಬಸ್‌ಗಳನ್ನು ಬಳಿಕ ಒಂದು ದಿನ ಕೂಡ ಓಡಿಸದೆ ಗುಜರಿಗೆ ಹಾಕಲಾಗುತ್ತಿದೆ. ಈ ಮೂಲಕ ಸಾರಿಗೆ ಇಲಾಖೆಯ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದೇವೆ.

- ಬಿ.ಶ್ರೀನಿವಾಸ್, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು ಗ್ರಾಮಾಂತರ

#### ಪ್ರಯಾಣಿಕರ ಬಸ್‌ಗಳಲ್ಲಿ ಸರಕು ಸಾಗಾಣಿಕೆ ಅಪಾಯಕಾರಿ

ಪ್ರಯಾಣಿಕರ ಬಸ್‌ಗಳಲ್ಲಿ ಸರಕು ಸಾಗಾಣಿಕೆ ಮಾಡುವುದು ಅಪಾಯಕಾರಿ. ಇದು ಸಾರಿಗೆ ಇಲಾಖೆಯ ನಿಯಮದ ಸ್ಪಷ್ಟ ಉಲ್ಲಂಘನೆಯಾಗಿದೆ.

ಎಲೆಕ್ಟ್ರಿಕ್ ವಸ್ತುಗಳು, ಇಂಧನ ವರ್ಗಕ್ಕೆ ಸೇರಿದ ಪದಾರ್ಥ ಸೇರಿದಂತೆ ಇತರೆ ಅಪಾಯಕಾರಿ ಸರಕುಗಳನ್ನು ಸಾಗಿಸುವ ವೇಳೆ ಅವು ಸ್ಫೋಟಗೊಂಡು ಅಗ್ನಿ ಅವಘಡ ಸಂಭವಿಸುವ ಸಾಧ್ಯತೆ ಇದೆ.

ಈಗ ಕರ್ನೂಲ್‌ನಲ್ಲಿ ಅಗ್ನಿ ಅವಘಡ ಸಂಭವಿಸಿರುವ ಬಸ್‌ನಲ್ಲಿ ನೂರಕ್ಕೂ ಹೆಚ್ಚು ದೊರೆತಿರುವ ಮೊಬೈಲ್ ಫೋನ್‌ಗಳ ಬಾಕ್ಸ್‌ಗಳನ್ನು ಕೆಳ ಭಾಗದ ಡಿಕ್ಕಿಯಲ್ಲಿ ಇಡಲಾಗಿತ್ತು. ಬಸ್‌ನಲ್ಲಿ ಅಗ್ನಿ ಕೆನ್ನಾಲಿಗೆಗೆ ಮೊಬೈಲ್ ಫೋನ್‌ಗಳು ಒಮ್ಮೆಲೇ ಸ್ಫೋಟಗೊಂಡವು. ಇದರಿಂದ ಬಸ್‌ನಲ್ಲಿ ಅಗ್ನಿ ಜ್ವಾಲೆ ಅತೀ ವೇಗವಾಗಿ ಮತ್ತಷ್ಟು ಆವರಿಸಿತು.

ಖಾಸಗಿ ಸೇರಿದಂತೆ ಕೆಎಸ್‌ಆರ್‌ಟಿಸಿಯಲ್ಲಿ ಕಾರ್ಗೋಗಳಿವೆ. ಇವುಗಳು ಸರಕು ಸಾಗಾಣಿಕೆ ಮಾಡಲು ಮಾತ್ರ ಉಪಯೋಗಿಸಲಾಗುತ್ತದೆ. ಆದರೆ ಪ್ರಯಾಣಿಕರ ಬಸ್‌ನಲ್ಲಿ ಸರಕು ಸಾಗಾಣಿಕೆ ಮಾಡುವುದರಿಂದ ಹೆಚ್ಚು ಲಾಭ ಎಂದು ಪ್ರಯಾಣಿಕರ ಬಸ್‌ನಲ್ಲಿ ಹಲವು ವಸ್ತುಗಳನ್ನು ಸಾಗಿಸಲಾಗುತ್ತಿದೆ. ಕೆಎಸ್‌ಆರ್‌ಟಿಸಿಗಿಂತ ಖಾಸಗಿ ಬಸ್‌ಗಳಲ್ಲಿ ಇದು ಹೆಚ್ಚಾಗಿದೆ.

ಈ ಹಿನ್ನೆಲೆಯಲ್ಲಿ ಸರ್ಕಾರಿ ಅಥವಾ ಖಾಸಗಿ ಬಸ್‌ಗಳಲ್ಲೇ ಆಗಲಿ ಸರಕುಗಳನ್ನು ಸಾಗಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಬೇಕು. ಇಲ್ಲದಿದ್ದರೆ ಕರ್ನೂಲ್ ಬಸ್ ಅಗ್ನಿ ದುರಂತದಂತಹ ಘಟನೆಗಳು ಸಂಭವಿಸುವ ಸಾಧ್ಯತೆಗಳಿದೆ.

#### ಸೇಫ್ಟಿ ಆಡಿಟ್ ತಂಡದಲ್ಲಿ ಕೆಲವು ಬದಲಾವಣೆ



ಸೇಫ್ಟಿ ಆಡಿಟ್‌ಗೆ ನಿಯೋಜನೆ ಮಾಡಿರುವ ಡಿಪೋ ಮ್ಯಾನೇಜರ್ ನೇತೃತ್ವದ ತಂಡವನ್ನು ಪ್ರಸ್ತುತ ಅವರು ಕಾರ್ಯ ನಿರ್ವಹಿಸುವ ಡಿಪೋಗೆ ನಿಯೋಜನೆ ಮಾಡದೆ ಅದಲು–ಬದಲು ಮಾಡಲಾಗಿದೆ.

ಇಲ್ಲದಿದ್ದರೆ ತಮ್ಮ ಡಿಪೋದಲ್ಲಿನ ಇತರೆ ಕೆಲಸದಲ್ಲಿ ಕಾರ್ಯೋನ್ಮುಖರಾಗಿ ಸೇಫ್ಟಿ ಆಡಿಟ್ ಕೆಲಸವನ್ನು ವಿಳಂಬ ಮಾಡುತ್ತಾರೆ ಎಂಬ ಕಾರಣದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಿಗದಿ ಮಾಡಿರುವ ಗಡುವಿನೊಳಗೆ ಸೇಫ್ಟಿ ಆಡಿಟ್ ಕಾರ್ಯ ಮಾಡಿ ಮುಗಿಸಿ ಕೇಂದ್ರ ಕಚೇರಿಗೆ ವರದಿ ನೀಡುತ್ತೇವೆ.

-ವೀರೇಶ್, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು ನಗರ ವಿಭಾಗ

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | (ದೂ: 2521923) |
| ಡ್ಯೂಡ್ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | (ದೂ: 2422871) |
| ಕಾಂತಾರ ಚಾಪ್ಟರ್–1 (ಕ) | 4 ಪ್ರದರ್ಶನಗಳು |
| **ಬಾಲಾಜಿ** | (ದೂ: 2497199) |
| ತಮ್ಮ (ಹಿಂ) | 3 ಪ್ರದರ್ಶನಗಳು |
| **ಮಹದೇಶ್ವರ** | (ಮೊ:9900820093) |
| ಕಾಂತಾರ ಚಾಪ್ಟರ್–1 (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಕಾಂತಾರ ಚಾಪ್ಟರ್–1 (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಬೈಸನ್ (ತ) | 4 ಪ್ರದರ್ಶನಗಳು |
| **ಸಂಗಂ** | |
| ಗ್ರೀನ್ (ಕ) + ಗಿಲ್‌ಮಾಲ್ (ಕ) | 2+2 ಪ್ರದರ್ಶನಗಳು |
| **ಲಿಡೋ** | |
| ತಮ್ಮ (ಹಿಂ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| – | – |
| **ಪ್ರಭಾ** | |
| ಬಿಳಿಚುಕ್ಕಿ ಹಳ್ಳಿಹಕ್ಕಿ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್

ದೂ : 4240422/4241800

| | |
|---|---|
| ಸ್ಕ್ರೀನ್ 1 | ಕಾಂತಾರ ಚಾಪ್ಟರ್ 1(ಕ): ಮ.1.00ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಡ್ಯೂಡ್ (ತ): ಬೆ.10.10ಕ್ಕೆ, ಸಂ.4.20ಕ್ಕೆ |
| ಸ್ಕ್ರೀನ್ 2 | ಬೈಸನ್ (ತ): ಬೆ.10.00ಕ್ಕೆ, ಸಂಜೆ 4.15ಕ್ಕೆ, ಡೀಸೆಲ್ (ತ): ಮ.1.20ಕ್ಕೆ, ತೆಲುಸು ಕದ (ತೆ): ರಾ.7.35ಕ್ಕೆ. ದಿ ಪೆಟ್ ಡಿಟೆಕ್ಟಿವ್ (ಇ): ರಾ.10.20ಕ್ಕೆ |
| ಸ್ಕ್ರೀನ್ 3 | ಡ್ಯೂಡ್ (ತ): ರಾ.7.20ಕ್ಕೆ, ರಾ. 10.15ಕ್ಕೆ, ಕಾಂತಾರ ಚಾಪ್ಟರ್ 1(ಕ): ಸಂ. 4.00ಕ್ಕೆ, ಪ್ರೇಮಿಗಳ ಗಮನಕ್ಕೆ (ಕ): ಬೆ.10.25ಕ್ಕೆ, ಟೈಮ್ ಪಾಸ್ (ಕ): ಮ.1.15ಕ್ಕೆ |
| ಸ್ಕ್ರೀನ್ 4 | ಕಾಂತಾರ ಚಾಪ್ಟರ್ 1(ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ. |

### ನೆಕ್ಸಸ್ ಮಾಲ್

| |
|---|
| ಕಾಂತಾರ ಚಾಪ್ಟರ್ 1(ಕ) : ಬೆ: 8.05ಕ್ಕೆ, 9.05ಕ್ಕೆ, 10.25ಕ್ಕೆ, 11.15ಕ್ಕೆ, ಮ: 12.15ಕ್ಕೆ, 2.40ಕ್ಕೆ, 3.40ಕ್ಕೆ, ಸಂಜೆ 6.05ಕ್ಕೆ, 6.55ಕ್ಕೆ, ರಾತ್ರಿ: 7.05ಕ್ಕೆ, 9.30ಕ್ಕೆ, 9.45ಕ್ಕೆ, 10ಕ್ಕೆ, 10.30ಕ್ಕೆ. |
| ಕಾಂತಾರ ಚಾಪ್ಟರ್ 1(ಹಿ): ಬೆ: 9.10ಕ್ಕೆ, ಮ.3.10ಕ್ಕೆ. |
| ಡ್ಯೂಡ್ (ತ): ಬೆ: 10ಕ್ಕೆ, ಸಂ: 4ಕ್ಕೆ, ರಾ: 10.20ಕ್ಕೆ |
| ಟೈಮ್ ಪಾಸ್ (ಕ): ಬೆ: 11.15ಕ್ಕೆ |
| ತೆಲುಸು ಕಾದಾ (ತೆ): ಮ: 12.20ಕ್ಕೆ, ರಾತ್ರಿ 7.20ಕ್ಕೆ |
| ಬೈಸನ್ ಕಾಳಮಂದಾನ್ (ತ): ಬೆ: ಮ: 12.40ಕ್ಕೆ, ಸಂಜೆ 6.35ಕ್ಕೆ |
| ಡೀಸೆಲ್ (ತ): ಮ: 1.40ಕ್ಕೆ |
| ಮಹಾಯೋಧ ರಾಮ (ಹಿ): ಮ: 1.50ಕ್ಕೆ |
| ಕೆ–ರ್‍ಯಾಂಪ್ (ತೆ): ಸಂ: 4.15ಕ್ಕೆ, ರಾ: 10.10ಕ್ಕೆ |
| ಮಿತ್ರ ಮಂಡಳಿ (ತೆ): ಸಂ: 4.40ಕ್ಕೆ |
| ಗುಡ್ ಫಾರ್ಚ್ಯೂನ್ (ಇ): ಸಂ: 7.30ಕ್ಕೆ |

### ಗರುಡ ಮಾಲ್

| |
|---|
| ಕಾಂತಾರ ಚಾಪ್ಟರ್ 1(ಕ) : ಬೆ: 8.20ಕ್ಕೆ, 9.05ಕ್ಕೆ, 9.40ಕ್ಕೆ, 11.30ಕ್ಕೆ, ಮ: 12.15ಕ್ಕೆ, 2.55ಕ್ಕೆ, 3.40ಕ್ಕೆ, ಸಂ: 6.20ಕ್ಕೆ, 7.05ಕ್ಕೆ, ರಾ: 9.45ಕ್ಕೆ, 10.30ಕ್ಕೆ |
| ಪ್ರೇಮಿಗಳ ಗಮನಕ್ಕೆ (ಕ): ಬೆ: 11.05ಕ್ಕೆ |
| ಡ್ಯೂಡ್ (ತ): ಮ: 12.50ಕ್ಕೆ, ರಾ: 7.10ಕ್ಕೆ |
| ಟೈಮ್ ಪಾಸ್ (ಕ): ಮ: 1.50ಕ್ಕೆ |
| ಬೈಸನ್ ಕಾಳಮಂದಾನ್ (ತ): ಮ: 3.40ಕ್ಕೆ, ರಾ.10.05ಕ್ಕೆ |
| ತೆಲುಸು ಕಾದಾ (ತೆ): ಮ: 4.30ಕ್ಕೆ |
| ಕೆ–ರ್‍ಯಾಂಪ್ (ತೆ): ರಾ: 7.20ಕ್ಕೆ |
| ಮಿತ್ರ ಮಂಡಳಿ (ತೆ): ರಾ: 10.15ಕ್ಕೆ |

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

## ಎಲೆಕ್ಟ್ರಿಕ್ ಬಸ್‌ಗಳಲ್ಲಿ ತಾಂತ್ರಿಕ ದೋಷ ಕೇಂದ್ರ ಸಚಿವ ಕುಮಾರಸ್ವಾಮಿಗೆ ಪತ್ರ

**ಬ್ಯಾಟರಿ ಸಮಸ್ಯೆಯಿಂದ ಅಪಘಾತ, ಸಾವು ನೋವು; ರಾಜ್ಯ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅಳಲು**

ಬೆಂಗಳೂರು, ಅ.27(ಕೆಎಂಶಿ)–ಎಲೆಕ್ಟ್ರಿಕ್ ಬಸ್‌ಗಳ ತಾಂತ್ರಿಕ ದೋಷದಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಕೆಟ್ಟ ಹೆಸರು ಬರುತ್ತಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಇಂದಿಲ್ಲಿ ತಿಳಿಸಿದ್ದಾರೆ.



ರಾಮಲಿಂಗಾ ರೆಡ್ಡಿ

ಬಸ್ ಬ್ಯಾಟರಿಗೆ ಸಂಬಂಧಿಸಿದ ಸಮಸ್ಯೆ ಹಾಗೂ ಹಠಾತ್ತಾಗಿ ಬ್ರೇಕ್‌ಡೌನ್‌ನಿಂದ ಅಪಘಾತಗಳು ಸಂಭವಿಸಿ ಸಾವು–ನೋವುಗಳು ಉಂಟಾಗಿದ್ದು ಈ ಬಗ್ಗೆ ಗಮನ ಹರಿಸಬೇಕೆಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಪತ್ರ ಬರೆದಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಾರಿಗೆ ಸಚಿವರು, ಎಲೆಕ್ಟ್ರಿಕ್ ಬಸ್‌ಗಳ ಸಂಪೂರ್ಣ ನಿರ್ವಹಣೆ ಕೇಂದ್ರ ಬೃಹತ್ ಕೈಗಾರಿಕೆ ಇಲಾಖೆ ಅಡಿ ಬರುತ್ತದೆ. ಇದರಲ್ಲಿ ನಮ್ಮ ಸಾರಿಗೆ ಇಲಾಖೆಯ ಯಾವುದೇ ಪಾತ್ರ ಇಲ್ಲ. ಬಸ್‌ಗಳು ಅಪಘಾತಕ್ಕೀಡಾದರೆ ಅಥವಾ ಕೆಟ್ಟು ನಿಂತರೆ ನಮ್ಮನ್ನು ದೂಷಿಸುತ್ತಾರೆ. ಇದರ ನಡುವೆ, ವಿವಿಧ ಬೇಡಿಕೆಗಳ ಈಡೇರಿಕೆಗೆ ಎಲೆಕ್ಟ್ರಿಕ್ ಬಸ್ ಚಾಲಕರು ಮುಷ್ಕರ ನಡೆಸುತ್ತಿರುವುದು ದೊಡ್ಡ ತಲೆ ನೋವಾಗಿ ಪರಿಣಮಿಸಿದೆ.

ಚಾಲಕರ ದಿಢೀರ್ ಮುಷ್ಕರದಿಂದ ಸಾರ್ವಜನಿಕರಿಗೆ ಸಮಸ್ಯೆ ಆಗುತ್ತಿದ್ದು, ತಕ್ಷಣವೇ ಮಧ್ಯ ಪ್ರವೇಶಿಸುವಂತೆ ಕುಮಾರಸ್ವಾಮಿ ಅವರನ್ನು ಒತ್ತಾಯಿಸಿದ್ದಾರೆ.

1,500ಕ್ಕೂ ಹೆಚ್ಚು ಎಲೆಕ್ಟ್ರಿಕ್ ಬಸ್‌ಗಳು ಸಾರಿಗೆ ನಿಗಮದಡಿ ಕಾರ್ಯನಿರ್ವಹಿಸುತ್ತಿವೆ, ಚಾಲಕರು ಕಳೆದ ಎರಡು ದಿನಗಳಿಂದ ಮುಷ್ಕರ ನಡೆಸುತ್ತಿರುವುದರಿಂದ ಅವು ರಸ್ತೆಗಿಳಿಯದೆ ಸಾರ್ವಜನಿಕರಿಗೆ ತೊಂದರೆ ಆಗಿದೆ. ತಾಂತ್ರಿಕ ಹಾಗೂ ಚಾಲಕರ ಸಮಸ್ಯೆಯನ್ನು ತಕ್ಷಣ ಬಗೆಹರಿಸಿ ಪರಿಹಾರ ಕಂಡು ಹಿಡಿಯಿರಿ ಎಂದು ಮನವಿ ಮಾಡಿದ್ದಾರೆ.

ಎಲೆಕ್ಟ್ರಿಕ್ ಬಸ್‌ಗಳಿಗೆ ಖಾಸಗಿ ಚಾಲಕರು ಬೇಡ, ಸಾರಿಗೆ ಸಂಸ್ಥೆಯ ಖಾಯಂ ಚಾಲಕರನ್ನು ನೇಮಕ ಮಾಡಿಕೊಳ್ಳಲು ಅವಕಾಶ ನೀಡಿ ಎಂದಿದ್ದಾರೆ.

### ಟಿಪ್ಪುಸುಲ್ತಾನ್ ಪ್ಯಾಲೇಸ್ ಮೇಲೆ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಹೆಸರು; ಆಕ್ರೋಶ

**ಚಿಕ್ಕಬಳ್ಳಾಪುರ:** ಚಿಕ್ಕಬಳ್ಳಾಪುರದ ನಂದಿಬೆಟ್ಟದಲ್ಲಿರುವ ಟಿಪ್ಪು ಸುಲ್ತಾನ್ ಸಮರ್ ಪ್ಯಾಲೇಸ್‌ನ ಗೋಡೆ ಮೇಲೆ ಕುಖ್ಯಾತ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಹೆಸರು ಬರೆಯಲಾಗಿದೆ. ಭಾರತೀಯ ಪುರಾತತ್ವ ಹಾಗೂ ಸರ್ವೇಕ್ಷಣ ಇಲಾಖೆ ಅಧೀನದ ಪ್ಯಾಲೇಸ್‌ನ ಮೇಲೆ ದೊಡ್ಡದಾಗಿ ಲಾರೆನ್ಸ್ ಬಿಷ್ಣೋಯ್ ಎಂದು ಬರೆಯಲಾಗಿದ್ದು ಇದು ಟಿಪ್ಪು ಅಭಿಮಾನಿಗಳು ಮತ್ತು ಪ್ರವಾಸಿಗರ ಅಸಮಾಧಾನಕ್ಕೆ ಕಾರಣವಾಗಿದೆ. ಅಲ್ಲದೆ ಆರೋಪಿಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.

## ಮೀನು ತಯಾರಿಕಾ ತರಬೇತಿ ಶಿಬಿರಕ್ಕೆ ಚಾಲನೆ

**ನಂದಿನಿ, ಹಾಪ್‌ಕಾಮ್ಸ್ ಮಾದರಿ ಮೀನು ಸ್ನ್ಯಾಕ್ ಮಳಿಗೆಗಳಿಗೆ ಉತ್ತೇಜನ**

ಮೈಸೂರು, ಅ.27(ಎಂಕೆ)– ಮೈಸೂರಿನ ಡಿ.ದೇವರಾಜ ಅರಸು ರಸ್ತೆಯಲ್ಲಿರುವ ಶ್ರೀ ಗಂಗಾ ಚಾರಿಟಬಲ್ ಟ್ರಸ್ಟ್ ಸಭಾಂಗಣದಲ್ಲಿ ಕರ್ನಾಟಕ ಮೀನುಗಾರಿಕೆ ಇಲಾಖೆ, ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಮೀನುಗಾರಿಕಾ ಮಹಾ ವಿದ್ಯಾಲಯ ಸಹಯೋಗದೊಂದಿಗೆ ಆಯೋಜಿಸಿರುವ ಐದು ದಿನಗಳ ವಾಣಿಜ್ಯ ಸಮುದ್ರ ಆಹಾರ ಮತ್ತು ಮೀನು ಸ್ನ್ಯಾಕ್ಸ್ ತಯಾರಿಕಾ ತರಬೇತಿ ಶಿಬಿರಕ್ಕೆ ಮೀನುಗಾರಿಕೆ ಇಲಾಖೆ ಉಪ ನಿರ್ದೇಶಕ ಜಿ.ಹೆಚ್.ಮಂಜುನಾಥ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ನಂದಿನಿ ಹಾಲಿನ ಬೂತ್‌ಗಳಲ್ಲಿ ಹಾಲು ಮತ್ತು ಹಾಪ್‌ಕಾಮ್ಸ್‌ಗಳಲ್ಲಿ ಹಣ್ಣು–ತರಕಾರಿ ದೊರೆಯುವಂತೆ ಮೀನುಗಾರಿಕೆ ಇಲಾಖೆ ವ್ಯಾಪ್ತಿಯ ಮಳಿಗೆಗಳಲ್ಲಿ ತಾಜಾ ಮೀನು ಮಾಂಸ ದೊರೆಯಲಿದ್ದು, ಸಣ್ಣ ಹೋಟೆಲ್ ಮತ್ತು ಫಾಸ್ಟ್ ಫುಡ್‌ಗಳಲ್ಲಿ ಮೀನಿನ ಆಹಾರ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುವ ಮೂಲಕ ಆರ್ಥಿಕ ಸಬಲತೆ ಸಾಧಿಸುವ ಜೊತೆಗೆ ಉದ್ಯೋಗ ಅವಕಾಶಗಳು ಸೃಷ್ಟಿಯಾಗಲಿವೆ ಎಂದರು.

ಮೀನು ಆರೋಗ್ಯಕರ ಮಾಂಸಹಾರವಾಗಿದ್ದು, ಅದನ್ನು ಸೇವನೆ ಮಾಡುವುದರಿಂದ ಪ್ರೋಟಿನ್ ಮತ್ತು ಒಮೆಗಾ–3 ಫ್ಯಾಟ್ ದೊರೆಯುತ್ತದೆ. ಎಣ್ಣೆ ತಯಾರಿಕೆಗೂ ಮೀನು ಬಳಕೆ ಮಾಡುವುದರಿಂದ ಕೃಷಿಯ ಜೊತೆಗೆ ಪರ್ಯಾಯ ಉದ್ಯೋಗವಾಗಿಯೂ ಮೀನುಗಾರಿಕೆ ಮಾಡಬಹುದಾಗಿದೆ ಎಂದು ತಿಳಿಸಿದರು.

ಸಹಾಯಕ ನಿರ್ದೇಶಕಿ ಭವಾನಿ ಮಾತನಾಡಿ, ಮಹಿಳೆಯರು ಮೀನಿನಿಂದ ತಯಾರಿಸಬಹುದಾದ ಸ್ನ್ಯಾಕ್‌ಗಳ ತರಬೇತಿ ಪಡೆದು ಸ್ವಾವಲಂಬಿಗಳಾಗಿ ಜೀವನ ನಡೆಸಬಹುದಾಗಿದೆ. ಸಣ್ಣ ಮೀನುಗಳನ್ನು ಬಿಸಾಡದೆ ಒಣಗಿಸಿ ಮಾರಾಟ ಮಾಡಬಹುದು. ಫಿಷ್ ಕಟ್‌ಲೆಟ್ ಸೇರಿದಂತೆ ವಿವಿಧ ರುಚಿಕರ ಸ್ನ್ಯಾಕ್‌ಗಳನ್ನು ತಯಾರಿಸಿ ಹಣ ಸಂಪಾದನೆ ಮಾಡಬಹುದಾಗಿದೆ. ಈ ನಿಟ್ಟಿನಲ್ಲಿ ಮೀನುಗಾರಿಕೆ ಇಲಾಖೆ ಹಾಗೂ ಮೀನುಗಾರಿಕಾ ಮಹಾವಿದ್ಯಾಲಯ ನೀಡುವ ತರಬೇತಿಯನ್ನು ಸದ್ಬಳಕೆ ಮಾಡಿಕೊಳ್ಳುವಂತೆ ತಿಳಿಸಿದರು.

ನಂತರ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ಬಿ. ಮಂಜು ನಾಯ್ಕ್ ಮೀನುಗಾರಿಕೆ ಕುರಿತು ವಿಶೇಷ ಉಪನ್ಯಾಸ ನೀಡಿದರು. ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಮೀನುಗಾರರ ವಿಭಾಗದ ಜಿಲ್ಲಾಧ್ಯಕ್ಷ ಸಿದ್ದಯ್ಯ ನಾಯಕ್, ಶ್ರೀ ಗಂಗಾ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ರಾಜ್ ಕಾಮಯ್ಯ, ಕಾರ್ಯದರ್ಶಿ ಎಂ.ದಿವ್ಯಶ್ರೀ ಮತ್ತಿತರರಿದ್ದರು.




ಸಮುದ್ರ ಆಹಾರ ಮತ್ತು ಮೀನು ಸ್ನ್ಯಾಕ್ಸ್ ತಯಾರಿಕಾ ತರಬೇತಿ ಶಿಬಿರಕ್ಕೆ ಮೀನುಗಾರಿಕೆ ಇಲಾಖೆ ಉಪ ನಿರ್ದೇಶಕ ಜಿ.ಹೆಚ್.ಮಂಜುನಾಥ್ ಚಾಲನೆ ನೀಡಿದರು.

### ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಅ.27– ಕೆ.ವಿಜಯಪುರ ಹಾಗೂ ಉದ್ಬೂರು ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕೆಲಸದ ನಿಮಿತ್ತ ಅ28 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ಜಯಪುರ, ಮಾರ್ಬಳ್ಳಿ, ಗೋಪಾಲಪುರ, ಉದ್ಬೂರು, ಧನಗಳ್ಳಿ, ಹಾರೋಹಳ್ಳಿಯ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಟಿ ಕಾಟೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

## ವಕೀಲರಿಗೆ ಪ್ರತ್ಯೇಕ ವಸತಿ ಯೋಜನೆ

**ವಸತಿ ಸಚಿವ ಜಮೀರ್ ಅಹಮದ್ ಖಾನ್ ಭರವಸೆ**



ಬೆಂಗಳೂರು, ಅ.27(ಕೆಎಂಶಿ)–ವಸತಿ ಇಲಾಖೆಯ ಗೃಹಮಂಡಳಿ ಅಥವಾ ರಾಜೀವ್‌ಗಾಂಧಿ ವಸತಿ ನಿಗಮದಿಂದ ರಾಜಧಾನಿಯಲ್ಲಿ ವಕೀಲರಿಗೆ ಪ್ರತ್ಯೇಕ ವಸತಿ ಯೋಜನೆ ರೂಪಿಸಲಾಗುವುದು ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಇಂದಿಲ್ಲಿ ತಿಳಿಸಿದ್ದಾರೆ.

ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ ಹಾಗೂ ಹೆಚ್ಚುವರಿ ಅಡ್ವೋಕೇಟ್ ಜನರಲ್ ಇಸ್ಮಾಯಿಲ್ ಜಬೀವುಲ್ಲಾ ನೇತೃತ್ವದ ನಿಯೋಗ ಸಚಿವರನ್ನು ಭೇಟಿ ಮಾಡಿ ವಸತಿ ರಹಿತ ವಕೀಲರಿಗೆ ನಿವೇಶನ ಅಥವಾ ವಸತಿ ಸಂಕೀರ್ಣ ನಿರ್ಮಾಣ ಮಾಡಿಕೊಡುವಂತೆ ಮನವಿ ಸಲ್ಲಿಸಿದರು. ಮನವಿಗೆ ಸ್ಥಳದಲ್ಲೇ ಸ್ಪಂದಿಸಿದ ಸಚಿವರು, ವಕೀಲರಿಗೆ ವಸತಿ ಸಂಕೀರ್ಣ ನಿರ್ಮಿಸಲು ಸೂಕ್ತ ಜಮೀನು ಅನ್ವೇಷಿಸುವಂತೆ ಗೃಹ ಮಂಡಳಿ ಹಾಗೂ ರಾಜೀವ್ ಗಾಂಧಿ ವಸತಿ ನಿಗಮದ ಅಧಿಕಾರಿಗಳಿಗೆ ಸೂಚಿಸಿದರು.

ಈಗಾಗಲೇ ರಾಜೀವ್ ಗಾಂಧಿ ವಸತಿ ನಿಗಮದಿಂದ ನಗರದ ಹಲವೆಡೆ 2 ಬಿಎಚ್‌ಕೆ ವಸತಿ ಸಂಕೀರ್ಣ ನಿರ್ಮಿಸಿದ್ದು, ವಕೀಲರು ಒಪ್ಪಿದರೆ ಅಲ್ಲಿಯೂ ವಸತಿ ಸೌಲಭ್ಯ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

# ಶೈಕ್ಷಣಿಕ ವ್ಯವಸ್ಥೆ ಬಲಪಡಿಸಲು ಹತ್ತು ಹಲವು ವಿಚಾರ ಪ್ರಸ್ತಾಪ

**ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಕಲ್ಪಿಸುವಂತೆ ಎಸ್‌ಎಫ್‌ಐ ಆಗ್ರಹ**

ಮೈಸೂರು,ಅ.27(ಎಂಟಿವೈ)– ರಾಜ್ಯ ಶಿಕ್ಷಣ ನೀತಿಯನ್ನು ಸಮರ್ಪಕವಾಗಿ ಜಾರಿಗೊಳಿಸಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡುವಂತೆ ಆಗ್ರಹಿಸಿ, ಮೈಸೂರಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ವಿದ್ಯಾರ್ಥಿಗಳ ಸಭೆ ನಡೆಸಿತು.

ಮೈಸೂರಿನ ಹಳೆ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಎಸ್‌ಎಫ್‌ಐ ಆಯೋಜಿಸಿದ್ದ ಈ ಸಭೆಯಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಸಭೆಗೆ ಎಸ್‌ಎಫ್‌ಐ ರಾಜ್ಯ ಗೌರವಾಧ್ಯಕ್ಷ, ರಂಗ ಕರ್ಮಿ ಜನಾರ್ಧನ್(ಜೆನ್ನಿ) ಚಾಲನೆ ನೀಡಿ ಮಾತನಾಡಿ, ಶೈಕ್ಷಣಿಕ ವ್ಯವಸ್ಥೆಯನ್ನು ಬಲಪಡಿಸಿದಾಗ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಈ ನಿಟ್ಟಿನಲ್ಲಿ ಉತ್ತಮ, ಸಮಾಜಪರವಾದ ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಬೇಕು. ರಾಜ್ಯದಲ್ಲಿ ವಿಶ್ವವಿದ್ಯಾಲಯಗಳಿಗೆ ಹೆಚ್ಚಿನ ಅನುದಾನ ನೀಡಿ, ಖಾಸಗಿ ಶಾಲಾ ಕಾಲೇಜುಗಳ ಡೊನೇಷನ್ ನಿಯಂತ್ರಿಸಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ರಾಜ್ಯದಲ್ಲಿ ಬಾಕಿ ಉಳಿಸಿಕೊಂಡಿರುವ 30 ಲಕ್ಷ ಪದವಿ ವಿದ್ಯಾರ್ಥಿಗಳಿಗೆ ಅಂಕ ಪಟ್ಟಿ ನೀಡಲು ಕ್ರಮ ಕೈಗೊಳ್ಳಬೇಕು. ಸರ್ಕಾರಿ ಶಾಲಾ–ಕಾಲೇಜುಗಳಿಗೆ ಮೂಲಸೌಲಭ್ಯ ಒದಗಿಸಬೇಕು. ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಬೇಕು. ಶಾಲಾ ಕಾಲೇಜುಗಳಲ್ಲಿ ಲೈಂಗಿಕ ಕಿರುಕುಳದ ವಿರುದ್ಧ ಲಿಂಗ ಸಂವೇದನಾ ಸಮಿತಿ ಮತ್ತು ಆಂತರಿಕ ದೂರು ಸಮಿತಿ ರಚಿಸಬೇಕು. ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಆರೋಗ್ಯ ಸೌಕರ್ಯ ಒದಗಿಸಬೇಕು. ರಾಜ್ಯದ ಎಲ್ಲಾ ಜಿಲ್ಲೆಯಲ್ಲಿ ಸರ್ಕಾರಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜು ಮತ್ತು ಕಾನೂನು ಕಾಲೇಜುಗಳ ಸ್ಥಾಪಿಸಬೇಕು. ಪದವಿ ಶಿಕ್ಷಣದವರೆಗೆ ಉಚಿತ ಗುಣಮಟ್ಟದ ಶಿಕ್ಷಣ ನೀಡಬೇಕು. ರಾಜ್ಯದಲ್ಲಿ ಖಾಲಿ ಇರುವ 59,772 ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಹಕ್ಕೊತ್ತಾಯ ಮಾಡಲಾಯಿತು.

ಎಲ್ಲಾ ಹಾಸ್ಟೆಲ್‌ಗಳಲ್ಲಿ ಗ್ರಂಥಾಲಯ ಸ್ಥಾಪಿಸಿ, ಕ್ರೀಡಾ ಸಾಮಗ್ರಿ, ಮೂಲಭೂತ ಸೌಲಭ್ಯ ಕಲ್ಪಿಸಬೇಕು. ಕಳೆದ 3 ವರ್ಷದಿಂದ ಬಾಕಿ ಉಳಿಸಿಕೊಂಡಿರುವ ವಿದ್ಯಾರ್ಥಿ ವೇತನ ಬಿಡುಗಡೆ ಮಾಡಬೇಕು. ಸಂಶೋಧನಾ ವಿದ್ಯಾರ್ಥಿಗಳಿಗೆ ಫೆಲೋಶಿಪ್ ಮೊತ್ತ ಹೆಚ್ಚಿಸಬೇಕು. ರಾಜ್ಯದಲ್ಲಿ ಖಾಲಿ ಇರುವ 2.72 ಲಕ್ಷ ಸರ್ಕಾರಿ ಹುದ್ದೆ ಭರ್ತಿ ಮಾಡಬೇಕು. ಶಿಕ್ಷಣದಲ್ಲಿ ಕೇಂದ್ರೀಕರಣ, ಕೇಸರೀಕರಣ, ಖಾಸಗೀಕರಣ ನೀತಿ ಕೈಬಿಡಬೇಕು. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA) ರದ್ದುಪಡಿಸಿ ರಾಷ್ಟ್ರೀಯ ಶಿಕ್ಷಣ ಪರೀಕ್ಷಾ ಸೇವಾ ಪ್ರಾಧಿಕಾರ ಸ್ಥಾಪಿಸಬೇಕು. ಸರ್ಕಾರಿ ಹಾಸ್ಟೆಲ್ ಹಾಗೂ ವಸತಿ ಶಾಲಾ–ಕಾಲೇಜುಗಳಲ್ಲಿ ಖಾಲಿ ಇರುವ ವಾರ್ಡನ್, ಪ್ರಾಂಶುಪಾಲರು, ಸಿಬ್ಬಂದಿ ಸೇರಿದಂತೆ ವಿವಿಧ ಹುದ್ದೆಗಳ ನೇಮಕಾತಿ ಮಾಡಬೇಕು. ಸರ್ಕಾರಿ ವಸತಿ ನಿಲಯಗಳಿಗೆ ಸ್ವಂತ ಕಟ್ಟಡ ಸೇರಿದಂತೆ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಸರ್ಕಾರಿ ಕಾಲೇಜುಗಳ ಪ್ರವೇಶ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಹೆಚ್ಚಳ ಮಾಡದಂತೆ ಆಗ್ರಹಿಸಲಾಯಿತು.

ಸಭೆಯಲ್ಲಿ ಪೀಪಲ್ ಲೀಗಲ್ ಫೋರಂ ನಿರ್ದೇಶಕ ಬಾಬುರಾಜ್, ಎಸ್‌ಎಫ್‌ಐ ರಾಜ್ಯಾಧ್ಯಕ್ಷರಾದ ಶಿವಪ್ಪ, ರಾಜ್ಯ ಕಾರ್ಯದರ್ಶಿ ವಿಜಯ್ ಕುಮಾರ್, ರಾಜ್ಯ ಮುಖಂಡರಾದ ಅರ್ಪಿತಾ ಗ್ರೇಸಿ ವಿ.ಮಣಿ, ಜಿಲ್ಲಾ ಮುಖಂಡರಾದ ಅಭಿ ಡಿ, ಪ್ರಜ್ವಲ್ ಟಿ, ಭರತ್, ಚಿರಾಗ್ ಎಸ್.ಕೆ ಮೂರ್ತಿ, ಜೀವನ್, ಪ್ರಿಯಾ, ವಿನುತ್, ಅಭಿಷೇಕ್ ಎಸ್, ತೇಜಸ್‌ಅರವಿಂದ್ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.




ಶಿಕ್ಷಣ ಕ್ಷೇತ್ರದ ಸಮಸ್ಯೆಗಳ ಪರಿಹಾರಕ್ಕಾಗಿ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ವಿದ್ಯಾರ್ಥಿಗಳ ಸಭೆ ನಡೆಯಿತು.

## ರಸ್ತೆ ಅಪಘಾತದಲ್ಲಿ ಅಸುನೀಗಿದ ಕಾರ್ಮಿಕ ಮುಖಂಡ ಚಿಕ್ಕೇಗೌಡ ಕುಟುಂಬಕ್ಕೆ ನೆರವು



ಕರ್ನಾಟಕ ರಾಜ್ಯ ಶ್ರಮಿಕರ ರಕ್ಷಕ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸಂಘದಿಂದ ಆರ್ಥಿಕ ಸಹಾಯದ ಚೆಕ್ ವಿತರಣೆ ಮಾಡಲಾಯಿತು.

ಮೈಸೂರು, ಅ.27(ಎಂಕೆ)– ಇತ್ತೀಚೆಗೆ ರಸ್ತೆ ಅಪಘಾತದಿಂದ ನಿಧನರಾದ ನಂಜನಗೂಡು ತಾಲೂಕಿನ ಅಹಲ್ಯ ಗ್ರಾಮದ ನಿವಾಸಿ, ಕರ್ನಾಟಕ ರಾಜ್ಯ ಶ್ರಮಿಕರ ರಕ್ಷಕ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸಂಘ ಸದಸ್ಯ ಚಿಕ್ಕೇಗೌಡ ಅವರ ಕುಟುಂಬಕ್ಕೆ ಸಂಘದ ವತಿಯಿಂದ ಆರ್ಥಿಕ ಸಹಾಯ ಮಾಡಲಾಯಿತು.

ಅಹಲ್ಯ ಗ್ರಾಮಕ್ಕೆ ಭಾನುವಾರ(ಅ.26) ಭೇಟಿ ನೀಡಿದ ಕರ್ನಾಟಕ ರಾಜ್ಯ ಶ್ರಮಿಕರ ರಕ್ಷಕ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ಹೆಚ್.ಜಿ.ಲೋಕೇಶ್, ಸಹಾಯಧನದ ಚೆಕ್ ಅನ್ನು ಚಿಕ್ಕೇಗೌಡ ಅವರ ಕುಟುಂಬಸ್ಥರಿಗೆ ಹಸ್ತಾಂತರಿಸಿ, ಸಾಂತ್ವನ ಹೇಳಿದರು.

ಸಂಘದ ಉಪಾಧ್ಯಕ್ಷ ಆರ್.ನಾಗ ರಾಜು, ಕಾರ್ಯದರ್ಶಿ ಆರ್.ಚಂದ್ರಶೇಖರ್, ಖಜಾಂಚಿ ಕೆ.ಜಿ.ಶ್ರೀನಿವಾಸ, ಲೆಕ್ಕ ಪರಿಶೋಧಕ ವಾಸಿಮ್ ಖಾನ್, ನಿರ್ದೇಶಕರಾದ ಎಂ.ಸಿದ್ದರಾಜು, ಎಂ.ರಾಘವೇಂದ್ರ, ಸೈಯದ್ ಇಮ್ರಾನ್, ಸಿ.ನಾಗೇಗೌಡ, ಎಂ.ಚಂದ್ರಶೇಖರ್, ಕುಮಾರ್, ಜೆ.ರವಿ ಮತ್ತಿತರರಿದ್ದರು.

# ಗ್ಯಾಸ್ ಸೋರಿಕೆಯಿಂದ ಗಾಯಗೊಂಡಿದ್ದ ಪತ್ನಿ ಸಾವು, ಐಸಿಯುನಲ್ಲಿ ಪತಿಗೆ ಚಿಕಿತ್ಸೆ



ಹುಣಸೂರು, ಅ.27– ನಗರದಲ್ಲಿ ಕಳೆದ ಐದು ದಿನಗಳ ಹಿಂದೆ ಅಡುಗೆ ಅನಿಲ ಸೋರಿಕೆಯಿಂದಾಗಿ ಸುಟ್ಟಗಾಯವಾಗಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ದಂಪತಿ ಪೈಕಿ ಪತ್ನಿ ಸಾವನ್ನಪ್ಪಿದ್ದು, ಪತಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆ ಯುತ್ತಿದ್ದಾರೆ. ನಗರದ ವೀರಾಂಜನೇಯ ಬಡಾವಣೆ ನಿವಾಸಿ, ಪಿರಿಯಾಪಟ್ಟಣ ತಾಲೂಕಿನ ಕಿತ್ತೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ ಕುಮಾರ್ ಅವರ ಪತ್ನಿ ಶೋಭಾ(42) ಮೃತಪಟ್ಟವರು.

ಅ.23ರಂದು ಅಡುಗೆ ಮಾಡುತ್ತಿದ್ದ ವೇಳೆ ಗ್ಯಾಸ್ ಸೋರಿಕೆಯಾಗಿ ಮನೆಯಲ್ಲಿ ಪದಾರ್ಥಗಳಿಗೆ ಒಮ್ಮೆಲೆ ಬೆಂಕಿ ಹತ್ತಿಕೊಂಡು ಇಡೀ ಮನೆ ಆವರಿಸಿದ್ದು, ಪತಿ ಕುಮಾರ್ ರಕ್ಷಿಸಲು ಹೋಗಿ ಅವರು ಸಹ ತೀವ್ರ ಗಾಯಗೊಂಡಿದ್ದರು. ಇಬ್ಬರೂ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಅ.27ರ ಸೋಮವಾರ ಚಿಕಿತ್ಸೆ ಫಲಕಾರಿಯಾಗದೆ ಶೋಭಾ ಸಾವನ್ನಪ್ಪಿದ್ದಾರೆ.

ಪತಿ ಕುಮಾರ್ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬೆಂಕಿಯ ತೀವ್ರತೆಗೆ ಮನೆಯ ಗೋಡೆಗಳು ಬಿರುಕು ಬಿಟ್ಟಿದೆ.

# ಬಿಲ್ಡರ್ಸ್ ಕರೋಕೆ ಕ್ಲಬ್‌ನಿಂದ ಚಿತ್ರಗೀತೆಗಳ ಗಾಯನ

## ಶ್ರೋತೃಗಳನ್ನು ರಂಜಿಸಿದ 10 ಹವ್ಯಾಸಿ ಗಾಯಕರು ; ಮನಸೋತ ಸಭಿಕರು



ಗಾಯನ ಪ್ರಸ್ತುತಪಡಿಸಿದ ಹವ್ಯಾಸಿ ಗಾಯಕರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಅ.27(ಪಿಎಂ)– ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕ ಹಾಗೂ ಬಿಲ್ಡರ್ಸ್ ಕರೋಕೆ ಕ್ಲಬ್ ವತಿಯಿಂದ 'ರಾಗ ಅನುರಾಗ' ಶೀರ್ಷಿಕೆಯಡಿ ಭಾನುವಾರ ಜನಪ್ರಿಯ ಹಳೆಯ ಕನ್ನಡ ಹಾಗೂ ಹಿಂದಿ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ನಡೆಯಿತು.

ಮೈಸೂರಿನ ವಿಶ್ವೇಶ್ವರನಗರದ ಅಕ್ಕಮಹಾದೇವಿ ರಸ್ತೆಯಲ್ಲಿರುವ ಎಂಬಿಸಿಟಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ 10 ಮಂದಿ ಹವ್ಯಾಸಿ ಗಾಯಕರು ಸುಶ್ರಾವ್ಯವಾಗಿ ಗೀತೆಗಳನ್ನು ಸಾದರಪಡಿಸಿ ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿದರು.

ಉಮೇಶ್ ಮತ್ತು ತಂಡದಿಂದ 'ಕಣ್ತೆರೆದು ನೋಡು' ಚಿತ್ರದ 'ಕನ್ನಡದ ಮಕ್ಕಳೆಲ್ಲಾ ಒಂದಾಗಿ ಬನ್ನಿ...' ಗೀತೆಯೊಂದಿಗೆ ಆರಂಭವಾದ ಕಾರ್ಯಕ್ರಮವು 30ಕ್ಕೂ ಹೆಚ್ಚು ಗೀತೆಗಳ ಮೂಲಕ ನೆರೆದವರ ಮನತಣಿಸಿತು. 'ಹರಿ ಓಂ ಹರಿ' ಗೀತೆ ಮೂಲಕ ಅನುಪಮಾ ಶ್ರೀರಾಮ್ ಸಭಿಕರ ಮನಸೂರೆಗೊಂಡರು. ಉಮೇಶ್ ಪ್ರಸ್ತುತಪಡಿಸಿದ 'ನಿನ್ನ ನನ್ನ ಮನವು ಒಂದಾಯಿತು...', ಪ್ರಶಾಂತ್ ಸಾದರಪಡಿಸಿದ 'ತುತ್ತು ಅನ್ನ ತಿನ್ನೋಕೆ...' ಗೀತೆಗಳಿಗೆ ಸಭಿಕರು ತಾಳ ಹಾಕಿ ಸಂಭ್ರಮಿಸಿದರು.

'ಬೆಳ್ಳಿ ಮೂಡಿತೋ ಕೋಳಿ ಕೂಗಿತೋ...' ಗೀತೆಯನ್ನು ಬಾಲಾಜಿ, 'ಬಾಳ ಬಂಗಾರ ನೀನು...', ಗೀತೆಯನ್ನು ವಿಮಲಾ ವೀರೇಶ್ ಸಾದರಪಡಿಸಿ ಸಭಿಕರ ಚಪ್ಪಾಳೆ ಗಿಟ್ಟಿಸಿದರು. ಅಲ್ಲದೆ, ವಿನೋದ್ ಕುಮಾರ್, ವೇದಾ ದಿನೇಶ್, ರೂಪಶ್ರೀ, ರೇಖಾ ರವಿಪ್ರಕಾಶ್, ಚೇತನ ರಮೇಶ್ ಅವರು ವಿವಿಧ ಹಾಡುಗಳನ್ನು ಪ್ರಸ್ತುತಪಡಿಸಿ ಸಭಿಕರ ರಂಜಿಸಿದರು.

ಇದಕ್ಕೂ ಮುನ್ನ ಕರ್ನಾಟಕ ಸುಗಮ ಸಂಗೀತ ಪರಿಷತ್‌ನ ಮೈಸೂರು ಅಧ್ಯಕ್ಷ ನಾಗರಾಜ್ ವಿ.ಬೈರಿ ಅವರನ್ನು ಪರಿಷತ್ತಿನ ಬೆಳವಣಿಗೆಗೆ ನೀಡಿದ ಕೊಡುಗೆಗಾಗಿ ಸನ್ಮಾನಿಸಲಾಯಿತು. ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕದ ಮಾಜಿ ಅಧ್ಯಕ್ಷರಾದ ದಿನೇಶ್ ಬಸವಪಟ್ಟಣ, ಶ್ರೀರಾಮ್, ಮಲ್ಲಿಕಾರ್ಜುನ್, ಖ್ಯಾತ ಗಾಯಕಿ ರಶ್ಮಿ ಚಿಕ್ಕಮಗಳೂರು, ಹಿಂದುಸ್ತಾನಿ ಗಾಯಕ ವೀರಭದ್ರಯ್ಯ ಹಿರೇಮಠ್, ಸರಿಗಮಪ ರಿಯಾಲಿಟಿ ಶೋ ತೀರ್ಪುಗಾರ ಮಹೇಂದ್ರ, ಗಾಯಕ ಶ್ರೀಯುತ ತ್ಯಾಗರಾಜ್ ಹಾಜರಿದ್ದರು. ಸಂಧ್ಯಾ ದಿನೇಶ್ ಮತ್ತು ವಿಜಯ ಪಾಳೆಗಾರ್ ಕಾರ್ಯಕ್ರಮ ನಿರೂಪಿಸಿದರು.

# ಅತ್ಯಾಚಾರ ಆರೋಪ; ಡಿಜೆ ಹಳ್ಳಿ ಇನ್ಸ್‌ಪೆಕ್ಟರ್ ಸುನೀಲ್ ಅಮಾನತು!



ಸುನೀಲ್

**ಬೆಂಗಳೂರು:** ಅತ್ಯಾಚಾರ ಮತ್ತು ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಡಿ.ಜೆ ಹಳ್ಳಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸುನೀಲ್‌ರನ್ನು ಅಮಾನತು ಮಾಡಲಾಗಿದೆ. 36 ವರ್ಷದ ಮಹಿಳೆಯೊಬ್ಬರು ನನ್ನನ್ನು ಮದುವೆಯಾಗುವುದಾಗಿ ನಂಬಿಸಿ ನನ್ನನ್ನು ಲೈಂಗಿಕವಾಗಿ ಬಳಸಿಕೊಂಡಿದ್ದಾರೆ ಎಂದು ಆರೋಪಿಸಿ ಈ ಸಂಬಂಧ ಡಿಜಿ ಮತ್ತು ಐಜಿಪಿ ಕಚೇರಿಗೂ ದೂರು ನೀಡಿದ್ದರು.

ಹಣದ ಮೋಸದ ವಿಚಾರಕ್ಕೆ ಠಾಣೆಗೆ ಬಂದಿದ್ದ 36 ವರ್ಷದ ಮಹಿಳೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡ ಸುನೀಲ್ ರಿಜಿಸ್ಟರ್ ಮದುವೆಯಾಗುವುದಾಗಿ ಭರವಸೆ ನೀಡಿದ್ದರು. ನಂತರ 1 ವರ್ಷದಲ್ಲಿ 3 ಬಾರಿ ನನ್ನನ್ನು ಲೈಂಗಿಕವಾಗಿ ಬಳಸಿಕೊಂಡಿದ್ದಾರೆ. ಅಲ್ಲದೇ ಖಾಸಗಿ ಫೋಟೋ, ವಿಡಿಯೋ ಇಟ್ಟುಕೊಂಡು ನಮ್ಮ ವಿಚಾರ ಯಾರಿಗಾದರೂ ಹೇಳಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ ಎಂದು ಮಹಿಳೆ ಆರೋಪಿಸಿದ್ದರು.



## ನಿಧನ



ಸ್ಟೆಲ್ಲಾ ಕುಮಾರಿ
ನಿವೃತ್ತ ಶಿಕ್ಷಕಿ–ಸರ್ಕಾರಿ ಶಾಲೆ, ಮೈಸೂರು
ನಿಧನ: 27–10–2025
ಅಂತ್ಯಕ್ರಿಯೆ:– ದಿನಾಂಕ: 28–10–2025
ಸಿ.ಎಸ್.ಐ. ರುದ್ರಭೂಮಿ,
ಉದಯಗಿರಿ ರಸ್ತೆ, ಮೈಸೂರು
ಸಮಯ: ಬೆಳಗ್ಗೆ 10.00 ಗಂಟೆಗೆ

## ಉಮ್ಮತ್ತೂರು ಗ್ರಾಮ ಪಂಚಾಯಿತಿ ಕಾರ್ಯಾಲಯ

ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ ದಿನಾಂಕ :24–10–2025

ವಿಷಯ :– ಸಾರ್ವಜನಿಕ ಮಾಹಿತಿಗಾಗಿ ಶಾಲಾ ಕಟ್ಟಡ ನಿರ್ಮಿಸಲು ಅನುಮತಿ ನೀಡುವ ಕುರಿತು

ಉಲ್ಲೇಖ:– ಉಮ್ಮತ್ತೂರು ಗ್ರಾಮಪಂಚಾಯಿತಿ ಸಾಮಾನ್ಯ ಸಭೆಯ ನಿರ್ಣಯ ಸಂಖ್ಯೆ 13 ದಿನಾಂಕ :14–10–2025

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಉಮ್ಮತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಭೂ ಪರಿವರ್ತಿತ ಆಸ್ತಿ ಸಂಖ್ಯೆ 150800103200221290 (ಸರ್ವೇ ನಂಬರ್ 293) ಆಸ್ತಿ ವಿಸ್ತೀರ್ಣ 4441.50 ರಲ್ಲಿ ಮಲ್ಲು ಬಿನ್ ಗುರುಮಲ್ಲಪ್ಪರವರು ಶಾಲೆ ಕಟ್ಟಡ ನಿರ್ಮಿಸಲು ಉದ್ದೇಶಿಸಿದ್ದು ಉಲ್ಲೇಖ 1 ರ ಸಾಮಾನ್ಯ ಸಭೆಯಲ್ಲಿ ಸದರಿ ವಿಷಯವಾಗಿ ಕಟ್ಟಡ ನಿರ್ಮಿಸಲು ಅನುಮತಿ ಕೋರಿ ಅರ್ಜಿ ಮಂಡಿಸಲಾಗಿ ನಿಯಮಾನುಸಾರ ಅನುಮತಿ ನೀಡಲು ಅನುಮೋದನೆ ಪಡೆಯಲಾಗಿರುತ್ತದೆ. ಸದರಿ ಶಾಲಾ ಕಟ್ಟಡ ನಿರ್ಮಿಸಲು ಸಾರ್ವಜನಿಕ ಆಕ್ಷೇಪಣೆ ಇದ್ದಲ್ಲಿ 15 ದಿನಗಳ ಒಳಗೆ ಆಕ್ಷೇಪಣೆ ಸಲ್ಲಿಸಲು ತಿಳಿಯಪಡಿಸಿದೆ.

ಕಛೇರಿ ವಿಳಾಸ: ಉಮ್ಮತ್ತೂರು ಗ್ರಾಮ ಮತ್ತು ಅಂಚೆ 571316, ಚಾಮರಾಜನಗರ ತಾಲ್ಲೂಕು & ಜಿಲ್ಲೆ.

ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಉಮ್ಮತ್ತೂರು ಗ್ರಾಮ ಪಂಚಾಯಿತಿ. ಚಾಮರಾಜನಗರ ತಾಲ್ಲೂಕು & ಜಿಲ್ಲೆ



## ನಾಲ್ಕನೇ ವರ್ಷದ ಪುಣ್ಯಸ್ಮರಣೆ

ನಿಮ್ಮ ಒಡನಾಟದ ಕ್ಷಣಗಳನ್ನು ನೆನಪಿಸಿಕೊಳ್ಳುವ ಹಾಗೂ ನಿಮ್ಮ ಮಾತುಗಳು ಯಾವಾಗಲೂ ಶಾಶ್ವತವಾಗಿ ನಮ್ಮ ಹೃದಯದಲ್ಲಿ ನೆಲೆಸಿವೆ.

ಶ್ರೀಮತಿ ಜೆ.ರೋಜ
(ರೋಜಲಿನ್ ಮೇರಿ ಜೆ.)
ನಿಧನ: 28–10–2021

ನಿಮ್ಮ ನೆನಪಿನಲ್ಲಿರುವ
ಗಂಡ: ಶ್ರೀ ಶಿವಸ್ವಾಮಿ, ಮಗಳು: ಭುವನಶ್ರೀ,
ಅತ್ತೆ ಹಾಗೂ ಮೈದುನರು–ಕುಟುಂಬವರ್ಗದವರು

## IN LOVING MEMORY



**Dr. B. V. Rajagopal**
B.Sc., M.D., FICP, FICC, FIAMS

*Attained the Divine Realm at the age of 88. He is lovingly remembered by his children Kalpana, Sandeep, Dilip and Laxmi with their families and his five grandchildren, and reunited with his beloved Late wife, Smt. Lalitha Rajagopal.*



## Fond Remembrance



Late Smt. M. S. Lalitha Kumari
28th October 2024
"YOU LEFT US ALONE"
Deeply Mourned by :
Vasanth Kumar Mysoremath, Sons, Daughters-in-law, Grand children & Great grand children, Relatives & Friends,Tilak Nagar, Mysuru

## 4th year remembering missing you papa...



"He heals the broken hearted & binds up their wounds" - Psalm 147:3

We remember you
in the morning, in the night,
when we look at the stars,
a song, a place, in a prayer.
You are always with us.

Sunanda Raj
Date of Birth : 22.07.1958
Demise : 28.10.2021

Yours grieving daughters
Ramya . S and Vinutha. S and family



## ಸಾರ್ವಜನಿಕ ತಿಳುವಳಿಕೆ ಪತ್ರ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ಕಾಣಿಸಿರುವ ಅನುಸೂಚಿ ಸ್ವತ್ತನ್ನು ಅನುಸೂಚಿ ಸ್ವತ್ತಿನ ಮಾಲೀಕರಾದ ಮೈಸೂರು ನಗರ, ಬೋಗಾದಿ 2ನೇ ಹಂತ 4ನೇ ಕ್ರಾಸ್, 3ನೇ ಮೇನ್, ಸಿ.ಎಫ್.ಟಿ.ಆರ್.ಐ ಬಡಾವಣೆಯ ಮನೆ ಸಂಖ್ಯೆ: 150 ರಲ್ಲಿ ವಾಸವಾಗಿರುವ ಶ್ರೀ.ರಾಮೇಗೌಡರವರ ಮಗ ಶ್ರೀ.ರವಿ.ಆರ್. ರವರಿಂದ ಅನುಸೂಚಿ ಸ್ವತ್ತನ್ನು ಶುದ್ಧ ಕ್ರಯಕ್ಕೆ ಖರೀದಿಸಲು ಮುಂದಾಗಿರುವುದು ಸರಿಯಷ್ಟೆ. ಅನುಸೂಚಿ ಸ್ವತ್ತಿನ ಸಂಬಂಧ ಯಾರಾದರು ಅಧಿಕಾರ ಪತ್ರ ಹೊಂದಿದ್ದಲ್ಲಿ ಅಥವಾ ಯಾರಿಗಾದರು. ಹಕ್ಕು. ಅಸಕ್ತಿ, ಕ್ಲೇಮ್. ಆಧಾರ. ಸಾಲ ಬಾಕಿ. ಇತರೆ ತಂಟೆ ತಕಾರರು ಇದ್ದಲ್ಲಿ, ಅವರು ಖುದ್ದಾಗಿ ಸದರಿ ಸ್ವತ್ತಿಗೆ ಸಂಬಂದಿಸಿದ ಅಸಲಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 07 (ಏಳು) ದಿನಗಳ ಒಳಗೆ ಕೆಳಕಂಡ ನಮ್ಮ ಕಛೇರಿಯನ್ನು ಅಸಲು ದಾಖಲಾತಿಗಳೊಂದಿಗೆ ಸಂಪರ್ಕಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ಸ್ವತ್ತಿನ ಸಂಬಂಧ ಯಾರೂ ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಅಸಕ್ತಿ, ಕ್ಲೇಮ್. ಆಧಾರ, ಸಾಲ ಬಾಕಿ. ಇರುವುದಿಲ್ಲಾ ಎಂದು ಪರಿಗಣಿಸಿ ನಮ್ಮ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಶುದ್ಧ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು.

**ಅನುಸೂಚಿ ಸ್ವತ್ತಿನ ವಿವರ**

ಐಟಂ1: ಮೈಸೂರು ತಾಲ್ಲೂಕು ಜಯಪುರ ಹೋಬಳಿ ಗುಜ್ಜೇಗೌಡನ ಗ್ರಾಮದ ಸರ್ವೆ ಸಂಖ್ಯೆ: 21/2 ರಲ್ಲಿರುವ ಒಟ್ಟು ವಿಸ್ತೀರ್ಣ 0.38.00.00 (ಮೂವತ್ತೇಂಟು ಗುಂಟೆ) ಜಮೀನೆಗೆ ಚಕ್ಕುಬಂದಿ:– ಪೂರ್ವಕ್ಕೆ: ಸರ್ವೆ ನಂ: 21/1. ಪಶ್ಚಿಮಕ್ಕೆ: ಸರ್ವೆ ನಂ: 21/3. ಉತ್ತರಕ್ಕೆ: ಲಾ.ಸ.ನಂ: 20, ದಕ್ಷಿಣಕ್ಕೆ: ಲಾ. ಸ. ನಂ: 94. ನೀರಿನ ಹಳ್ಳ ಹಾಗು ಗ್ರಾಮದ ಗಡಿ.

ಐಟಂ2: ಮೈಸೂರು ತಾಲ್ಲೂಕು ಜಯಪುರ ಹೋಬಳಿ ಗುಜ್ಜೇಗೌಡನ ಗ್ರಾಮದ ಸರ್ವೆ ಸಂಖ್ಯೆ: 21/3 ರಲ್ಲಿರುವ ಒಟ್ಟು ವಿಸ್ತೀರ್ಣ 0.38.00.00 (ಮೂವತ್ತೇಂಟು ಗುಂಟೆ) ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಸರ್ವೆ ನಂ: 21/2, ಪಶ್ಚಿಮಕ್ಕೆ: ಸರ್ವೆ ನಂ: 21/4. ಉತ್ತರಕ್ಕೆ: ಲಾ.ಸ.ನಂ: 20, ದಕ್ಷಿಣಕ್ಕೆ: ನೀರಿನ ಹಳ್ಳ ಹಾಗು ಗ್ರಾಮದ ಗಡಿ

Sd/- Chandrashekar H.N.
Advocate, KAR 427/2001,Chambers: 390/E, 1st Floor, 4th Main, Maruthi Temple Road, Kuvempunagar, Mysuru-570023.
Date: 27-10-2025 Mob: 9740399992

## ಸಾರ್ವಜನಿಕ ತಿಳುವಳಿಕೆ ಪತ್ರ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ಕಾಣಿಸಿರುವ ಅನುಸೂಚಿ ಸ್ವತ್ತನ್ನು ಅನುಸೂಚಿ ಸ್ವತ್ತಿನ ಮಾಲೀಕರಾದ ಮೈಸೂರು ನಗರ, ಗಾಯತ್ರಿಪುರಂ 2ನೇ ಹಂತ ಮನೆ ಸಂಖ್ಯೆ: 286 ರಲ್ಲಿ ವಾಸವಾಗಿರುವ ಶ್ರೀ ಸಣ್ಣೇಗೌಡರ ಮಗ ಶ್ರೀ ಇಂದ್ರ ಎಸ್. ರವರಿಂದ ಅನುಸೂಚಿ ಸ್ವತ್ತನ್ನು ಶುದ್ಧ ಕ್ರಯಕ್ಕೆ ಖರೀದಿಸಲು ಮುಂದಾಗಿರುವುದು ಸರಿಯಷ್ಟೆ. ಅನುಸೂಚಿ ಸ್ವತ್ತಿನ ಸಂಬಂಧ ಯಾರಾದರು ಅಧಿಕಾರ ಪತ್ರ ಹೊಂದಿದ್ದಲ್ಲಿ ಅಥವಾ ಯಾರಿಗಾದರು. ಹಕ್ಕು, ಆಸಕ್ತಿ, ಕ್ಲೇಮ್, ಆಧಾರ, ಸಾಲ ಬಾಕಿ. ಇತರೆ ತಂಟೆ ತಕಾರರು ಇದ್ದಲ್ಲ, ಅವರು ಖುದ್ದಾಗಿ ಸದರಿ ಸ್ವತ್ತಿಗೆ ಸಂಬಂದಿಸಿದ ಅಸಲಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 07 (ಏಳು) ದಿನಗಳ ಒಳಗೆ ಕೆಳಕಂಡ ನಮ್ಮ ಕಛೇರಿಯನ್ನು ಅಸಲು ದಾಖಲಾತಿಗಳೊಂದಿಗೆ ಸಂಪರ್ಕಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ಸ್ವತ್ತಿನ ಸಂಬಂಧ ಯಾರೂ ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಕ್ಲೇಮ್, ಆಧಾರ, ಸಾಲ ಬಾಕಿ, ಇರುವುದಿಲ್ಲಾ ಎಂದು ಪರಿಗಣಿಸಿ ನಮ್ಮ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಶುದ್ಧ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು.

**ಅನುಸೂಚಿ ಸ್ವತ್ತಿನ ವಿವರ**

ಮೈಸೂರು ತಾಲ್ಲೂಕು ಜಯಪುರ ಹೋಬಳಿ ಗುಜ್ಜೇಗೌಡನ ಗ್ರಾಮದ ಸರ್ವೆ ಸಂಖ್ಯೆ: 21/4 ರಲ್ಲಿರುವ ಒಟ್ಟು ವಿಸ್ತೀರ್ಣ 0.39.00.00 (ಮೂವತ್ತೊಂಬತ್ತು ಗುಂಟೆ) ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ: 21/3 ; ಪಶ್ಚಿಮಕ್ಕೆ: ಸರ್ವೆ ನಂ: 21/5 ; ಉತ್ತರಕ್ಕೆ: ಲಾ.ಸ. ನಂ: 20 ; ದಕ್ಷಿಣಕ್ಕೆ: ನೀರಿನ ಹಳ್ಳ ಹಾಗೂ ಗ್ರಾಮದ ಗಡಿ.

Sd/- Chandrashekar H.N.
Advocate, KAR 427/2001, Chambers: 390/E, 1st Floor, 4th Main, Maruthi Temple Road, Kuvempunagar, Mysuru-570023. Mob: 9740399992
Date: 27-10-2025

## ಸಾರ್ವಜನಿಕ ತಿಳುವಳಿಕೆ ಪತ್ರ


ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ಕಾಣಿಸಿರುವ ಅನುಸೂಚಿ ಸ್ವತ್ತನ್ನು ಅನುಸೂಚಿ ಸ್ವತ್ತಿನ ಮಾಲೀಕರಾದ ಮೈಸೂರು ನಗರ, ಗಾಯತ್ರಿಪುರಂ 2ನೇ ಹಂತ, 'ಕಾಳಭೈರೇಶ್ವರ' ಮನೆ ಸಂಖ್ಯೆ: 286 ರಲ್ಲಿ ವಾಸವಾಗಿರುವ ಶ್ರೀ.ಇಂದ್ರ.ಎಸ್.ರವರ ಧರ್ಮಪತ್ನಿ ಶ್ರೀಮತಿ ಪ್ರತಿಮ.ಎ.ಜಿ. ರವರಿಂದ ಅನುಸೂಚಿ ಸ್ವತ್ತನ್ನು ಶುದ್ಧ ಕ್ರಯಕ್ಕೆ ಖರೀದಿಸಲು ಮುಂದಾಗಿರುವುದು ಸರಿಯಷ್ಟೆ. ಅನುಸೂಚಿ ಸ್ವತ್ತಿನ ಸಂಬಂಧ ಯಾರಾದರು ಅಧಿಕಾರ ಪತ್ರ ಹೊಂದಿದ್ದಲ್ಲಿ ಅಥವಾ ಯಾರಿಗಾದರು, ಹಕ್ಕು, ಆಸಕ್ತಿ, ಕ್ಲೇಮ್, ಆಧಾರ, ಸಾಲ ಬಾಕಿ, ಇತರೆ ತಂಟೆ ತಕಾರರು ಇದ್ದಲ್ಲಿ, ಅವರು ಖುದ್ದಾಗಿ ಸದರಿ ಸ್ವತ್ತಿಗೆ ಸಂಬಂಧಿಸಿದ ಅಸಲಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 07 (ಏಳು) ದಿನಗಳ ಒಳಗೆ ಕೆಳಕಂಡ ನಮ್ಮ ಕಛೇರಿಯನ್ನು ಅಸಲು ದಾಖಲಾತಿಗಳೊಂದಿಗೆ ಸಂಪರ್ಕಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ಸ್ವತ್ತಿನ ಸಂಬಂಧ ಯಾರೂ ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಅಸಕ್ತಿ, ಕ್ಲೇಮ್, ಆಧಾರ, ಸಾಲ ಬಾಕಿ, ಇರುವುದಿಲ್ಲ ಎಂದು ಪರಿಗಣಿಸಿ ನಮ್ಮ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಶುದ್ಧ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು.

**ಅನುಸೂಚಿ ಸ್ವತ್ತಿನ ವಿವರ**

ಮೈಸೂರು ತಾಲ್ಲೂಕು ಜಯಪುರ ಹೋಬಳಿ ಗುಜ್ಜೇಗೌಡನ ಗ್ರಾಮದ ಸರ್ವೆ ಸಂಖ್ಯೆ: 21/5 ರಲ್ಲಿರುವ ಒಟ್ಟು ವಿಸ್ತೀರ್ಣ 0.38.00.00 (ಮೂವತ್ತೆಂಟು ಗುಂಟೆ) ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಸರ್ವೆ ನಂ: 21/4 ; ಪಶ್ಚಿಮಕ್ಕೆ: ಲಾ.ಸ.ನಂ: 22 ; ಉತ್ತರಕ್ಕೆ: ಲಾ.ಸ.ನಂ: 20 ; ದಕ್ಷಿಣಕ್ಕೆ: ನೀರಿನ ಹಳ್ಳ ಹಾಗೂ ಗ್ರಾಮದ ಗಡಿ.

Sd/- Chandrashekar H.N.
Advocate, KAR 427/2001, Chambers: 390/E, 1st Floor, 4th Main, Maruthi Temple Road, Kuvempunagar, Mysuru-570023. Mob: 9740399992
Date: 27-10-2025

## ಮೂರನೇ ವರ್ಷದ ಸವಿನೆನಪು



ದಿ|| ಶ್ರೀ. ನಂಜುಂಡೇಗೌಡರು
ಜನನ:12.08.1937 - ನಿಧನ: 28.10.2022
ನಿವೃತ್ತ ಡಿವೈ.ಎಸ್‌ಪಿ ಹಾಗೂ ಮಾಜಿ ಅಧ್ಯಕ್ಷರು,
ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘ (ನಿ) ನೇತಾಜಿನಗರ, ಮೈಸೂರು

ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ
ಶ್ರೀ ಟಿ.ಎನ್. ನಾಗೇಶ್, ಅಧ್ಯಕ್ಷರು
ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘ (ನಿ)
ನೇತಾಜಿನಗರ, ಮೈಸೂರು
ಶ್ರೀ ಟಿ.ಎನ್. ಶಶಿಕುಮಾರ್, ಅಧ್ಯಕ್ಷರು
ನೇತಾಜಿ ಗೃಹನಿರ್ಮಾಣ ಸಹಕಾರ ಸಂಘ, (ನಿ) ಸಿದ್ಧಾರ್ಥನಗರ, ಮೈಸೂರು
ಹಾಗೂ ಬಂಧುಮಿತ್ರರು